ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಪ್ಲಾಟಿನಂ ಜ್ಯೂಬಿಲಿ
ನೆನಪಿನ ದತ್ತಿ ಪ್ರಕಟಣೆ

ಸಹಕಾರ ಚಳುವಳಿ

ಕೆ. ಶಿವಚಿತ್ತಪ್ಪ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮

BVP-1211-27/2/17
1195-(5)

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಪ್ಲಾಟಿನಂ ಜ್ಯೂಬಿಲಿ
ನೆನಪಿನ ದತ್ತಿ ಪ್ರಕಟಣೆ

ಸಹಕಾರ ಚಳುವಳಿ

ಕೆ. ಶಿವಚಿತ್ತಪ್ಪ

ಶುಭವಾಗಲಿ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

SAHAKAARA CHALUVALI
by : Sri K. Shivachittappa
Published by : Kannada Sahitya Parishat
Pampa Mahakavi Road, Chamarajapet, Bangalore - 560018
Pages : 63+vi Price : Rs. 25=00 : 2004

ಪ್ರಥಮ ಮುದ್ರಣ : ೨೦೦೪
ಪ್ರತಿಗಳು : ೧೦೦೦
ಬೆಲೆ : ಇಪ್ಪತ್ತೈದು ರೂಪಾಯಿಗಳು

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಪ್ಲಾಟಿನಂ ಜ್ಯೂಬಿಲಿ
ನೆನಪಿನ ದತ್ತಿ ಪ್ರಕಟಣೆ

ಅಧ್ಯಕ್ಷರು

ಧರ್ಮದರ್ಶಿ ಹರಿಕೃಷ್ಣ ಪುನರೂರು

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಭಾಷೆ, ಸಂಸ್ಕೃತಿ, ನಾಡು-ನುಡಿಯ ಸಂರಕ್ಷಣೆ, ಸಂವರ್ಧನೆಗಾಗಿ ಶ್ರಮಿಸುತ್ತಿರುವ ಏಕೈಕ ಸಂಸ್ಥೆ. ಸುಮಾರು ೮೯ ವರ್ಷಗಳ ದೀರ್ಘಕಾಲದ ಇತಿಹಾಸ ಹೊಂದಿರುವ ಪರಿಷತ್ತು ಅನೇಕ ಸಾಹಿತ್ಯ ಕೃತಿಗಳ ಪ್ರಕಟಣಕಾರ್ಯ ಪ್ರಧಾನವಾದುದಾಗಿದೆ. ಈ ಹಿಂದಿನ ಹಲವಾರು ಮಹನೀಯರ ಪ್ರಯತ್ನದ ಫಲವಾಗಿ ಸುಮಾರು ೧೦೦೦ಕ್ಕೂ ಹೆಚ್ಚು ಕೃತಿಗಳನ್ನು ಪರಿಷತ್ತು ಹೊರತಂದಿದೆ. ಈ ಕೃತಿಗಳು ಸಾಹಿತ್ಯ ಕ್ಷೇತ್ರದ ಎಲ್ಲ ಪ್ರಕಾರಗಳಿಗೂ ಸಂಬಂಧಿಸಿವೆ.

ಕನ್ನಡ ಜನತೆಗೆ ಉತ್ತಮ ಸಾಹಿತ್ಯವನ್ನು ನೀಡುವ ಸಲುವಾಗಿ ಅತ್ಯಂತ ಸುಲಭ ಬೆಲೆಯಲ್ಲಿ ಈ ಪುಸ್ತಕಗಳನ್ನು ಒದಗಿಸಲಾಗಿದೆ. ಸಾಹಿತ್ಯಾಭಿಮಾನಿಗಳ ವಾಚನಾಭಿರುಚಿಯನ್ನು ಬೆಳೆಸುವುದರ ಮೂಲಕ ಜ್ಞಾನ ಪ್ರಸಾರ ಮಾಡುವುದು ನಮ್ಮ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ. ಈ ದಿಕ್ಕಿನಲ್ಲಿ ಅನೇಕ ದಾನಿಗಳು ಉತ್ತಮ ವೈಚಾರಿಕ ಕೃತಿಗಳ ಪ್ರಕಟಣೆಗಾಗಿ ಪರಿಷತ್ತಿನಲ್ಲಿ ದತ್ತಿಗಳನ್ನು ಸ್ಥಾಪಿಸಿ, ಆ ದತ್ತಿಯ ಮೂಲದಿಂದ ಬರುವ ಬಡ್ಡಿಯ ಹಣದಿಂದ ಪ್ರತಿವರ್ಷವೂ ಒಂದೊಂದು ಅತ್ಯುಪಯುಕ್ತ ಗ್ರಂಥವೊಂದನ್ನು ಪ್ರಕಟಿಸುವುದಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

ಪ್ರಸ್ತುತ ಈ ಕೃತಿಯನ್ನು ಸಿದ್ಧಪಡಿಸಿರುವ ಶ್ರೀ ಕೆ.ಶಿವಚಿತ್ತಪ್ಪ ಅವರಿಗೆ ಧನ್ಯವಾದಗಳು. **'ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ಪ್ಲಾಟಿನಂ ಜ್ಯೂಬಿಲಿ ನೆನಪಿನ ದತ್ತಿ ಪ್ರಕಟಣೆ'** ನೆರವಿನಿಂದ ಪ್ರಕಟವಾಗಿದೆ. ಇವರಿಗೆ ನನ್ನ ಕೃತಜ್ಞತೆಗಳು. ಸಹೃದಯ ಓದುಗರು ಈ ಗ್ರಂಥವನ್ನು ಆದರದಿಂದ ಸ್ವೀಕರಿಸುತ್ತಾರೆಂದು ಆಶಿಸುತ್ತೇನೆ. ಅಚ್ಚುಕಟ್ಟಾಗಿ ಮುದ್ರಿಸಿದ ಮುದ್ರಣಾಲಯಕ್ಕೂ ಪ್ರೀತಿ ಪೂರ್ವಕ ವಂದನೆಗಳು.

ಧರ್ಮದರ್ಶಿ ಹರಿಕೃಷ್ಣ ಪುನರೂರು

ಅಧ್ಯಕ್ಷರು

ಅರಿಕೆ

ಸಹಜೀವನ, ಸಹಬಾಳ್ವೆ, ಸಹಕಾರ-ಪ್ರಸ್ತುತ ಇವುಗಳು ಜಗತ್ತನ್ನು ಒಗ್ಗೂಡಿಸುವ ವಿಶ್ವಮನೋಭಾವನೆಗಳಾಗಿವೆ. ಸಹಕಾರದ ಪ್ರಮುಖ ತತ್ವ ಪ್ರತಿಯೊಬ್ಬರಿಗೂ ಸಹಾಯಮಾಡುವುದು. ಅಂದರೆ 'ತಾನು ಪರರಿಗಾಗಿ-ಪರರು ತನಗಾಗಿ' ಎಂಬುದೇ ಇದರ ಮೂಲಮಂತ್ರ. ಆರ್ಥಿಕವಾಗಿ ದುರ್ಬಲರಾದವರನ್ನು ಸಬಲರನ್ನಾಗಿಸುವುದಕ್ಕಾಗಿ ಹುಟ್ಟಿಕೊಂಡದ್ದೇ 'ಸಹಕಾರ' ಉಳಿತಾಯ ಮನೋಭಾವ ವೃದ್ಧಿ, ಮಿತವ್ಯಯ, ಪರಸ್ಪರ ಸಹಿಷ್ಣತೆ, ಎಲ್ಲರ ಹಿತಕ್ಕಾಗಿ ದುಡಿಮೆ, ಸ್ವಯಂ ಪ್ರೇರಣೆಯಿಂದ ಕಾರ್ಯಪ್ರವೃತ್ತಿ ಮತ್ತು ಶೋಷಣೆಯಿಂದ ವಿಮುಕ್ತಿ ಇವುಗಳು ಸಹಕಾರದಿಂದ ದೊರೆಯುವ ಸುಗುಣಗಳು.

ಸಹಕಾರ ಚಳುವಳಿಯು ಗ್ರಾಮೀಣಾಭಿವೃದ್ಧಿಯ ಬುನಾದಿ. ಗ್ರಾಮೀಣಾಭಿವೃದ್ಧಿಯಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಏಕೆಂದರೆ ಭಾರತವು ಹಳ್ಳಿಗಳನಾಡು, ಹಳ್ಳಿಗಳ ಉದ್ಧಾರವೇ ದೇಶದ ಉದ್ಧಾರ. ಸಹಕಾರ ಚಳುವಳಿಯು ಆರ್ಥಿಕಾಭಿವೃದ್ಧಿ ಯೋಜನೆಗಳತ್ತ ಗಮನ ಹರಿಸುತ್ತದೆ. ಉತ್ಸಾಹಕ ಕಾರ್ಯಗಳಿಗೆ ಆದ್ಯತೆ ಕೊಡುವುದರಿಂದ ದೇಶದ ಆರ್ಥಿಕ ಪರಿಸ್ಥಿತಿಯು ಸುಧಾರಿಸಲ್ಪಡುತ್ತದೆ. ಹಾಗಾಗಿ ಪ್ರಸ್ತುತದ ಅಗತ್ಯಗಳಲ್ಲೊಂದಾದ ಸಹಕಾರ ಚಳುವಳಿಯ ಪ್ರಯೋಜನಗಳನ್ನು ಕುರಿತು ತಿಳಿದುಕೊಳ್ಳಲು ಕನ್ನಡದಲ್ಲಿ ಸಾಕಷ್ಟು ಮಾಹಿತಿ ಲಭ್ಯವಿರಲಿಲ್ಲ. ಸಹಕಾರ ಚಳುವಳಿಯ ಕುರಿತು ಕನ್ನಡದಲ್ಲಿ ಮಾಹಿತಿಯನ್ನು ಸಾರ್ವಜನಿಕರಿಗೆ ಒದಗಿಸಬೇಕೆಂಬ ನನ್ನ ಪ್ರಯತ್ನಕ್ಕೆ ಬೆನ್ನೆಲುಬಾಗಿ ನಿಂತು ಕನ್ನಡ ಸಾಹಿತ್ಯ ಪರಿಷತ್ತು ಈ ಪುಸ್ತಕವನ್ನು ಪ್ರಕಟಿಸಿದೆ. ಆದ್ದರಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ, ಕಾರ್ಯದರ್ಶಿಗಳಿಗೆ, ಸಿಬ್ಬಂದಿ ವರ್ಗದವರಿಗೆ ನನ್ನ ಹೃತ್ಪೂರ್ವಕ ವಂದನೆಗಳು ಸಲ್ಲುತ್ತವೆ. ಈ ಪುಸ್ತಕ ಸಾರ್ವಜನಿಕರಿಗೆ ಹಾಗೂ ಸಹಕಾರದ ಅಧ್ಯಯನದಲ್ಲಿ ಆಸಕ್ತಿಯುಳ್ಳ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಲಿದೆ ಎಂದು ಭಾವಿಸಿದ್ದೇನೆ.

ಕೆ.ಶಿವಚಿತ್ತಪ್ಪ

ಪರಿವಿಡಿ

ಪೀಠಿಕೆ

ಮಾನವನಿಗೆ ನಿಸರ್ಗವು ಸಹಬಾಳ್ವೆ, ಪರಸ್ಪರ ನಂಬಿಕೆ, ಸಹಾಯ ಮತ್ತು ಸಹಕಾರದ ಮೂಲಪಾಠವನ್ನು ಹೇಳಿಕೊಡುವುದು. ಬಹುಶಃ ಜೇನುನೊಣಗಳು ಮತ್ತು ಇರುವೆ ಮುಂತಾದ ಜೀವಿಗಳ ಸಂಘಜೀವನವು ಸಹಕಾರಕ್ಕೆ ಮೂಲ ಕಾರಣವಾಗಿರಬಹುದು. 'ನಾನು ಎಲ್ಲರಿಗಾಗಿ ಮತ್ತು ಎಲ್ಲರೂ ನನಗಾಗಿ' (All for one and one for all) ಎಂಬ ತತ್ವದ ಆಧಾರವೇ ಸಹಕಾರ ಚಳುವಳಿಯ ತಳಹದಿ. ಶೋಷಣೆಯಿಂದ ವಿಮುಕ್ತಿಗೊಳಿಸಿ, ತುಳಿತಕ್ಕೆ, ದಬ್ಬಾಳಿಕೆಗೆ ಒಳಗಾದವರನ್ನು ರಕ್ಷಿಸುವ ಸಲುವಾಗಿ, ಭೇದ ಭಾವವನ್ನು ಹೋಗಲಾಡಿಸಿ "ಸರ್ವರಿಗೂ ಸಮಪಾಲು ಮತ್ತು ಸರ್ವರಿಗೂ ಸಮಬಾಳು" ಎನ್ನುವ ಹಾಗೆ ಅವಕಾಶಗಳನ್ನು ಒದಗಿಸಿಕೊಡುವ ಸಲುವಾಗಿ ಸಹಕಾರಿಸಂಘಗಳ ಜನನವಾಯಿತು ಎಂದು ಹೇಳಬಹುದು.

ಸಾಮಾನ್ಯ ಜನರಿಗೆ ಹಾಗೂ ಅವಶ್ಯಕತೆಯನ್ನು ಹೊಂದಿರುವ ಜನರಿಗೆ ಸಹಕಾರ ಚಳುವಳಿಯು ಬೆಂಬಲವನ್ನು ನೀಡುತ್ತಾ ಬಂದಿದೆ. ಕೃಷಿ ಪ್ರಧಾನವಾದ ನಮ್ಮ ದೇಶದ ಜನರಿಗೆ ದೊಡ್ಡ ಪ್ರಮಾಣದಲ್ಲಿ ನೆರವು ನೀಡಲು ಸಹಕಾರ ಪ್ರಮುಖ ಪಾತ್ರ ವಹಿಸಿದೆ. ಅಂದರೆ ಅಭಿವೃದ್ಧಿಶೀಲ ದೇಶಗಳಲ್ಲಿ ಸಹಕಾರ ತತ್ವದ ಪಾತ್ರ ಗಣನೀಯವಾದುದಾಗಿದೆ. 'ಸಹಕಾರದ ರಥ' ಅದೊಂದು 'ಪ್ರಗತಿಯ ಪಥ' ಎಂಬ ಮಾತು ಉಲ್ಲೇಖನೀಯವಾದುದು. ಸಹಕಾರಸಂಘಗಳ ಮುಖ್ಯ ಉದ್ದೇಶವು 'ಲಾಭವಲ್ಲ ಸೇವೆ' (Service, not profit) ಎನ್ನುವುದಾಗಿದೆ. ಒಂದು ಸಹಕಾರ ಸಂಘದಲ್ಲಿ ಪ್ರತಿಯೊಬ್ಬ ಸದಸ್ಯನಿಗೂ ಒಂದು ಮತವಿರುತ್ತದೆ. ಅವನೆಷ್ಟೇ ಷೇರುಗಳನ್ನು ಹೊಂದಿರಲಿ ಅದು ಮುಖ್ಯವಲ್ಲ. ಇಲ್ಲಿ ಮುಖ್ಯವಾಗಿ "One member, one vote" ಎಂಬುದು. ಆದರೆ "One Share, one vote" ಎಂಬ ತತ್ವ ಸಹ ಸಹಕಾರ ಸಂಘದ್ದಲ್ಲ. ಇಲ್ಲಿ ಸಮಾನತೆ ಮುಖ್ಯವಾದುದು, ಸಂಘದ ವ್ಯವಸ್ಥಾಪನೆಯಲ್ಲಿ ಎಲ್ಲಾ ಸದಸ್ಯರು ಸಮಾನವಾದ ಹೊಣೆಗಾರಿಕೆ ಮತ್ತು ಅಂತಸ್ತುವುಳ್ಳವರಾಗಿದ್ದು ಪರಸ್ಪರ ಸಹಕಾರ, ಸಹಾಯ ಮನೋಭಾವನೆ ಎದ್ದು ತೋರುವಂತಿರುತ್ತದೆ. ಇದುವೇ 'ಸಹಕಾರ ತತ್ವ'.

ಸಹಕಾರದ ಅರ್ಥ

ಜನರು ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವ ಸಲುವಾಗಿ ಸಮಾನತೆಯ ತತ್ವದ ಆಧಾರದ ಮೇಲೆ ಒಂದುಗೂಡಿ ಸಂಘಟಿಸಿಕೊಳ್ಳುವ ವ್ಯವಸ್ಥೆಯನ್ನು 'ಸಹಕಾರ' (Co-operation) ಎಂದು ಕರೆಯುತ್ತಾರೆ. ಸಹಕಾರದ ಮೂಲ ಅಂಶ ಸ್ವ-ಸಹಾಯ (self-help). ಎಚ್.ಕಾಲ್ವರ್ಟ್ ರವರು ಅಭಿಪ್ರಾಯಪಡುವಂತೆ ತಮ್ಮ ಆರ್ಥಿಕಾಭಿವೃದ್ಧಿಗಾಗಿ ಸಮಾನ ಮನಸ್ಥಿತಿಯ ನೆಲೆಯ ಆಧಾರದ ಮೇಲೆ ಜನರು ಸ್ವೇಚ್ಛೆಯಿಂದ ಒಂದುಗೂಡುವ ಸಂಘಟನೆಗೆ 'ಸಹಕಾರ' ಎನ್ನಬಹುದು. ಡಾ.ಸಿ.ಆರ್. ಫೇಯವರ ಅಭಿಪ್ರಾಯವೆಂದರೆ 'ಜಂಟಿ ವ್ಯಾಪಾರದ ಮಹದೋದ್ದೇಶದಿಂದ ದುರ್ಬಲರು ನಿಸ್ವಾರ್ಥ ಬುದ್ಧಿಯಿಂದ ರಚಿಸಿಕೊಂಡು, ಅದರ ಸದಸ್ಯತ್ವವನ್ನು ಪಡೆದವರೆಲ್ಲರೂ ಅವರವರ ಬಳಕೆಗೆ ಅನುಸಾರವಾಗಿ ಲಾಭಾಂಶವನ್ನು ಪಡೆಯಬಹುದಾದ ಸಂಘಟನೆಯನ್ನು 'ಸಹಕಾರ ಸಂಘ' ಎಂದು ಕರೆಯಬಹುದು' ಎಂಬುದಾಗಿ ತಿಳಿಸಿದ್ದಾರೆ.

'ಡಾ.ಕೆ.ಎನ್.ಕಟ್ಜೂ' ಅವರು ಅಭಿಪ್ರಾಯಪಡುವಂತೆ "ಸಹಕಾರವು ಸ್ವ-ಸಹಾಯ ಹಾಗೂ ಪರಸ್ಪರ" ಸಹಾಯವಾಗಿದೆ. ಇದು ಆರ್ಥಿಕವಾಗಿ ಹಿಂದುಳಿದು ತಮ್ಮ ಸ್ವಂತ ಕಾಲ ಮೇಲೆ ನಿಂತು ಕಾರ್ಯ ನಿರ್ವಹಿಸುವ ಸಾಮರ್ಥ್ಯವಿಲ್ಲದವರ ಜಂಟಿ ಸಹಾಯವಾಗಿದೆ. ಅವರು ಲಾಭದ ಉದ್ದೇಶದಿಂದ ಒಗ್ಗೂಡದೆ, ಸಾಕಷ್ಟು ಆರ್ಥಿಕ ಸಂಪನ್ಮೂಲವಿಲ್ಲದ ಕಾರಣ ಉಂಟಾಗಿರುವ ಅಸಮರ್ಥತೆಯನ್ನು ಹೋಗಲಾಡಿಸಿ, ತಮ್ಮ ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸಿಕೊಳ್ಳುವುದಕ್ಕೋಸ್ಕರ ಒಗ್ಗೂಡುತ್ತಾರೆ. ಈ ವ್ಯವಸ್ಥೆಯನ್ನು 'ಸಹಕಾರ' ಎನ್ನಬಹುದು".

ಈ ಮೇಲಿನ ಎಲ್ಲಾ ವ್ಯಾಖ್ಯಾನಗಳಿಂದ ಸಹಕಾರ ಅಥವಾ ಸಂಘ ಎಂದರೇನು? ಎಂಬುದನ್ನು ತಿಳಿದುಕೊಳ್ಳಬಹುದು. ಇದು ಆರ್ಥಿಕವಾಗಿ ದುರ್ಬಲರಾದವರು ತಾವೂ ಕೂಡಾ ಮನುಷ್ಯರೆಂದು ಒಂದು ನೆಲೆಯಿಂದ, ಸ್ವೇಚ್ಛೆಯಿಂದ ಒಂದಾಗಿ ರಚಿಸಿಕೊಂಡ ಒಂದು ವಿಧವಾದ 'ವಾಣಿಜ್ಯ ಸಂಘ'. ಸಮಾನವಾದ ಸೌಲಭ್ಯಗಳು ಮತ್ತು ಆಡಳಿತದಲ್ಲಿ ಸಮಾನ ಅಧಿಕಾರ, ಲಾಭದ ಹಂಚಿಕೆಯಲ್ಲಿ ಸಮಾನತೆ ಮತ್ತು ಅನ್ಯೋನ್ಯತೆ. ಇವುಗಳ ಭದ್ರ ನೆಲೆಯಲ್ಲಿ ತಮ್ಮ ಸಾಮಾನ್ಯ ಆರ್ಥಿಕ ಹಿತಾಸಕ್ತಿಯನ್ನು ಕಾಪಾಡುವುದಕ್ಕಾಗಿ ರಚಿತವಾಗುವ ಒಂದು ಸಂಘವೇ 'ಸಹಕಾರ'.

ಸಹಕಾರದ ಲಕ್ಷಣಗಳು

ಭಾರತದ ಸಹಕಾರ ಅಥವಾ ಸಹಕಾರ ಸಂಘವು ಹಲವಾರು ವಿಶಿಷ್ಟ ಲಕ್ಷಣಗಳನ್ನು ಒಳಗೊಂಡಿದೆ. ಅವುಗಳಲ್ಲಿ ಪ್ರಮುಖವಾದ ಲಕ್ಷಣಗಳು ಈ ರೀತಿಯಾಗಿವೆ.

೧. ಸಂಘದ ಸದಸ್ಯತ್ವವು ಐಚ್ಛಿಕವಾಗಿರುತ್ತದೆ. ಸಹಕಾರ ತತ್ವದ ಮೇಲೆ ನಂಬಿಕೆ, ವಿಶ್ವಾಸವಿರುವ ಯಾವುದೇ ವ್ಯಕ್ತಿ ಸಂಘದ ಸದಸ್ಯರಾಗಬಹುದು.

೨. ಪ್ರಜಾಸತ್ತಾತ್ಮಕವಾದ ವಿಧದಲ್ಲಿ ಸಹಕಾರ ಸಂಘ ಆಡಳಿತ ನಡೆಸುವುದು. ಸಹಕಾರ ಸಂಘದ ಮೂಲತತ್ವವೇ ಪ್ರಜಾಸತ್ತಾತ್ಮಕ ಆಡಳಿತ. 'ಪ್ರತಿಯೊಬ್ಬರೂ ಎಲ್ಲರಿಗಾಗಿ, ಎಲ್ಲರೂ ಪ್ರತಿಯೊಬ್ಬರಿಗಾಗಿ' ಎಂಬ ಪ್ರಜಾಸತ್ತಾತ್ಮಕ ತತ್ವದ ಮೇಲೆ ಸಹಕಾರ ಸಂಘದ ದೈನಂದಿನ ಕಾರ್ಯಕಲಾಪ ನಡೆಸಲಾಗುವುದು.

೩. ಒಬ್ಬ ಸದಸ್ಯನು ಎಷ್ಟೇ ಷೇರುಗಳನ್ನು ಪಡೆದಿದ್ದರೂ ಪ್ರಜಾಪ್ರಭುತ್ವದ ತತ್ವದಂತೆ, ಒಬ್ಬನಿಗೆ ಒಂದೇ ಮತದಾನದ ಹಕ್ಕು ಮಾತ್ರವಿರುವುದು. 'ಏಕ ಸದಸ್ಯ – ಏಕ ಮತ' ಇದು ಸಹಕಾರ ಸಂಘದ ಮೂಲ ತತ್ವ. "ಒಂದು ಷೇರು–ಒಂದು ಮತ"–ಇದು ಸಹಕಾರದ ತತ್ವವಲ್ಲ.

೪. ಅಧಿಕ ಲಾಭವನ್ನು ಗಳಿಸುವುದು ಸಹಕಾರ ಸಂಘದ ಉದ್ದೇಶವಲ್ಲ. ಸದಸ್ಯರಿಗೆ ಅತ್ಯಧಿಕ ಸೇವೆಯನ್ನು ಒದಗಿಸಿಕೊಡುವುದೇ ಅದರ ಪ್ರಮುಖ ಉದ್ದೇಶ. 'ಸೇವೆ ಮುಖ್ಯ' (Service Important) 'ಲಾಭ–ಮುಖ್ಯವಲ್ಲ' –ಇದೇ ಸಹಕಾರ ಸಂಘದ ಪ್ರಮುಖ ಗುರಿ.

೫. ಸಹಕಾರ ಸಂಘದ ಲಾಭದ ಹಂಚಿಕೆಯಲ್ಲಿ ಸಮಾನತೆಯ ತತ್ವವನ್ನು ಅಳವಡಿಸಿಕೊಂಡಿದೆ. ಸಹಕಾರ ಸಂಘ ಗಳಿಸಿದ (Earnings) ಎಲ್ಲಾ ಲಾಭವನ್ನು ಎಲ್ಲಾ ಸದಸ್ಯರಿಗೆ ಲಾಭಾಂಶವಾಗಿ (Dividend) ಹಂಚಿಕೆ ಮಾಡುವುದಿಲ್ಲ. ಆದರೆ ಸದಸ್ಯರು ನೀಡಿದ ಬಂಡವಾಳದ ಮೇಲೆ ಸಾಮಾನ್ಯವಾಗಿ ಶೇ. ೯ರಷ್ಟು ಸಣ್ಣ ಪ್ರಮಾಣದ ಲಾಭಾಂಶ

ನೀಡಲಾಗುವುದು. ಲಾಭದಲ್ಲಿ ಸ್ವಲ್ಪ ಪ್ರಮಾಣವನ್ನು ಸಂಘದ ಕ್ಷೇಮಾಭ್ಯುದಯಕ್ಕಾಗಿ ವಿನಿಯೋಗಿಸಲಾಗುವುದು. ಆನಂತರ ಲಾಭದಲ್ಲಿ ಉಳಿದ ಭಾಗವನ್ನು ಸಂಘದ ಸದಸ್ಯರಿಗೆ ವಿತರಿಸಲಾಗುವುದು.

೬. ಸದಸ್ಯರೆಲ್ಲರೂ ಸಂಘದ ಸಭೆಗಳಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಆಡಳಿತ ಮಂಡಳಿಗೆ ನಿರ್ದೇಶಕರುಗಳನ್ನು ಸದಸ್ಯರು ನೇಮಕಮಾಡುತ್ತಾರೆ.

೭. ಸಹಕಾರ ಸಂಘವನ್ನು ನೋಂದಾಯಿಸಿಕೊಳ್ಳಬಹುದು ಅಥವಾ ನೋಂದಾಯಿಸಿಕೊಳ್ಳದೇ ಇರಬಹುದು. ಆದರೆ ಸಾಮಾನ್ಯವಾಗಿ ಅಧಿಕ ಸಹಕಾರ ಸಂಘಗಳು ನೋಂದಾಯಿಸಲ್ಪಡುತ್ತವೆ. ನೋಂದಾಯಿಸಿಕೊಳ್ಳುವುದು ಉತ್ತಮವಾದುದು. ಸಹಕಾರ ಸಂಘಗಳ ಮಸೂದೆಯನ್ವಯ ಒಂದು ಸಹಕಾರ ಸಂಘವನ್ನು ನೋಂದಾಯಿಸಿಕೊಂಡಾಗ ಅದು ಕೂಡು ಬಂಡವಾಳ ಕಂಪನಿಯಂತೆ ಒಂದೆ ಸಂಸ್ಥೆಯಾಗುತ್ತದೆ. ಅದಕ್ಕೆ ನ್ಯಾಯ ಸಮ್ಮತವಾದ ಅಸ್ತಿತ್ವವೂ, ಶಾಶ್ವತವಾದ ಉತ್ತರಾಧಿಕಾರವೂ ಒಂದು ಸಾಮಾನ್ಯ ಮೊಹರೂ ಸಹ ದೊರೆಯುತ್ತದೆ. ಅಲ್ಲದೆ ನೋಂದಾಯಿಸಲ್ಪಟ್ಟ ಸಹಕಾರ ಸಂಘಕ್ಕೆ ಆದಾಯ ತೆರಿಗೆ, ನೋಂದಾವಣೆ ಶುಲ್ಕಗಳ ವಿನಾಯಿತಿ ಮುಂತಾದ ಕೆಲವು ವಿಶೇಷ ಸೌಲಭ್ಯಗಳು ದೊರೆಯುತ್ತವೆ. ಈ ವಿಶೇಷ ಸೌಲಭ್ಯಗಳಿಗೆ ಬದಲಾಗಿ, ನೋಂದಾಯಿಸಲ್ಪಟ್ಟ ಸಹಕಾರ ಸಂಘದ ಮೇಲೆ ಸರ್ಕಾರದ ಕಟ್ಟುನಿಟ್ಟಿನ ನಿಯಂತ್ರಣವೂ, ಮೇಲ್ವಿಚಾರಣೆಯೂ ಇರುತ್ತದೆ. ಆದರೆ ನೋಂದಾಯಿಸಲ್ಪಡದ ಸಹಕಾರ ಸಂಘದ ಮೇಲೆ ಈ ನಿಯಂತ್ರಣವೂ, ಮೇಲ್ವಿಚಾರಣೆಯೂ ಇರುವುದಿಲ್ಲ.

೮. ಸಹಕಾರ ಸಂಘದ ಸದಸ್ಯರ ಜವಾಬ್ದಾರಿ ನಿಯಮಿತವಾಗಿರಬಹುದು ಅಥವಾ ಅನಿಯಮಿತವಾಗಿರಬಹುದು. ನಿಯಮಿತ ಸಹಕಾರ ಸಂಘದ ಜವಾಬ್ದಾರಿ ನಿಯಮಿತವಾಗಿರುವುದು. ಹಾಗೆಯೇ ಅನಿಯಮಿತ ಸಹಕಾರ ಸಂಘದ ಜವಾಬ್ದಾರಿ ಅನಿಯಮಿತವಾಗಿರುವುದು.

ಸಹಕಾರ ಚಳುವಳಿಯ ಬೆಳವಣಿಗೆ

ಶೋಷಣೆಯಿಂದ ವಿಮುಕ್ತಿಗೊಳಿಸಿ, ಸದಸ್ಯರ ಹಿತಾಸಕ್ತಿಗಳನ್ನು ರಕ್ಷಿಸಿ, ಆರ್ಥಿಕಾಭಿವೃದ್ಧಿ ಸಾಧಿಸುವುದು ಸಹಕಾರಪದ್ಧತಿಯ ಪ್ರಮುಖವಾದ ಗುರಿ. ಜರ್ಮನಿದೇಶದ ವಾನ್‌ರೈಫಿಜನ್ (೧೮೧೮-೧೮೮೮) ಮತ್ತು ಹೆರ್ ಫ್ರಾಂಜ್ ಶೂಲ್ಜ್ ಡೆಲಿಟ್ಜ್ (೧೮೦೯-೧೮೮೩) ರವರು ಆಧುನಿಕಸಹಕಾರಆಂದೋಲನದ ಮೂಲ ಪುರುಷರೆಂದು ಗುರುತಿಸಲಾಗಿದೆ. ಸ್ಥೂಲವಾಗಿ ಸಹಕಾರ ಸಂಘಗಳನ್ನು ಎರಡು ವಿಧಗಳಾಗಿ ವಿಂಗಡಿಸಲಾಗುತ್ತದೆ. ಅವುಗಳೆಂದರೆ

i) ರೈಫಿಜನ್ ಮಾದರಿಯ ಸಂಘಗಳು ಅಥವಾ ಗ್ರಾಮೀಣಪ್ರದೇಶದ ಸಂಘಗಳು.

ii) ಶೂಲ್ಜ್ ಡೆಲಿಟ್ಜ್ ಮಾದರಿಯ ಸಂಘಗಳು ಅಥವಾ ನಗರ ಪ್ರದೇಶದ ಸಂಘಗಳು.

ವಾನ್‌ರೈಫಿಜನ್ ಮಾದರಿಯ ಸಂಘಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸಂಘಟಿಸಲಾಗುತ್ತದೆ. ಸಂಘದ ಕಾರ್ಯಕ್ಷೇತ್ರವು ಆ ಗ್ರಾಮಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಸದಸ್ಯರ ಜವಾಬ್ದಾರಿಯು ಅಪರಿಮಿತವಾಗಿರುತ್ತದೆ. ಶೂಲ್ಜ್ ಡೆಲಿಟ್ಜ್ ಮಾದರಿಯ ಸಂಘಗಳು ನಗರ ಪ್ರದೇಶಗಳಲ್ಲಿ ಸ್ಥಾಪನೆಯಾಗಿವೆ. ಸದಸ್ಯರ ಹೊಣೆಗಾರಿಕೆ ಸೀಮಿತವಾಗಿದ್ದು ಸಂಘಕ್ಕೆ ಲಾಭದ ದೃಷ್ಟಿಯಿರುತ್ತದೆ. ರೈಫಿಜನ್ ಮಾದರಿ ಸಂಘಗಳು ಗ್ರಾಮೀಣ ಪ್ರದೇಶಗಳಲ್ಲಿ ರೈತರಿಗೆ ಕೃಷಿ ಸಾಲ ಒದಗಿಸುವ ಸಂಘಗಳಾಗಿವೆ. ಶೂಲ್ಜ್ ಡೆಲಿಟ್ಜ್ ಮಾದರಿ ಸಂಘಗಳು ನಗರ ಪ್ರದೇಶಗಳಲ್ಲಿ ಕೃಷಿಯೇತರ ಕ್ಷೇತ್ರಗಳಿಗೆ ಸಾಲ-ಸೌಲಭ್ಯ ಒದಗಿಸುವ ಸಂಘಗಳು.

ರೈಫಿಜನ್ ಮಾದರಿಯ ಸಂಘಗಳ ಮೂಲತತ್ವಗಳು ಈ ಕೆಳಗಿನಂತಿವೆ :

೧. ಸದಸ್ಯತ್ವವು ಕೇವಲ ಗ್ರಾಮೀಣ ಜನತೆಗೆ, ಅದರಲ್ಲೂ ವಿಶೇಷವಾಗಿ ರೈತರಿಗೆ ಮಾತ್ರ ಸೀಮಿತವಾಗಿದೆ.

೨. ಇದರ ಕಾರ್ಯವ್ಯಾಪ್ತಿಯು ಸೀಮಿತವಾದುದು. ಒಂದು ಸಂಘ ಒಂದು ಹಳ್ಳಿಯಲ್ಲಿ ಮಾತ್ರ ಕಾರ್ಯ ನಿರ್ವಹಿಸಬಹುದು.

೩. ಸದಸ್ಯರ ಜವಾಬ್ದಾರಿಯು ಅನಿಯಮಿತವಾದುದು.

೪. ಷೇರು ಬಂಡವಾಳ ಇದರಲ್ಲಿಲ್ಲ.

೫. ಸದಸ್ಯರ ವೈಯಕ್ತಿಕ ಭದ್ರತೆಯ (Security) ಮೇಲೆ ಕೇವಲ ಉತ್ಪಾದಕ ಉದ್ದೇಶಗಳಿಗಾಗಿ (Productive purpose) ಸಾಲವನ್ನು ನೀಡಲಾಗುತ್ತದೆ.

೬. ಸಂಘದ ಆಡಳಿತವು ಗೌರವಾರ್ಥವಾಗಿರುತ್ತದೆ. ಅಂದರೆ ಯಾವ ಪ್ರತಿಫಲವನ್ನೂ ತೆಗೆದುಕೊಳ್ಳದೆ ಸಂಘದ ಸದಸ್ಯರು ಸ್ವೇಚ್ಛತಾ ಮನೋಭಾವದಿಂದ ಆಡಳಿತವನ್ನು ನಿರ್ವಹಿಸುತ್ತಾರೆ.

ಶೂಲ್ಜ್ ಡೆಲಿಟ್ಜ್ ಮಾದರಿ ಸಂಘಗಳ ಮುಖ್ಯ ತತ್ವಗಳು ಈ ಕೆಳಗಿನಂತಿವೆ:

೧. ಈ ಸಂಘಗಳ ಸದಸ್ಯತ್ವವು ಪಟ್ಟಣ ಪ್ರದೇಶಗಳಲ್ಲಿ, ನಗರ ಪ್ರದೇಶಗಳಲ್ಲಿ ವಾಸಿಸುವ ಕುಶಲಕರ್ಮಿಗಳು (Artisans), ಕೈಗಾರಿಕಾಕಾರ್ಮಿಕರು ಹಾಗೂ ಮಧ್ಯಮ ವರ್ಗದ ಜನರಿಗಾಗಿ ತೆರೆದಿರಿಸಲಾಗುವುದು.

2. ಇದರ ಕಾರ್ಯವ್ಯಾಪ್ತಿಯು ವಿಸ್ತೃತವಾಗಿರುವುದು.

೩. ಸಂಘದ ಸದಸ್ಯರ ಜವಾಬ್ದಾರಿಯು ನಿಯಮಿತವಾಗಿದೆ.

೪. ಈ ಸಂಘದಲ್ಲಿ ಅಧಿಕವಾದ ಷೇರು ಬಂಡವಾಳವಿದೆ.

೫. ಸದಸ್ಯರಿಗೆ ಸರಿಯಾದ ಆಸ್ತಿ-ಪಾಸ್ತಿಗಳ ಭದ್ರತೆ ಇದ್ದರೆ ಮಾತ್ರ ಸಾಲವನ್ನು ನೀಡಲಾಗುವುದು.

೬. ಆಡಳಿತ ವರ್ಗಕ್ಕೆ ಸಂಬಳವನ್ನು ನೀಡಲಾಗುವುದು. ಅಂದರೆ, ಸಂಘದ ಅಧಿಕಾರಿಯಾಗಿ ಸೇವೆ-ಸಲ್ಲಿಸುವವರಿಗೆ ಸಂಬಳವಿದೆ. ಅವರದು ಗೌರವಾರ್ಥ ಸೇವೆಯಲ್ಲ.

ಭಾರತದಲ್ಲಿ ಸಹಕಾರ ಚಳುವಳಿಯ ಪ್ರಕ್ರಿಯೆ ಆರಂಭವಾದದ್ದು ೧೯ನೇ ಶತಮಾನದ ಕೊನೆಯ ಭಾಗದಲ್ಲಿ ಎಂದು ಹೇಳಬಹುದು. ಈ ಅವಧಿಯಲ್ಲಿ ಪಂಜಾಬ್ ಮತ್ತು ಉತ್ತರ ಪ್ರದೇಶಗಳಲ್ಲಿ ಸಹಕಾರ ಸಂಘಗಳ ಉಗಮ ಕಂಡು ಬಂದಿತು. ಮದ್ರಾಸ್ ಸರ್ಕಾರ ಸಹಕಾರ ಚಳುವಳಿಯ ಅಧ್ಯಯನಕ್ಕಾಗಿ ಸರ್ ಫ್ರೆಡ್ರಿಕ್ ನಿಕಲ್‌ಸನ್

ಎಂಬ ಅಧಿಕಾರಿಯನ್ನು ಜರ್ಮನಿಗೆ ಕಳುಹಿಸಿಕೊಟ್ಟಿತು. ೧೮೯೫ರಲ್ಲಿ ನಿಕಲ್‌ಸನ್‌ರವರು ಒಂದು ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಒಪ್ಪಿಸಿದರು. ಈ ವರದಿಯ ಪ್ರಕಾರ ಜರ್ಮನಿಯಲ್ಲಿರುವ ರೈಫಿಜನ್ ಮಾದರಿಯ ಸಂಘಗಳನ್ನು ತೆರೆಯಲು ಸೂಚಿಸಲಾಗಿತ್ತು. ೧೯೦೧ರಲ್ಲಿ ಹಣಕಾಸು ಆಯೋಗವು (Finance Commission) ಸಂಘಗಳ ನಿರ್ಮಾಣಕ್ಕೆ ಆಗ್ರಹ ಪಡಿಸಿತು. ಈ ಎಲ್ಲವನ್ನು ಆಧರಿಸಿ ೧೯೦೪ರಲ್ಲಿ ಸಹಕಾರ ಸಂಘಗಳ ಕಾನೂನನ್ನು ಜಾರಿಗೊಳಿಸಲಾಯಿತು. ಇಲ್ಲಿಂದ ಭಾರತದಲ್ಲಿ ಸಹಕಾರ ಆಂದೋಲನ ಪ್ರಾರಂಭವಾಯಿತು.

ಅ) ಸ್ವಾತಂತ್ರ್ಯ ಪೂರ್ವ ಸ್ಥಿತಿ (Before Independance) :

೧೯೦೪ ರಲ್ಲಿ ಸಹಕಾರ ಸಂಘಗಳ ಕಾನೂನು ಜಾರಿಗೆ ಬಂದ ಮೇಲೆ ಗ್ರಾಮಗಳಲ್ಲೂ, ನಗರ ಪ್ರದೇಶಗಳಲ್ಲೂ ಅನೇಕ ಸಹಕಾರ ಸಾಲ ಸಂಘಗಳು ಅಸ್ತಿತ್ವಕ್ಕೆ ಬಂದವು. ಆದರೆ ಈ ಕಾನೂನಿನಲ್ಲಿ ಕೆಲವು ದೋಷಗಳಿದ್ದವು. ಅವುಗಳೆಂದರೆ.

೧) ಇದು ಕೇವಲ ಸಾಲ ಸಂಘಗಳ ನೋಂದಾವಣೆಗೆ ಮಾತ್ರ ಅವಕಾಶ ನೀಡಿತು. ಆದರೆ ಸಾಲ ನೀಡದ ಸಂಘಗಳ ನೋಂದಣಿಗೆ ಅದರಲ್ಲಿ ಅವಕಾಶವಿರಲಿಲ್ಲ.

೨) ಪ್ರಾಥಮಿಕ ಸಾಲ ಸಂಘಗಳ ಮೇಲ್ವಿಚಾರಣೆಯನ್ನು ನೋಡಿಕೊಂಡು, ಅವುಗಳ ಸಾಲ ಒದಗಿಸುವ ಕೇಂದ್ರದ ಅಥವಾ ಒಕ್ಕೂಟದ ಸಂಸ್ಥೆಗಳಾದ ಕೇಂದ್ರ ಸಹಕಾರಿ ಬ್ಯಾಂಕುಗಳು (Central co-operative Banks) ಹಾಗೂ ರಾಜ್ಯ ಸಹಕಾರಿ ಬ್ಯಾಂಕುಗಳು ನೋಂದಾಯಿಸಿಕೊಳ್ಳುವುದಕ್ಕೆ ಇದರಲ್ಲಿ ಅವಕಾಶವಿರಲಿಲ್ಲ.

೩) ಸಾಲ ಸಂಘಗಳನ್ನು ಗ್ರಾಮೀಣ ಹಾಗೂ ನಗರ ಎಂದು ವರ್ಗೀಕರಣ ಮಾಡಿದುದು ಅವೈಜ್ಞಾನಿಕವೂ ಹಾಗೂ ದೋಷಪೂರಿತವೂ ಆಗಿತ್ತು.

ಹೀಗಾಗಿ, ಈ ಮೇಲಿನ ದೋಷಗಳು ೧೯೦೪ರ ಸಹಕಾರ ಸಂಘಗಳ ಕಾನೂನಿನಲ್ಲಿ ಕಂಡು ಬಂದಿದ್ದರಿಂದ, ಅವುಗಳನ್ನು ನಿವಾರಿಸುವ ಸಲುವಾಗಿ ೧೯೧೨ರಲ್ಲಿ ನೂತನ ಸಹಕಾರಿ ಸಂಘಗಳ ಕಾನೂನು ಜಾರಿಗೆ ಬಂದಿತು. ೧೯೦೪ರ ಸಹಕಾರ

ಸಂಘಗಳ ಕಾನೂನಿನ ಎಲ್ಲಾ ರೀತಿಯ ದೋಷಗಳನ್ನು ಹೊಸ ಕಾನೂನು ನಿವಾರಿಸಿತು. ಇದರಿಂದಾಗಿ, ಭಾರತದಲ್ಲಿ ಸಹಕಾರ ಚಳುವಳಿಗೆ ಒಂದು ಹೊಸ ಚಾಲನೆ ದೊರಕಿತು. ೧೯೧೨ರ ಸಹಕಾರ ಸಂಘಗಳ ಕಾನೂನಿನ ಮುಖ್ಯಾಂಶಗಳು ಈ ಕೆಳಗಿನಂತಿವೆ.

- ಕೇವಲ ಸಾಲ ಒದಗಿಸುವ ಸಂಘಗಳಲ್ಲದೇ, ಸಾಲ ನೀಡದ ಸಂಘಗಳೂ ಸಹ ನೋಂದಾಯಿಸಿಕೊಳ್ಳುವುದು. ಉದಾಹರಣೆಗೆ: ಮಾರಾಟ ಸಂಘಗಳು, ಕೊಳ್ಳುವ ಸಂಘಗಳು, ಗೃಹ ನಿರ್ಮಾಣ ಸಂಘಗಳು, ವಿಮಾ ಸಂಘಗಳು.

- ಪ್ರಾಥಮಿಕ ಸಾಲ ಸಂಘಗಳ ಉಸ್ತುವಾರಿಯನ್ನು ನೋಡಿಕೊಂಡು, ಅವುಗಳಿಗೆ ಸಾಲ ನೀಡುವ ಕೇಂದ್ರ ಅಥವಾ ಒಕ್ಕೂಟದ ಸಂಸ್ಥೆಗಳಾದ ಕೇಂದ್ರ ಸಹಕಾರಿ ಬ್ಯಾಂಕುಗಳು, ರಾಜ್ಯ ಸಹಕಾರಿ ಬ್ಯಾಂಕುಗಳು ನೋಂದಾಯಿಸಿಕೊಳ್ಳಬಹುದೆಂದು ಒಪ್ಪಿಗೆ ನೀಡಿತು.

- ಹಳೆಯ ವರ್ಗೀಕರಣವಾದ ಗ್ರಾಮೀಣ ಸಂಘಗಳು, ನಗರ ಪ್ರದೇಶದ ಸಂಘಗಳು ಎಂಬ ವರ್ಗೀಕರಣವನ್ನು ತೆಗೆದು ಹಾಕಲಾಯಿತು. ಇದರ ಬದಲಾಗಿ ನಿಯಮಿತ ಸಂಘಗಳು ಮತ್ತು ಅನಿಯಮಿತ ಸಂಘಗಳು ಎಂಬ ನೂತನ ವರ್ಗೀಕರಣವನ್ನು ಮಾಡಲಾಯಿತು.

- ಸದಸ್ಯರಲ್ಲಿ ಹೆಚ್ಚಿನವರು ರೈತರಾಗಿರುವ ಹಾಗೂ ಸಾಲ ಒದಗಿಸುವ ಕೆಲಸವನ್ನು ಮಾಡುವ ಸಂಘಗಳು ಅನಿಯಮಿತ ಜವಾಬ್ದಾರಿಯ ಮೇಲೆ ರಚಿತವಾಗಬೇಕೆಂದು ತಿಳಿಸಿತು. ಉಳಿದೆಲ್ಲಾ ಸಂಘಗಳು ಸದಸ್ಯರ ಇಚ್ಛಾಶಕ್ತಿಯಂತೆ ಅನಿಯಮಿತ ಜವಾಬ್ದಾರಿಯ ಮೇಲೆ ರಚಿತವಾಗಬಹುದು.

೧೯೧೨ ರ ಕಾನೂನಿನನ್ವಯ ಅನೇಕ ಪ್ರಾಥಮಿಕ ಸಾಲ ಸಂಘಗಳು, ಕೇಂದ್ರ ಸಹಕಾರಿ ಬ್ಯಾಂಕುಗಳು ಮತ್ತು ಪ್ರಾಂತೀಯ ಸಹಕಾರಿ ಬ್ಯಾಂಕುಗಳು (ಅಂದರೆ ರಾಜ್ಯ ಸಹಕಾರಿ ಬ್ಯಾಂಕುಗಳು) ಸ್ಥಾಪನೆಯಾದವು. ಮಾರಾಟ ಸಂಘಗಳು, ಕೊಳ್ಳುವ ಸಂಘಗಳು, ಗೃಹ ನಿರ್ಮಾಣ ಸಂಘಗಳು ಮುಂತಾದ ಸಾಲಕೊಡುವ ಅನೇಕ ಸಂಘಗಳು ಸ್ಥಾಪನೆಯಾದವು. ನಂತರ ೧೯೧೪ ರಲ್ಲಿ ಸರ್ಕಾರವು ಸರ್ ಎಡ್ವರ್ಡ್ ಮೆಕ್ಲಗಾನ್ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಸಹಕಾರ ಆಂದೋಲನದ ಸಮಸ್ಯೆಗಳ ಅಧ್ಯಯನ

ಮಾಡುವ ಸಲುವಾಗಿ ನೇಮಕ ಮಾಡಲಾಯಿತು. ಸಮಿತಿಯು ಅಧ್ಯಯನದ ನಂತರ ಅನೇಕ ಸಲಹೆಗಳನ್ನು ಸರ್ಕಾರಕ್ಕೆ ನೀಡಿತು. ಸಮಿತಿಯ ಅಮೂಲ್ಯವಾದ ಸಲಹೆಗಳನ್ನು ಸರ್ಕಾರ ಅಂಗೀಕರಿಸಿತು.

೧೯೧೯ ರಲ್ಲಿ ಸರ್ಕಾರ ಸಹಕಾರ ಸಂಘಗಳ ಕಾಯ್ದೆಯನ್ನು ಪುನರ್ ರೂಪಿಸಲಾಯಿತು. ಇದರಿಂದ ಸಹಕಾರ ಸಂಘಗಳ ಪ್ರಾರಂಭಕ್ಕೆ ಹೆಚ್ಚಿನ ಉತ್ತೇಜನ ಕಲ್ಪಿಸಲಾಯಿತು. ಹಾಗಾಗಿ ೧೯೧೯ ಸಹಕಾರ ಆಂದೋಲನದ ದೃಷ್ಟಿಯಿಂದ ಒಂದು ಮಹತ್ವ ಪೂರ್ಣವಾದ ವರ್ಷವೆಂದು ಹೇಳಬಹುದು. ೧೯೧೯ ರ ಕಾನೂನಿನ ಪ್ರಕಾರ ಸಹಕಾರವು ಪ್ರಾಂತೀಯ ವಿಷಯವಾಗಿ ಪರಿಗಣಿತವಾಯಿತು. ಈ ಕಾಯಿದೆಯು ರಾಜ್ಯಗಳಿಗೆ ೧೯೧೨ ರ ಸಹಕಾರ ಸಂಘಗಳ ಕಾನೂನನ್ನು ಅನುಸರಿಸುವ ಅಥವಾ ತಮ್ಮದೇಯಾದ ಕಾನೂನನ್ನು ಸೃಷ್ಟಿಸಿಕೊಳ್ಳುವ ಸ್ವಾತಂತ್ರ್ಯವನ್ನು ನೀಡಿತು. ಹೀಗಾಗಿ ಅನೇಕ ರಾಜ್ಯಗಳು ಸಹಕಾರ ಚಳುವಳಿಯನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ತಮ್ಮದೇಯಾದ ಕಾನೂನುಗಳನ್ನು ಜಾರಿಗೊಳಿಸಿದವು. ಇದರಿಂದಾಗಿ ಸಹಕಾರ ಚಳುವಳಿ ತೀವ್ರವಾಗಿ ಮುನ್ನಡೆಯಲು ಸಾಧ್ಯವಾಯಿತು. ಹಾಗೆಯೇ ಸಹಕಾರ ಸಂಘಗಳ ಸಂಖ್ಯೆಯಲ್ಲಿ ಹೆಚ್ಚಳವಾಯಿತು.

೧೯೩೯-೧೯೪೫ ರ ಅವಧಿಯಲ್ಲಿ ಸಹಕಾರ ಚಳುವಳಿಯು ಚೇತರಿಸಿಕೊಂಡಿತು. ಎರಡನೇ ಜಾಗತಿಕ ಮಹಾಯುದ್ಧದ ಪರಿಣಾಮವಾಗಿ ಕೃಷಿ ಉತ್ಪನ್ನಗಳ ಬೆಲೆ ಸಾಕಷ್ಟು ಏರಿತು. ಆದ್ದರಿಂದ, ಸಾಲ ತೆಗೆದುಕೊಂಡವರು ಬಾಕಿ ಇದ್ದಂತಹ ಸಾಲವನ್ನು ತೀರಿಸಲು ಸಾಧ್ಯವಾಯಿತು. ಇದರಿಂದ ಸಹಕಾರಿ ಸಾಲದ ಸಂಘಗಳು ನಿರಾತಂಕವಾಗಿ ನಡೆದುಕೊಂಡು ಹೋಗುವಂತಾಯಿತು. ಹಾಗಾಗಿ ಎರಡನೇ ಜಾಗತಿಕ ಯುದ್ಧವು ಸಹಕಾರ ಚಳುವಳಿಯ ಬೆಳವಣಿಗೆಗೆ ತುಂಬಾ ಉತ್ತೇಜನ ನೀಡಿತು. ಹಾಗೆಯೇ ಎರಡನೇ ಜಾಗತಿಕ ಮಹಾ ಸಮರವು ಬೇರೆ ವಿಧವಾದ ಸಹಕಾರ ಸಂಘಗಳ ಬೆಳವಣಿಗೆಗೆ ಸಹಕಾರ ನೀಡಿತು. ಅವುಗಳೆಂದರೆ -

೧) ಅನುಭೋಗಿಗಳ ಸಹಕಾರ ಸಂಘಗಳು

೨) ಮಾರಾಟ ಸಹಕಾರ ಸಂಘಗಳು

೩) ನೇಕಾರರ ಸಹಕಾರ ಸಂಘಗಳು

3

ಳ) ಕಬ್ಬು ಬೆಳೆಗಾರರ ಸಹಕಾರ ಸಂಘಗಳು

ೞ) ಸಾರಿಗೆ ಸಹಕಾರ ಸಂಘಗಳು ಇತ್ಯಾದಿ.

ಈ ಸಂಘಗಳು ಹುಟ್ಟಿದ್ದಲ್ಲದೇ ಪ್ರಗತಿಯನ್ನೂ ಸಾಧಿಸಿದವು.

ಆ) ಸ್ವಾತಂತ್ರ್ಯದ ನಂತರದ ಸ್ಥಿತಿ (After Independance) :

ಭಾರತದಲ್ಲಿ ಸ್ವಾತಂತ್ರ್ಯಾನಂತರ ಸಹಕಾರ ಚಳುವಳಿಯು ಅತ್ಯಧಿಕ ಪ್ರಗತಿಯನ್ನು ಸಾಧಿಸಿತು. ಸರ್ಕಾರದಿಂದ ಸಹಕಾರ ಚಳುವಳಿಗೆ ಹೆಚ್ಚಿನ ಸಹಾಯ ದೊರಕಿತು. ಸಹಕಾರ ಆಂದೋಲನಕ್ಕೆ ಭಾರತದಲ್ಲಿ ಪ್ರಾರಂಭವಾದ ಪಂಚವಾರ್ಷಿಕ ಯೋಜನೆಗಳಿಂದ ಮಹತ್ವ ದೊರೆಯಲಾರಂಭಿಸಿತು. ೧೯೫೧ ರಲ್ಲಿ ಭಾರತ ಸರ್ಕಾರ ಅಖಿಲ ಭಾರತ ಗ್ರಾಮೀಣ ಸಾಲ ಸಮೀಕ್ಷಾ ಸಮಿತಿ (All India Rural Credit Survey Committee) ಯನ್ನು ನೇಮಿಸಿತು. ಇದರ ಉದ್ದೇಶ ಗ್ರಾಮೀಣ ಪ್ರದೇಶದಲ್ಲಿ ಋಣಭಾರವನ್ನು ಹೇಗೆ ಸಹಕಾರ ತತ್ವದ ಮೂಲಕ ತಗ್ಗಿಸಬಹುದು ಎಂಬುದಾಗಿತ್ತು. ಈ ಸಮಿತಿಯಿಂದ ಉತ್ತರವನ್ನು ಕಂಡುಕೊಂಡಿತು. ಆ ಸಮಿತಿಯು ತನ್ನ ವರದಿಯಲ್ಲಿ ರೈತರ ಒಟ್ಟು ಸಾಲದ ಅಗತ್ಯಗಳಲ್ಲಿ ಕೇವಲ ಸುಮಾರು ೩.೧% ನಷ್ಟು ಭಾಗವನ್ನು ಪ್ರಾಥಮಿಕ ಕೃಷಿ ಸಾಲ ಸಂಘಗಳು ಪೂರೈಸುತ್ತವೆ ಎಂಬ ಅಂಶವನ್ನು ಬಹಿರಂಗ ಪಡಿಸಿತು. ಅಲ್ಲದೇ, ಸಾಲದಲ್ಲಿ ಸ್ವಲ್ಪ ಭಾಗ ಶ್ರೀಮಂತ ವರ್ಗದ ರೈತರಿಗೆ ಹಂಚಲ್ಪಟ್ಟಿದೆ ಎಂದೂ ಸಮಿತಿಯು ತಿಳಿಸಿತು. 'ಸಹಕಾರ ಭಾರತದಲ್ಲಿ ಯಶಸ್ವಿಯಾಗಿಲ್ಲ, ಆದರೆ ಅದಕ್ಕೆ ಯಶಸ್ಸು ಲಭಿಸಲೇ ಬೇಕು' ಎಂಬುದು ಈ ಸಮಿತಿಯ ಅಭಿಪ್ರಾಯವಾಗಿದೆ. ಭಾರತದೇಶದ ಸಹಕಾರ ಸಾಲ ಚಳುವಳಿಯ (Credit-Co-operative Movement) ಚುರುಕುಗೊಳಿಸುವ ಸಲುವಾಗಿ "ಗ್ರಾಮೀಣ ಸಾಲದ ಸಂಯೋಜಿತ ಕಾರ್ಯಕ್ರಮ" ಒಂದನ್ನು ಈ ಸಮಿತಿಯು ಸಲಹೆ ಮಾಡಿತು. ಈ ಸಮಿತಿಯು ಸಲಹೆ ಮಾಡಿದ 'ಗ್ರಾಮೀಣ ಸಾಲದ ಸಂಯೋಜಿತ ಕಾರ್ಯಕ್ರಮ'ದ ಮುಖ್ಯ ಲಕ್ಷಣಗಳು ಈ ಕೆಳಗಿನಂತಿವೆ. ಅವುಗಳೆಂದರೆ -

* ಸಹಕಾರ ಸಾಲದ ಚಳುವಳಿಯ ವಿವಿಧ ಹಂತಗಳಲ್ಲಿ ರಾಜ್ಯ ಸರ್ಕಾರದ ಪಾಲ್ಗೊಳ್ಳುವಿಕೆ.

* ಸಾಲವನ್ನು ಉತ್ಪಾದನೆಯ ವಿವಿಧ ಹಂತಗಳೊಡನೆಯೂ ಹಾಗೂ ಮಾರಾಟದೊಂದಿಗೆ ಕೂಡಾ ಸಂಯೋಜಿಸುವುದು.

* ಗ್ರಾಮೀಣ ಜನತೆಯ ಅವಶ್ಯಕತೆಯನ್ನು ಮನಗಾಣಬಲ್ಲಂತಹ ತರಬೇತಿ ಹೊಂದಿದ ಕಾರ್ಯದಕ್ಷತೆಯ ಸಿಬ್ಬಂದಿಯ ಮೂಲಕ ಸಹಕಾರ ಸಾಲ ಸಂಘಗಳ ಆಡಳಿತ ನಡೆಸುವುದು.

ಭಾರತ ಸರ್ಕಾರ ಸಮಿತಿಯ ಹಲವಾರು ಸಲಹೆಗಳನ್ನು ಒಪ್ಪಿಕೊಂಡಿತು. ಹಾಗೂ ಭಾರತದ ಕೇಂದ್ರ ಬ್ಯಾಂಕಾದ ರಿಸರ್ವ್ ಬ್ಯಾಂಕಿನ ಸಹಾಯದಿಂದ ಅದನ್ನು ಕಾರ್ಯಗತಗೊಳಿಸಿತು. ಇದರಿಂದ ದೇಶದಲ್ಲಿ ವಿವಿಧೋದ್ದೇಶ ಸಹಕಾರ ಸಂಘಗಳ ಬೆಳವಣಿಗೆಗೆ ಯೋಜನಾಯುಗದ ಮಹತ್ವಪೂರ್ಣವಾದ ಅಂಶವಾಯಿತು. ಸಹಕಾರ ಚಳುವಳಿಯ ತೀವ್ರತೆಗೆ ಹಾದಿಯಾಯಿತು.

೧೯೫೦-೫೧ರ ಅವಧಿಯಲ್ಲಿ ಸರಿಸುಮಾರು ೧೦,೫೦೦ ಸಹಕಾರ ಸಂಘಗಳು ಕಾರ್ಯ ನಿರ್ವಹಿಸುತ್ತಿದ್ದವು. ೧೯೭೪-೭೫ರ ಹೊತ್ತಿಗೆ ಇವುಗಳ ಸಂಖ್ಯೆಯಲ್ಲಿ ತೀವ್ರತರ ಬೆಳವಣಿಗೆಯಾಯಿತು. ಅಂದರೆ ಸರಿಸುಮಾರು ೯೨,೦೦೦ ವಾಯಿತು. ಸಹಕಾರ ಸಂಘಗಳ ಸದಸ್ಯತ್ವ ೪೪೦ ಸಾವಿರದಷ್ಟು ಇದ್ದದ್ದು ೬೯ ದಶಲಕ್ಷಗಳಿಗೇರಿತು. ಇದೇ ಅವಧಿಯಲ್ಲಿ ಸಾಲ ನೀಡಿಕೆಯ ಮೊತ್ತ ರೂ. ೨೩ ಕೋಟಿಗಳಿಂದ ರೂ.೨೬೯೩ ಕೋಟಿ ರೂ.ಗಳಿಗೇರಿತು. ೧೯೭೫-೭೬ರ ವರೆಗೆ ಪೂರೈಸಲಾದ ಸಹಕಾರಿ ಸಾಲದ ಮೊತ್ತ ರೂ. ೩೨೫೦ ಕೋಟಿ. ೧೯೮೯-೯೦ರಲ್ಲಿ ಇದು ರೂ. ೭೦೭೦ ಕೋಟಿ ರೂ.ಗಳಿಗೇರಿತು.

ಸಹಕಾರ ಸಂಘಗಳ ಮೂಲಕ ಮಾರಾಟ ಮಾಡುವ ಸರಕುಗಳ ಮೌಲ್ಯವು ರೂ. ೨,೭೦೦ ಕೋಟಿಗಳಿಂದ ರೂ. ೫,೦೦೦ ಕೋಟಿಗಳಿಗೆ ಏಳನೇ ಪಂಚವಾರ್ಷಿಕ ಯೋಜನೆಯ ಅಂತ್ಯಕ್ಕೆ ಹೆಚ್ಚಳವಾಗಿ ಪ್ರಸ್ತುತ ಸರಿಸುಮಾರು ೨,೦೦೦ ಬೃಹತ್ ಹಾಗೂ ಸಣ್ಣಪ್ರಮಾಣದ ಬಳಕೆದಾರರ ಸಹಕಾರ ಸಂಘಗಳು ಕಾರ್ಯನಿರತವಾಗಿರುವುದು ಕಂಡುಬರುತ್ತದೆ. ಪ್ರಸ್ತುತ ಭಾರತದಲ್ಲಿ ಸರಿಸುಮಾರು ೯೫,೬೦೦ ಪ್ರಾಥಮಿಕ ಕೃಷಿ ಸಾಲ ಸಹಕಾರ ಸಂಘಗಳಿದ್ದು ಅವುಗಳು ರೂ. ೫೦೫೦ ಕೋಟಿ ಕ್ರಿಯಾತ್ಮಕ ಬಂಡವಾಳವನ್ನು ಹೊಂದಿವೆ. ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ರೈತರ

ಮನೆಯ ಬಾಗಿಲಿಗೆ ಹೋಗಿ ಸಾಲಕೊಡುವ ಯೋಜನೆಯೊಂದನ್ನು ಹಮ್ಮಿಕೊಳ್ಳಲಾಗಿತ್ತು.

ಒಟ್ಟಾರೆ ಹೇಳುವುದಾದರೆ ಸಂಖ್ಯೆ, ಸದಸ್ಯತ್ವ, ಷೇರು ಬಂಡವಾಳ ಮತ್ತು ಕಾರ್ಯಗತ ಬಂಡವಾಳಗಳ ದೃಷ್ಟಿಯಿಂದ ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ಸಹಕಾರ ಚಳುವಳಿಯು ಗಣನೀಯವಾಗಿ ಪ್ರಗತಿಯನ್ನು ಸಾಧಿಸಿತು. ಸಹಕಾರ ಚಳುವಳಿಯ ಪ್ರಗತಿ ಮುಖ್ಯವಾಗಿ ಕೃಷಿ ಸಾಲ, ಮಾರಾಟ ಮತ್ತು ಬೇಸಾಯದ ಸಾಧನಗಳ ಪೂರೈಕೆ ಮತ್ತು ವಿಧಾನ ಈ ಕ್ಷೇತ್ರಗಳಲ್ಲಿ ಅಧಿಕವಾಗಿದೆ. ಪ್ರಾಥಮಿಕ ಕೃಷಿ ಸಾಲ ಸಂಘಗಳು ಒಟ್ಟಾರೆ ಗ್ರಾಮೀಣ ಪ್ರದೇಶದ ೯೮% ರಷ್ಟು ಗ್ರಾಮಗಳನ್ನು ತಲುಪಿವೆ. ಕೃಷಿಯಲ್ಲಿ ನಿರತ ರೈತರಿಗೆ ೫೮% ರಷ್ಟು ಮಾರ್ಚ್ ೧೯೯೫ರವರೆಗೆ ರೂ. ೭,೦೦೦ ಕೋಟಿ ಅಲ್ಪಾವಧಿ ಸಾಲ ಮತ್ತು ರೂ. ೩,೫೦೦ ಕೋಟಿ ಮಧ್ಯಮಾವಧಿಸಾಲವನ್ನು ಇವುಗಳು ಪೂರೈಸಿವೆ. ಹಾಗೆಯೇ ಸಹಕಾರ ಸಂಘಗಳು ಮಾರಾಟ ಮಾಡಿದ ಕೃಷಿ ಉತ್ಪನ್ನಗಳ ಮೌಲ್ಯವೂ ಕೂಡಾ ಗಣನೀಯವಾಗಿ ಏರಿದೆ. ಕೃಷಿ ಸಾಧನಗಳಾದ ರಸಗೊಬ್ಬರ ಮುಂತಾದವುಗಳನ್ನು ಸಹಕಾರ ಸಂಘಗಳು ವಿತರಣೆ ಮಾಡುವುದು ಕೂಡಾ ಹೆಚ್ಚಾಯಿತು.

ಭಾರತದಲ್ಲಿ ಸಹಕಾರ ಸಂಘಗಳ ರಚನೆ ಹೇಗೆ ?

ಭಾರತದಲ್ಲಿ ಸಹಕಾರ ಸಂಘಗಳ ರಚನೆಯನ್ನು ಎರಡು ವಿಧಗಳಾಗಿ ಕಾಣಬಹುದು. ಅವುಗಳೆಂದರೆ.

೧. ಸಹಕಾರ ಸಾಲ ಸಂಘಗಳ ರಚನಾಕ್ರಮ

೨. ಸಹಕಾರ ಸಾಲ ನೀಡದ ಸಂಘಗಳ ರಚನಾಕ್ರಮ

ಈ ಮೇಲಿನ ಎರಡೂ ವಿಧದ ಸಹಕಾರ ಸಂಘಗಳ ವಿಧಿ-ವಿಧಾನಗಳನ್ನು ಕುರಿತು ಅಭ್ಯಸಿಸುವುದು ಉತ್ತಮ. ಈ ಕೆಳಗೆ ಇವುಗಳ ರಚನಾಕ್ರಮದ ಬಗ್ಗೆ ತಿಳಿಸಲಾಗಿದೆ.

ಸಹಕಾರ ಸಾಲ ಸಂಘಗಳ ರಚನಾ ಕ್ರಮ :

ಭಾರತದ ಸಹಕಾರ ಸಂಘಗಳ ರಚನೆಯಲ್ಲಿ ಪ್ರಮುಖವಾಗಿ ಸಹಕಾರ ಸಾಲ ನೀಡುವ ಸಂಘಗಳ ರಚನಾ ಕ್ರಮವೂ ಒಂದಾಗಿದೆ. ಸಹಕಾರ ಸಾಲ ನೀಡುವ

ಸಂಘಗಳ ರಚನಾ ಕ್ರಮಗಳನ್ನು ಮುಖ್ಯವಾಗಿ ಎರಡು ವಿಧಗಳಲ್ಲಿ ಅಭ್ಯಸಿಸಬಹುದಾಗಿದೆ. ಅವುಗಳೆಂದರೆ -

- ❋ ಅಲ್ಪಾವಧಿ ಸಾಲ ಸಂಘಗಳ ರಚನಾ ಕ್ರಮ ಮತ್ತು
- ❋ ದೀರ್ಘಾವಧಿ ಸಾಲ ಸಂಘಗಳ ರಚನಾ ಕ್ರಮ.

ಅಲ್ಪಾವಧಿ ಸಾಲ ಸಂಘಗಳ ರಚನಾಕ್ರಮ :

ಅಲ್ಪಾವಧಿ ಸಾಲ ಸಹಕಾರ ಸಂಘಗಳ ರಚನಾ ಕ್ರಮವು ಪ್ರತಿ ರಾಜ್ಯದಲ್ಲಿಯೂ ಮೂರು ಹಂತಗಳನ್ನು ಒಳಗೊಂಡಿದೆ ಎಂದು ಹೇಳಬಹುದು. ಅವುಗಳೆಂದರೆ.

- ❋ ಪ್ರಾಥಮಿಕ ಸಾಲ ಸಂಘಗಳು
- ❋ ಕೇಂದ್ರ ಸಹಕಾರ ಬ್ಯಾಂಕುಗಳು
- ❋ ರಾಜ್ಯ ಸಹಕಾರ ಬ್ಯಾಂಕುಗಳು ಅಥವಾ ಅಪೆಕ್ಸ್ ಬ್ಯಾಂಕುಗಳು.

ಅಲ್ಪಾವಧಿ ಸಹಕಾರ ಸಾಲ ಸಂಘಗಳ ರಚನಾ ಕ್ರಮದಲ್ಲಿನ ಪ್ರಾಥಮಿಕ ಸಾಲ ಸಂಘಗಳು, ಸದಸ್ಯರಿಗೆ ಪ್ರತ್ಯಕ್ಷವಾಗಿ ಅಲ್ಪಾವಧಿ ಸಾಲಗಳನ್ನು ಒದಗಿಸುತ್ತವೆ. ಇವುಗಳು ಗ್ರಾಮೀಣ ಪ್ರದೇಶಗಳಲ್ಲಿ ರೈತರು ರಚಿಸುವ ಗ್ರಾಮೀಣ ಸಾಲ ಸಂಘಗಳಾಗಿರಬಹುದು ಅಥವಾ ಪಟ್ಟಣಗಳಲ್ಲಿ, ನಗರಗಳಲ್ಲಿ ಕುಶಲಕರ್ಮಿಗಳು, ವ್ಯಾಪಾರಿಗಳು ಮತ್ತು ಮಧ್ಯಮ ಆದಾಯದವರು ರಚಿಸಿಕೊಂಡ ಸಾಲ ಸಂಘಗಳಾಗಿರಬಹುದು.

ಸಾಮಾನ್ಯವಾಗಿ ಕೇಂದ್ರ ಸಹಕಾರ ಬ್ಯಾಂಕುಗಳು (Central Co-operative Banks) ಪ್ರಾಥಮಿಕ ಸಾಲ ಸಹಕಾರ ಸಂಘಗಳ ಮುಖ್ಯ ಸಂಸ್ಥೆಗಳಾಗಿವೆ. ಅಲ್ಪಾವಧಿ ಸಹಕಾರ ಸಾಲ ರಚನಾ ಕ್ರಮದಲ್ಲಿ ಮಧ್ಯಮಸ್ಥಾನದಲ್ಲಿ ಕೇಂದ್ರ ಸಹಕಾರ ಬ್ಯಾಂಕುಗಳಿರುತ್ತವೆ. ಸಾಮಾನ್ಯವಾಗಿ ಕೇಂದ್ರ ಸಹಕಾರ ಬ್ಯಾಂಕುಗಳು ಜಿಲ್ಲಾ ಕೇಂದ್ರಗಳಲ್ಲಿರುತ್ತವೆ. ಸದಸ್ಯರಿಗೆ ಸಾಲ ವಿತರಣೆ ಮಾಡುವುದಕ್ಕಾಗಿ ಇವು ಪ್ರಾಥಮಿಕ ಸಾಲ ಸಹಕಾರ ಸಂಘಗಳಿಗೆ ಸಾಲವನ್ನು ಒದಗಿಸುತ್ತವೆ.

ರಾಜ್ಯ ಸಹಕಾರ ಬ್ಯಾಂಕುಗಳು ಅಥವಾ ಅಪೆಕ್ಸ್ ಬ್ಯಾಂಕುಗಳು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಒಕ್ಕೂಟಗಳಾಗಿರುತ್ತವೆ. ಅಲ್ಪಾವಧಿ ಸಹಕಾರ ಸಾಲ ರಚನಾಕ್ರಮದಲ್ಲಿ

ಇವುಗಳು ಪ್ರಥಮ ಸ್ಥಾನದಲ್ಲಿರುತ್ತವೆ. ಸಾಮಾನ್ಯವಾಗಿ ರಾಜ್ಯ ಸಹಕಾರ ಬ್ಯಾಂಕುಗಳು ರಾಜ್ಯಗಳ ರಾಜಧಾನಿಯಲ್ಲಿರುತ್ತವೆ. ಪ್ರಾಥಮಿಕ ಸಾಲ ಸಹಕಾರ ಸಂಘಗಳಿಗೆ ಸಾಲ ವಿತರಣೆ ಮಾಡುವದಕ್ಕಾಗಿ ಇವುಗಳು ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಸಾಲವನ್ನು ಒದಗಿಸುತ್ತವೆ.

ದೀರ್ಘಾವಧಿ ಸಾಲ ಸಂಘಗಳ ರಚನಾ ಕ್ರಮ :

ಭಾರತದ ಹಲವಾರು ರಾಜ್ಯಗಳಲ್ಲಿ ದೀರ್ಘಾವಧಿ ಸಾಲ ಸಂಘಗಳ ರಚನಾಕ್ರಮವು ಎರಡು ಭಾಗಗಳನ್ನೊಳಗೊಂಡಿದೆ. ಅವುಗಳೆಂದರೆ -

೧. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು
೨. ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕುಗಳು

ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ತಾಲ್ಲೂಕು ಮಟ್ಟಗಳಲ್ಲಿ ಅಥವಾ ಜಿಲ್ಲಾ ಮಟ್ಟಗಳಲ್ಲಿ ಕಾರ್ಯನಿರ್ವಹಿಸುತ್ತವೆ. ಈ ಬ್ಯಾಂಕುಗಳು ರೈತರಿಗೆ ನೇರವಾಗಿ ದೀರ್ಘಾವಧಿ ಸಾಲವನ್ನು ಒದಗಿಸುತ್ತವೆ. ಸಾಮಾನ್ಯವಾಗಿ ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕುಗಳು, ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳನ್ನು ನಿಯಂತ್ರಿಸುತ್ತವೆ. ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕುಗಳು ರಾಜ್ಯ ಮಟ್ಟದಲ್ಲಿರುತ್ತವೆ. ಕೃಷಿಕರಿಗೆ ಹಣಕಾಸು ಒದಗಿಸುವ ಸಲುವಾಗಿ ಈ ಬ್ಯಾಂಕುಗಳು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಸಾಲವನ್ನು ಕೊಡುತ್ತವೆ.

ಸಹಕಾರ ಸಾಲ ನೀಡದ ಸಂಘಗಳ ರಚನಾ ಕ್ರಮ :

ಭಾರತದಲ್ಲಿ ಸಹಕಾರ ಸಾಲ ಸಂಘಗಳ ರಚನಾಕ್ರಮಕ್ಕಿಂತ ಸಹಕಾರ ಸಾಲ ನೀಡದ ಸಂಘಗಳ ರಚನಾಕ್ರಮವು ಭಿನ್ನವಾಗಿರುವುದು ಕಂಡುಬರುತ್ತದೆ. ವಿವಿಧ ಸಾಲ ನೀಡದ ಸಹಕಾರ ಸಂಘಗಳ ರಚನಾಕ್ರಮವು ಈ ಕೆಳಗಿನಂತಿದೆ.

* ಸಹಕಾರ ಮಾರಾಟ ಸಂಘಗಳ ರಚನಾಕ್ರಮ
* ಅನುಭೋಗಿಗಳ ಸಹಕಾರ ಸಂಘಗಳ ರಚನಾಕ್ರಮ

ಸಹಕಾರ ಮಾರಾಟ ಸಂಘಗಳ ರಚನಾಕ್ರಮ :

ಭಾರತದ ಸಹಕಾರ ಮಾರಾಟ ಸಂಘಗಳ ರಚನಾಕ್ರಮವು ಈ ಕೆಳಗಿನಂತಿದೆ:

* ತಾಲ್ಲೂಕು ಅಥವಾ ಗ್ರಾಮಮಟ್ಟದಲ್ಲಿನ ಪ್ರಾಥಮಿಕ ಸಹಕಾರ ಮಾರಾಟ ಸಂಘಗಳು.
* ಜಿಲ್ಲಾಮಟ್ಟದಲ್ಲಿ ಜಿಲ್ಲಾ ಅಥವಾ ಕೇಂದ್ರ ಸಹಕಾರ ಮಾರಾಟ ಸಂಘಗಳು.
* ರಾಜ್ಯ ಮಟ್ಟದಲ್ಲಿ ರಾಜ್ಯ ಸಹಕಾರ ಮಾರಾಟ ಸಂಘಗಳು ಅಥವಾ ಒಕ್ಕೂಟಗಳು (Federations)
* ರಾಷ್ಟ್ರೀಯ ಮಟ್ಟದಲ್ಲಿ ರಾಷ್ಟ್ರೀಯ ಸಹಕಾರ ಮಾರಾಟ ಒಕ್ಕೂಟ.

ಸಹಕಾರ ಮಾರಾಟ ಸಂಘಗಳ ರಚನಾಕ್ರಮದಲ್ಲಿ ನಮಗೆ ಕಂಡುಬರುವ ದೃಶ್ಯವೆಂದರೆ, ಅತ್ಯಂತ ಕೆಳಮಟ್ಟದಲ್ಲಿ ಪ್ರಾಥಮಿಕ ಸಹಕಾರ ಮಾರಾಟ ಸಂಘಗಳಿರುತ್ತವೆ. ಇವುಗಳನ್ನು ಸಹಜವಾಗಿ ಜಿಲ್ಲಾ ಮಟ್ಟದಲ್ಲಿರುವ ಜಿಲ್ಲಾ ಅಥವಾ ಕೇಂದ್ರ ಸಹಕಾರ ಮಾರಾಟ ಸಂಘಗಳು ನಿಯಂತ್ರಿಸುತ್ತವೆ. ಈ ಸಂಘಗಳನ್ನು ಸಾಮಾನ್ಯವಾಗಿ ರಾಜ್ಯಮಟ್ಟದಲ್ಲಿ ಕಾರ್ಯ ನಿರ್ವಹಿಸುವ ರಾಜ್ಯ ಸಹಕಾರ ಮಾರಾಟ ಒಕ್ಕೂಟಗಳು ನಿಯಂತ್ರಣದಲ್ಲಿರಿಸಿಕೊಂಡಿರುತ್ತವೆ. ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ವಿಧದ ಮಾರಾಟ ಸಹಕಾರ ಸಂಘಗಳು ಇದರ ನಿಯಂತ್ರಣಕ್ಕೆ ಒಳಪಡುತ್ತವೆ. ಹಾಗೆಯೇ ರಾಜ್ಯ ಮಾರಾಟ ಒಕ್ಕೂಟಗಳನ್ನು ರಾಷ್ಟ್ರೀಯ ಮಟ್ಟದಲ್ಲಿರುವ ರಾಷ್ಟ್ರೀಯ ಸಹಕಾರ ಮಾರಾಟ ಒಕ್ಕೂಟಗಳು ನಿಯಂತ್ರಿಸುತ್ತವೆ. ಹಾಗಾಗಿ, ರಾಷ್ಟ್ರೀಯ ಸಹಕಾರ ಮಾರಾಟ ಒಕ್ಕೂಟವು ಉತ್ತುಂಗ ಸಂಘವಾಗಿರುತ್ತದೆ ಎಂದು ಹೇಳಬಹುದು.

ಅನುಭೋಗಿಗಳ ಸಹಕಾರ ಸಂಘಗಳ ರಚನಾ ಕ್ರಮ :

ಭಾರತದಲ್ಲಿ ಅನುಭೋಗಿಗಳ ಅಥವಾ ಗ್ರಾಹಕರ ಸಹಕಾರ ಸಂಘಗಳ ರಚನಾ ಕ್ರಮವು ಈ ಕೆಳಗಿನಂತಿದೆ.

* ಕೆಳಮಟ್ಟದಲ್ಲಿರುವ ಪ್ರಾಥಮಿಕ ಅನುಭೋಗಿಗಳ ಸಹಕಾರ ಅಂಗಡಿಗಳು. ಇವು ಬಹುಮಟ್ಟಿಗೆ ಪಟ್ಟಣಗಳಲ್ಲಿ ಸದಸ್ಯರಿಗೆ ವಸ್ತುಗಳನ್ನು ಮಾರುತ್ತವೆ.

❋ ಜಿಲ್ಲಾಮಟ್ಟದಲ್ಲಿರುವ ಕೇಂದ್ರ ರಖಂ ಅನುಭೋಗಿಗಳ ಸಹಕಾರ ಅಂಗಡಿಗಳು. ಇವುಗಳು ರಾಜ್ಯ ಪ್ರಾಥಮಿಕ ಅನುಭೋಗಿಗಳ ಸಹಕಾರ ಅಂಗಡಿಗಳಿಗೆ ವಸ್ತುಗಳನ್ನು ಪೂರೈಸುತ್ತವೆ.

❋ ರಾಜ್ಯಮಟ್ಟದಲ್ಲಿ ಕಾರ್ಯನಿರ್ವಹಿಸುವ ರಾಜ್ಯ ಸಹಕಾರ ಅನುಭೋಗಿಗಳ ಒಕ್ಕೂಟಗಳು, ಇವುಗಳು ರಖಂ ಸಹಕಾರ ಅಂಗಡಿಗಳಿಗೆ ಸರಕುಗಳನ್ನು ಪೂರೈಸುತ್ತವೆ.

❋ ರಾಷ್ಟ್ರಮಟ್ಟದಲ್ಲಿರುವ ರಾಷ್ಟ್ರೀಯ ಸಹಕಾರ ಅನುಭೋಗಿಗಳ ಒಕ್ಕೂಟ. ಇದು ರಾಜ್ಯ ಸಹಕಾರ ಒಕ್ಕೂಟಗಳಿಗೆ ಸರಕುಗಳನ್ನು ಪೂರೈಸುತ್ತವೆ.

ರಚನಾ ವಿಧಾನ :

ಭಾರತದಲ್ಲಿ ಸಹಕಾರ ಸಂಘಗಳನ್ನು ರಚಿಸಬೇಕಾದರೆ ಕನಿಷ್ಠ ಪಕ್ಷ ಹತ್ತು ಮಂದಿ ಮೆಜಾರಿಟಿಗೆ ಬಂದವರು ಒಟ್ಟುಗೂಡಿ ಮೊದಲು ಸಂಘದ ನಿಬಂಧನೆಗಳನ್ನು ರಚಿಸಿಕೊಳ್ಳಬೇಕಾಗುತ್ತದೆ. ಈ ನಿಬಂಧನೆಗಳ ಸಹಿತವಾಗಿ ಅವರು ಒಂದು ಸಹಕಾರ ಸಂಘವನ್ನು ರಚಿಸಲು ಸಹಕಾರ ಸಂಘಗಳ ಉಪನಿಬಂಧಕರಿಗೆ ಅರ್ಜಿಸಲ್ಲಿಸಬೇಕು. ಸಹಕಾರ ಸಂಘಗಳ ಉಪನಿಬಂಧಕರ ಕಾರ್ಯಾಲಯವು ಜಿಲ್ಲಾ ಕೇಂದ್ರದಲ್ಲಿರುತ್ತದೆ. ಅರ್ಜಿಸಲ್ಲಿಸುವಾಗ ಸಂಘದ ನಿಯಮಾವಳಿಗಳನ್ನು, ಉದ್ದೇಶಗಳನ್ನು, ಸಾಮಾಜಿಕ ಕಳಕಳಿಯನ್ನು ಮತ್ತು ಪಾಲು ಬಂಡವಾಳಗಳ ವಿವರಗಳನ್ನು ಸರಿಯಾಗಿ ನಮೂದಿಸಬೇಕಾಗುತ್ತದೆ.

ಅರ್ಜಿಯಲ್ಲಿ ಸಮರ್ಪಕವಾದ ವಿವರಣೆ ನಮೂದಾಗಿದ್ದರೆ ಉಪನಿಬಂಧಕರು ನಂತರ ಆ ಸಂಘವನ್ನು ನೋಂದಾವಣೆ ಮಾಡಿಕೊಳ್ಳುತ್ತಾರೆ. ಆ ಸಂಘವು ಒಂದು ಹೆಸರನ್ನು ಸಹ ಸೂಚಿಸಬೇಕಾಗುತ್ತದೆ. ನೋಂದಣಿ ಆದ ನಂತರ ಸಹಕಾರ ಷೇರುಗಳ ವಿತರಣೆಯ ಮೂಲಕ ಹೊಸ-ಹೊಸ ಸದಸ್ಯರನ್ನು ಸೇರಿಸಿಕೊಂಡು ಸಹಕಾರ ಸಂಘ ತನ್ನ ವ್ಯವಹಾರದಲ್ಲಿ ತೊಡಗಬಹುದು. ನೋಂದಣಿಯಾದ ಸಂಘವು ಉಳಿದ ಸಂಸ್ಥೆಗಳಂತೆಯೇ ನ್ಯಾಯಾಂಗದ ಪರಿಧಿಯೊಳಗೆ ಬರುತ್ತದೆ. ಒಂದು ಸಹಕಾರ ಸಂಘವು ಈ ಕೆಳಕಂಡಂತೆ ಆಡಳಿತ ಮಂಡಳಿಯನ್ನು ಹೊಂದಿರಬೇಕು. ಅದು ಈ ರೀತಿಯಾಗಿದೆ-

* ಅಧ್ಯಕ್ಷರು - ಒಬ್ಬರು
* ಉಪಾಧ್ಯಕ್ಷರು - ಒಬ್ಬರು
* ಕಾರ್ಯದರ್ಶಿ - ಒಬ್ಬರು
* ಖಜಾಂಚಿ - ಒಬ್ಬರು
* ನಿರ್ದೇಶಕರುಗಳು - ಆರರಿಂದ ಎಂಟು ಮಂದಿ

ಈ ಮೇಲಿನ ಆಡಳಿತ ಸಮಿತಿಯನ್ನು ಚುನಾವಣೆಯ ಮೂಲಕ ಸಹಕಾರ ಸಂಘದ ಎಲ್ಲಾ ಸದಸ್ಯರು ಚುನಾಯಿಸಲ್ಪಡುವರು.

ಸಹಕಾರ ಸಂಘಗಳ ವಿಧಗಳು :

ಭಾರತದಲ್ಲಿ ಸಹಕಾರ ಸಂಘಗಳನ್ನು ಪ್ರಮುಖವಾಗಿ ಎರಡು ವಿಧಗಳಾಗಿ ವಿಂಗಡಿಸಬಹುದು - ಅವುಗಳೆಂದರೆ.

* ಸಾಲ ನೀಡುವ ಸಹಕಾರ ಸಂಘಗಳು
* ಸಾಲ ನೀಡದ ಸಹಕಾರ ಸಂಘಗಳು

ಸಾಲ ನೀಡುವ ಸಹಕಾರ ಸಂಘಗಳು

ಹೆಸರೇ ಸೂಚಿಸುವಂತೆ ಸಾಲ ನೀಡುವ ಸಹಕಾರ ಸಂಘಗಳ ಪ್ರಮುಖ ಉದ್ದೇಶ ಸಾಲ ಪೂರೈಕೆಯಾಗಿದೆ. ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಿಗೆ ಸಾಲ ಸೌಲಭ್ಯವನ್ನು ಈ ಪ್ರಕಾರದ ಸಂಘಗಳು ಒದಗಿಸುತ್ತವೆ. ಕೃಷಿ ಸಾಲಗಳೆಂದರೆ ಮುಖ್ಯವಾಗಿ ಅಲ್ಪಾವಧಿ ಸಾಲಗಳು, ಬೀಜ ಖರೀದಿ, ರಸಗೊಬ್ಬರ ಖರೀದಿ ಮುಂತಾದ ಚಟುವಟಿಕೆಗಳಿಗೆ ಸಾಲ ಮಂಜೂರು ಮಾಡುತ್ತವೆ. ಕೃಷಿಯೇತರ ಅಥವಾ ಕೃಷಿ ಸಂಬಂಧಿ ಚಟುವಟಿಕೆಗಳಾದ - ಜೇನು ಸಾಕಾಣಿಕೆ, ಕುರಿ ಸಾಕಾಣಿಕೆ, ಹಂದಿ ಸಾಕಾಣಿಕೆ, ಪುಷ್ಪೋದ್ಯಮ, ಕೋಳಿಸಾಕಾಣಿಕೆ ಮುಂತಾದ ಚಟುವಟಿಕೆಗಳಿಗೂ ಸಹ ಈ ಪ್ರಕಾರದ ಸಹಕಾರ ಸಂಘಗಳು ಸಾಲ ನೀಡುತ್ತವೆ. ಸದಸ್ಯರಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ಒದಗಿಸುವುದಕ್ಕಾಗಿ ಸಾಲ ಸಹಕಾರ ಸಂಘಗಳನ್ನು ತೆರೆಯಲಾಗಿದೆ. ಇವುಗಳು ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳ ಅಭಿವೃದ್ಧಿಯಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತವೆ. ಸಾಲ

ನೀಡುವ ಸಹಕಾರ ಸಂಘಗಳಲ್ಲಿ ಮುಖ್ಯವಾಗಿ ಎರಡು ಪ್ರಕಾರಗಳನ್ನು ಕಾಣುತ್ತೇವೆ. ಅವುಗಳು ಈ ಕೆಳಕಂಡಂತಿವೆ.

- ❋ ಕೃಷಿ ಸಾಲ ಸಹಕಾರ ಸಂಘಗಳು
- ❋ ಕೃಷಿಯೇತರ ಸಾಲ ಸಹಕಾರ ಸಂಘಗಳು.

ಕೃಷಿ ಸಾಲ ಸಹಕಾರ ಸಂಘಗಳು

ಗ್ರಾಮೀಣ ಪ್ರದೇಶಗಳಲ್ಲಿ ರೈತರಿಗೆ ಕಡಿಮೆಬಡ್ಡಿದರದಲ್ಲಿ ಸಾಲಸೌಲಭ್ಯವನ್ನು ಒದಗಿಸುವುದಕ್ಕೋಸ್ಕರ ರಚಿಸಲ್ಪಟ್ಟಿವೆ. ಆದ್ದರಿಂದ ಇವುಗಳನ್ನು ಕೃಷಿ ಸಾಲ ಸಂಘಗಳೆನ್ನುವರು. ಕೃಷಿ ಸಾಲ ಸಹಕಾರ ಸಂಘಗಳಲ್ಲಿ ಹಲವಾರು ಪ್ರಕಾರಗಳಿವೆ. ಅವುಗಳಲ್ಲಿ ಪ್ರಮುಖವಾದವುಗಳು ಈ ಕೆಳಕಂಡಂತಿವೆ.

- ❋ ಅಲ್ಪಾವಧಿ ಸಾಲ ನೀಡುವ ಸಹಕಾರ ಸಂಘಗಳು : ಇವುಗಳಲ್ಲಿ
  - ❋ ಪ್ರಾಥಮಿಕ ಸಹಕಾರ ಸಂಘಗಳು
  - ❋ ಕೇಂದ್ರ ಸಹಕಾರ ಸಂಘಗಳು
  - ❋ ರಾಜ್ಯ ಸಹಕಾರ ಸಂಘಗಳು
- ❋ ದೀರ್ಘಾವಧಿ ಸಾಲ ನೀಡುವ ಸಹಕಾರ ಸಂಘಗಳು : ಇವುಗಳಲ್ಲಿ
  - ❋ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು
  - ❋ ಕೇಂದ್ರ ಭೂ ಬ್ಯಾಂಕುಗಳು

ಕೃಷಿ ಸಾಲ ಸಹಕಾರ ಸಂಘಗಳನ್ನು ಈ ರೀತಿಯೂ ತೋರಿಸಬಹುದು.

ಕೃಷಿ ಸಾಲ ನೀಡುವ ಸಹಕಾರ ಸಂಘಗಳು

(ಅಥವಾ)

ಕೃಷಿ ಪತ್ತಿನ ಸಂಘಗಳು

- ಅಲ್ಪಾವಧಿ ಕೃಷಿ ಸಾಲ ಸಂಘಗಳು
  - ಪ್ರಾಥಮಿಕ ಸಹಕಾರ ಸಂಘಗಳು
  - ಕೇಂದ್ರ ಸಹಕಾರ ಸಂಘಗಳು
  - ರಾಜ್ಯ ಸಹಕಾರ ಸಂಘಗಳು
- ದೀರ್ಘಾವಧಿ ಕೃಷಿ ಸಾಲ ಸಂಘಗಳು
  - ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು
  - ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕುಗಳು

ಅಲ್ಪಾವಧಿ ಕೃಷಿ ಸಾಲ ಸಂಘಗಳು :

ಕೃಷಿ ಸಾಲ ಸಹಕಾರ ಸಂಘಗಳಲ್ಲಿ ಪ್ರಮುಖವಾದ ಪ್ರಕಾರವೆಂದರೆ ಅಲ್ಪಾವಧಿ ಕೃಷಿ ಸಾಲ ಸಂಘಗಳು. ಅಲ್ಪಾವಧಿ ಕೃಷಿ ಸಾಲ ಸಹಕಾರ ಸಂಘಗಳೆಂದರೆ-

- ಪ್ರಾಥಮಿಕ ಕೃಷಿ ಸಾಲ ಸಂಘಗಳು ಅಥವಾ ಗ್ರಾಮೀಣ ಸಾಲ ಸಹಕಾರ ಸಂಘಗಳು.
- ಕೇಂದ್ರ ಸಹಕಾರ ಬ್ಯಾಂಕುಗಳು (ಜಿಲ್ಲಾ ಮಟ್ಟದಲ್ಲಿ)
- ರಾಜ್ಯ ಸಹಕಾರ ಬ್ಯಾಂಕುಗಳು.

ಈ ಅಲ್ಪಾವಧಿ ಕೃಷಿ ಸಾಲ ಸಹಕಾರ ಸಂಘಗಳ ಸಂಕ್ಷಿಪ್ತ ವಿವರಣೆ ಈ ಮುಂದೆ ಮಾಡಲಾಗಿದೆ.

ಪ್ರಾಥಮಿಕ ಕೃಷಿ ಸಾಲ ಸಹಕಾರ ಸಂಘಗಳು ಅಥವಾ ಬ್ಯಾಂಕುಗಳು:

ಪ್ರಾಥಮಿಕ ಕೃಷಿ ಸಾಲ ಸಹಕಾರ ಸಂಘಗಳು ಉತ್ಪಾದಕಕಾರ್ಯಗಳಿಗಾಗಿ

ರೈತರಿಗೆ ಕಡಿಮೆಬಡ್ಡಿ ದರದಲ್ಲಿ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲವನ್ನು ಒದಗಿಸುವ ಉದ್ದೇಶದಿಂದ ಪ್ರಾಥಮಿಕ ಕೃಷಿ ಸಾಲ ಸಂಘಗಳನ್ನು ರಚಿಸಲಾಗಿದೆ. ಸಾಮಾನ್ಯವಾಗಿ ಅನಿಯಮಿತ ಜವಾಬ್ದಾರಿಯ ತಳಹದಿಯ ಮೇಲೆ ಈ ಸಂಘಗಳನ್ನು ನಿರ್ಮಿಸಲಾಗುವುದು. ಆದರೆ, ಇತ್ತೀಚೆಗೆ, ಈ ಸಂಘಗಳನ್ನು ನಿಯಮಿತ ಜವಾಬ್ದಾರಿಯ ಮೇಲೆ ರಚಿಸುವರು. ಹಾಗಾಗಿ ಇವುಗಳ ಕಾರ್ಯವ್ಯಾಪ್ತಿ ಗ್ರಾಮಮಟ್ಟದಲ್ಲಿರುವುದು.

ಪ್ರಾಥಮಿಕ ಕೃಷಿ ಸಾಲ ಸಂಘಗಳಿಗೆ ಮುಖ್ಯವಾಗಿ ಅವಶ್ಯಕವಾದ ಮೂಲಧನವು ಸದಸ್ಯರ ಪ್ರವೇಶ ಶುಲ್ಕ ಮತ್ತು ಷೇರು ಬಂಡವಾಳದಿಂದ, ಸದಸ್ಯರಿಂದ ಮತ್ತು ಸದಸ್ಯೇತರರಿಂದ ಪಡೆದ ಠೇವಣಿಯಿಂದಲೂ, ಕೇಂದ್ರ ಸಹಕಾರಿ ಬ್ಯಾಂಕುಗಳಿಂದ ಪಡೆದ ಸಾಲಗಳಿಂದ ಕೂಡಾ ಸಂಚಯನವಾಗುತ್ತದೆ. ಈ ಸಂಘಗಳಲ್ಲಿ ಈ ರೀತಿ ಸಂಗ್ರಹವಾದ ಅಥವಾ ಸೇಕರಣೆಯಾದ ಹಣವನ್ನು ಕಡಿಮೆಬಡ್ಡಿದರದಲ್ಲಿ (Low Rate of Interest) ಕೃಷಿ ಕೆಲಸಗಳಿಗಾಗಿ ಸದಸ್ಯರಿಗೆ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳಾಗಿ (Short-term and Medium term loans) ಕೊಡಲಾಗುವುದು. ಸಾಮಾನ್ಯವಾಗಿ ಮತ್ತೊಬ್ಬ ಸದಸ್ಯನ ವೈಯಕ್ತಿಕ ಭದ್ರತೆಯೂ ಸೇರಿದಂತೆ ವ್ಯಕ್ತಿಯ (ಸಾಲ ಪಡೆಯುವವನು) ವೈಯಕ್ತಿಕ ಭದ್ರತೆಯ ಮೇಲೆ (ಅಂದರೆ ಅವನು ಸಾಲ ತೀರಿಸಲು ಅರ್ಹನೆ ಇಲ್ಲವೇ ಎಂಬುದನ್ನು ಪರಿಗಣಿಸಿ) ಸಾಲವನ್ನು ಒದಗಿಸಲಾಗುತ್ತದೆ.

ಪ್ರಾಥಮಿಕ ಕೃಷಿ ಸಾಲ ಸಂಘಗಳನ್ನು ನಿರ್ದೇಶಕ ಮಂಡಳಿ (Board of Directors) ಯಿಂದ ಸಹಾಯ ಪಡೆಯುವ ಗೌರವ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳು ನಿರ್ವಹಿಸುತ್ತಾರೆ. ಭಾರತದಲ್ಲಿ ಪ್ರಾಥಮಿಕ ಕೃಷಿ ಸಾಲ ಸಂಘಗಳು ತೀವ್ರಗತಿಯ ಪ್ರಗತಿಯನ್ನು ಸಾಧಿಸಿರುವುದು ಕಂಡುಬರುತ್ತದೆ. ಅಂದರೆ ೧೯೮೦ರಲ್ಲಿ ಒಟ್ಟು ೫.೭೦ ಕೋಟಿ ಸದಸ್ಯರನ್ನು ಹೊಂದಿದ್ದ ೯೪,೦೦೦ ಪ್ರಾಥಮಿಕ ಕೃಷಿ ಸಾಲ ಸಂಘಗಳು ಅಸ್ತಿತ್ವದಲ್ಲಿದ್ದವು. ನಂತರ ಇವುಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಳವಾಗತೊಡಗಿತು. ಪ್ರಾಥಮಿಕ ಕೃಷಿ ಸಾಲ ಸಹಕಾರ ಸಂಘಗಳು ಸಾಕಷ್ಟು ಪ್ರಗತಿಯನ್ನು ಸಾಧಿಸಿದರೂ ಅವುಗಳಲ್ಲಿ ಕೆಲವು ದೋಷಗಳಿರುವುದು ಕಂಡು ಬರುತ್ತದೆ. ಅವುಗಳಲ್ಲಿರುವ ಮುಖ್ಯ ದೋಷಗಳು ಈ ಕೆಳಕಂಡಂತಿವೆ.

* ಸಂಘಗಳಲ್ಲಿರುವ ಮೂಲಧನ ಅಸಮರ್ಪಕವಾಗಿರುವುದು. ಸಮರ್ಪಕವಾದ ಹಣವಿಲ್ಲದ ಕಾರಣ, ಸದಸ್ಯರ ಹೆಚ್ಚುತ್ತಿರುವ ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ.

* ಸದಸ್ಯರಿಂದ ಮರುಪಾವತಿ ಮಾಡುವ ವಿಧಾನ ಸಮರ್ಪಕವಾಗಿಲ್ಲ. ಅದರ ಪರಿಣಾಮವಾಗಿ ಬಾಕಿ ಹಣವು (Balance) ಬೃಹತ್ತಾಗಿದೆ.

* ಸಂಘಗಳ ಮೇಲುಸ್ತುವಾರಿಯೂ ಸಹ ಸರಿಯಾಗಿಲ್ಲ. ಅಲ್ಲದೇ ಎಷ್ಟೋ ಸಂದರ್ಭಗಳಲ್ಲಿ ಆಡಳಿತವು ದಕ್ಷತೆಯಿಲ್ಲದ, ಅದರ ಬಗ್ಗೆ ಅರಿವಿಲ್ಲದ ವ್ಯಕ್ತಿಗಳ ಕೈ ಸೇರುವುದು ಕೂಡಾ ಒಂದು ಪ್ರಮುಖ ದೋಷವಾಗಿದೆ.


ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು :

ಒಂದು ನಿರ್ದಿಷ್ಟವಾದ ಪ್ರದೇಶದಲ್ಲಿ ಅಂದರೆ ಸಾಮಾನ್ಯವಾಗಿ ಜಿಲ್ಲೆಯ ಕೇಂದ್ರ ಸ್ಥಾನದಲ್ಲಿ ಕಾರ್ಯನಿರ್ವಹಿಸುವ ಜಿಲ್ಲಾಕೇಂದ್ರ ಸಹಕಾರ ಬ್ಯಾಂಕು ಪ್ರಾಥಮಿಕ ಸಾಲ ಸಂಘಗಳನ್ನು ನಿಯಂತ್ರಿಸುವ ಒಂದು ಸಂಸ್ಥೆಯಾಗಿದೆ. ಎಲ್ಲಾ ವಿಧವಾದ ಅಂದರೆ ಗ್ರಾಮೀಣ ಪ್ರದೇಶದ ಮತ್ತು ಪಟ್ಟಣ ಪ್ರದೇಶದ ಪ್ರಾಥಮಿಕ ಸಾಲ ಸಂಘಗಳು ಸಾಮಾನ್ಯವಾಗಿ ಈ ಬ್ಯಾಂಕಿಗೆ ಸಂಯೋಜನೆಯಾಗಿರುತ್ತವೆ. ಸಂಯೋಜನೆಗೊಂಡ ಪ್ರಾಥಮಿಕ ಸಾಲ ಸಂಘಗಳಲ್ಲದೇ ಇತರೇ ಸದಸ್ಯರೂ ಸಹ ಕೆಲವು ಕೇಂದ್ರ ಸಹಕಾರ ಬ್ಯಾಂಕುಗಳಲ್ಲಿರುತ್ತಾರೆ. ಕೇಂದ್ರ ಸಹಕಾರಿ ಬ್ಯಾಂಕು ಜಿಲ್ಲಾ ಕೇಂದ್ರದಲ್ಲಿ ಇರುತ್ತದೆ.

ಕೇಂದ್ರ ಸಹಕಾರಿ ಬ್ಯಾಂಕುಗಳು ಪ್ರಾಥಮಿಕ ಸಹಕಾರ ಸಂಘಗಳು ಮತ್ತು ರಾಜ್ಯ ಸಹಕಾರಿ ಬ್ಯಾಂಕುಗಳ ನಡುವೆ ಒಂದು ಸಂಪರ್ಕ ಸೇತುವೆಯಂತೆ ಕೆಲಸ ನಿರ್ವಹಿಸುತ್ತವೆ. ಕೇಂದ್ರ ಸಹಕಾರಿ ಬ್ಯಾಂಕಿನ ಹಣವು ಷೇರು ಬಂಡವಾಳ, ಮೀಸಲು ಹಣ, ಸದಸ್ಯರಿಂದ ಮತ್ತು ಜನರಿಂದ ಪಡೆದ ಠೇವಣಿ ಮತ್ತು ರಾಜ್ಯ ಸಹಕಾರ ಬ್ಯಾಂಕುಗಳಿಂದ ಹಣ ಸಹಾಯವನ್ನು ಪಡೆದುಕೊಳ್ಳುತ್ತವೆ. ಕೆಲವು ಸಂದರ್ಭಗಳಲ್ಲಿ ವಾಣಿಜ್ಯ ಬ್ಯಾಂಕುಗಳಿಂದಲೂ ಹಣಕಾಸಿನ ಸಹಾಯವನ್ನು ಪಡೆದುಕೊಳ್ಳುತ್ತವೆ. ಕೇಂದ್ರ ಸಹಕಾರಿ ಬ್ಯಾಂಕು ಈ ರೀತಿ ಒಟ್ಟು ಸಂಗ್ರಹಿಸಿದ ಹಣವನ್ನು ಪ್ರಾಥಮಿಕ ಸಾಲ ಸಹಕಾರ ಸಂಘಗಳಿಗೆ ಅವುಗಳು ತಮ್ಮ ಸದಸ್ಯರ ಹಣಕಾಸಿನ ಅವಶ್ಯಕತೆಗಳನ್ನು ಪೂರೈಸುವುದಕ್ಕಾಗಿ ಅಲ್ಪಾವಧಿ ಸಾಲದ ರೂಪದಲ್ಲಿ ವಿತರಿಸುತ್ತವೆ.

ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಆಡಳಿತವನ್ನು ಒಂದು ನಿರ್ದೇಶಕ ಮಂಡಳಿಯು ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತದೆ. ಈ ನಿರ್ದೇಶಕ ಮಂಡಳಿಯು ತನ್ನ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಪ್ರಾಥಮಿಕ ಸಾಲ ಸಹಕಾರ ಸಂಘಗಳ ಪ್ರತಿನಿಧಿಗಳಿಂದ, ವ್ಯಾಪಾರಯೋಗ್ಯತೆಯನ್ನು ಹೊಂದಿರುವವರಿಂದ ಹಾಗೂ ಅಂತಸ್ತುಗಳಿಂದ

ಕೂಡಿದ ವ್ಯಕ್ತಿಗಳಿಂದ ರಚಿತವಾಗುತ್ತದೆ. ಇದರಲ್ಲಿ ಒಬ್ಬರು ಅಧ್ಯಕ್ಷರಿರುತ್ತಾರೆ, ಅವರನ್ನು ಸದಸ್ಯರು ಚುನಾಯಿಸುತ್ತಾರೆ. ಹಾಗೆಯೇ ಸರ್ಕಾರದಿಂದ ನಿಯೋಜಿಸಲ್ಪಟ್ಟ ಕೆ.ಎ.ಎಸ್. ಅಧಿಕಾರಿಯೊಬ್ಬರು ವ್ಯವಸ್ಥಾಪಕ ನಿರ್ದೇಶಕರಾಗಿ (Managing Director) ಕಾರ್ಯನಿರ್ವಹಿಸುತ್ತಾರೆ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಸಾಂಸ್ಥಿಕ ರಚನೆ ಈ ರೀತಿಯಾಗಿರುತ್ತದೆ.



ಕಾರ್ಯಗಳು (Functions) :

ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು ಅನೇಕ ರೀತಿಯ ಕಾರ್ಯಗಳನ್ನು ನಿರ್ವಹಿಸುತ್ತದೆ. ಅವುಗಳಲ್ಲಿ ಪ್ರಮುಖವಾದವುಗಳನ್ನು ಈ ಕೆಳಗೆ ಪಟ್ಟಿ ಮಾಡಲಾಗಿದೆ.

* ಪ್ರಾಥಮಿಕ ಸಾಲ ಸಹಕಾರ ಸಂಘಗಳಿಗೆ ಸಾಲವನ್ನು ಒದಗಿಸುವುದು.
* ಒಂದು ಪ್ರಾಥಮಿಕ ಸಾಲ ಸಹಕಾರ ಸಂಘದ ಹಣವನ್ನು (ಮಿಗತೆ ಹಣ) ಮತ್ತೊಂದು ಪ್ರಾಥಮಿಕ ಸಾಲ ಸಂಘಕ್ಕೆ ಕೊಡುವಂತೆ ಮಾಡುವ ಮೂಲಕ ಪ್ರಾಥಮಿಕ ಸಾಲ ಸಂಘಗಳ ನಡುವೆ ಸಮತೋಲನವನ್ನುಂಟು ಮಾಡುತ್ತದೆ.
* ರಾಜ್ಯ ಸಹಕಾರ ಬ್ಯಾಂಕುಗಳಿಂದ ಸಾಲವನ್ನು ಪಡೆಯುತ್ತದೆ. ಪಡೆದ ಸಾಲವನ್ನು ಪ್ರಾಥಮಿಕ ಸಾಲ ಸಂಘಗಳಿಗೆ ಸಾಲವಾಗಿ ನೀಡುತ್ತದೆ. ಈ ವಿಧವಾಗಿ ಕೇಂದ್ರ ಸಹಕಾರಿ ಬ್ಯಾಂಕು ರಾಜ್ಯ ಸಹಕಾರ ಬ್ಯಾಂಕು

ಮತ್ತು ಪ್ರಾಥಮಿಕ ಸಾಲ ಸಂಘಗಳ ನಡುವೆ ಒಂದು ಕೊಂಡಿಯಂತೆ ಕಾರ್ಯ ನಿರ್ವಹಿಸುತ್ತದೆ.

* ಪ್ರಾಥಮಿಕ ಸಾಲ ಸಹಕಾರ ಸಂಘಗಳ ಸಾಲದ ಅವಶ್ಯಕತೆಗಳನ್ನು ಪೂರೈಸಲು, ಅದು ಸದಸ್ಯರಿಂದಲೂ ಹಾಗೂ ಸಾರ್ವಜನಿಕರಿಂದಲೂ ಠೇವಣಿಯನ್ನು ಸಂಗ್ರಹಿಸುತ್ತದೆ. ಆದರೆ ಪತ್ತು ನಿರ್ಮಾಣ (Credit Creation) ಕಾರ್ಯವನ್ನು ಮಾಡುವುದಿಲ್ಲ. ಅದು ಕೇವಲ ವಾಣಿಜ್ಯ ಬ್ಯಾಂಕುಗಳು ಮಾತ್ರ.

* ಪ್ರಾಥಮಿಕ ಸಾಲ ಸಹಕಾರ ಸಂಘಗಳ ಚಟುವಟಿಕೆಗಳ ಮೇಲುಸ್ತುವಾರಿಯನ್ನು ಹಾಗೂ ನಿಯಂತ್ರಣವನ್ನು ಕೇಂದ್ರ ಸಹಕಾರಿ ಬ್ಯಾಂಕು ಮಾಡುತ್ತದೆ.

* ವಾಣಿಜ್ಯ ಬ್ಯಾಂಕುಗಳು ನಿರ್ವಹಿಸುವ ಹಾಗೆ ಠೇವಣಿಗಳನ್ನು ಸ್ವೀಕರಿಸುವುದು, ಸಾಲ ನೀಡುವುದು, ಗ್ರಾಹಕರ ಪರವಾಗಿ ಚೆಕ್‌ಗಳನ್ನು ಮತ್ತು ಬಿಲ್ಲುಗಳನ್ನು ವಟಾಯಿಸುವುದು, ಬೆಲೆ ಬಾಳುವ ಒಡವೆಗಳಿಗೆ ಸುರಕ್ಷತಾ-ಭದ್ರತೆಯನ್ನು (Safe Deposit Lockers) ಒದಗಿಸುವುದು.

* ಕೃಷಿ ಚಟುವಟಿಕೆಗಳಿಗೆ ನೇರವಾಗಿಯೂ ಕೂಡಾ ತಮ್ಮ ಶಾಖೆಗಳಿಂದ ಸಾಲ-ಸೌಲಭ್ಯವನ್ನು ಒದಗಿಸುವ ವ್ಯವಸ್ಥೆ ಕೂಡಾ ಇದೆ.

ಪ್ರಸ್ತುತ ಈ ಬ್ಯಾಂಕುಗಳೂ ಸಹ ಪ್ರಾಥಮಿಕ ಸಹಕಾರಿ ಬ್ಯಾಂಕುಗಳ ಹಾಗೆಯೇ ಹಲವಾರು ಸಮಸ್ಯೆಗಳಿಂದ ಬಳಲುತ್ತಿವೆ. ತಮ್ಮ ಬಂಡವಾಳದ ಅಗತ್ಯಕ್ಕೋಸ್ಕರ ಪದೇ ಪದೇ ರಾಜ್ಯ ಸಹಕಾರ ಬ್ಯಾಂಕುಗಳನ್ನು ಅವಲಂಬಿಸಬೇಕಾದ ಪರಿಸ್ಥಿತಿ ಕಂಡು ಬರುತ್ತಿದೆ. ಇದಕ್ಕೆ ಮೂಲ ಕಾರಣ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಸೂಕ್ತ ಕ್ರಮಗಳನ್ನು ಕೈಗೊಳ್ಳದಿರುವುದು.

ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ದೇಶದ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿಯೂ ಅಸ್ತಿತ್ವದಲ್ಲಿವೆ. ಕೆಲವು ನೂತನವಾಗಿ ರಚನೆಯಾದ ಜಿಲ್ಲೆಗಳಲ್ಲಿ ಅಸ್ತಿತ್ವದಲ್ಲಿಲ್ಲ. ಮೊದಲು ಆ ಪ್ರದೇಶವು ಯಾವ ಜಿಲ್ಲೆಗೆ ಸೇರಿತ್ತೋ ಆ ಜಿಲ್ಲಾ ಕೇಂದ್ರದಲ್ಲೇ ಜಂಟಿಯಾಗಿ ಕಾರ್ಯನಿರ್ವಹಿಸುತ್ತಿದೆ. ಉದಾಹರಣೆಗೆ ಮೈಸೂರು-ಚಾಮರಾಜನಗರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು.

ರಾಜ್ಯ ಸಹಕಾರಿ ಬ್ಯಾಂಕುಗಳು ಅಥವಾ ಅಪೆಕ್ಸ್ ಬ್ಯಾಂಕುಗಳು :

ರಾಜ್ಯದ ಅತ್ಯುನ್ನತ ಸ್ಥಾನದಲ್ಲಿರುವ ಸಹಕಾರ ಬ್ಯಾಂಕ್ ಎಂದರೆ ರಾಜ್ಯ ಸಹಕಾರಿ ಬ್ಯಾಂಕು. ಇದನ್ನು ಅಪೆಕ್ಸ್ ಬ್ಯಾಂಕು ಎಂದು ಕರೆಯುತ್ತಾರೆ. ಅಲ್ಪಾವಧಿ ಸಹಕಾರಿ ಸಾಲದ ರಚನಾಕ್ರಮದಲ್ಲಿ ತುತ್ತತುದಿಯಲ್ಲಿರುವುದೇ ರಾಜ್ಯ ಸಹಕಾರಿ ಬ್ಯಾಂಕು. ಸಾಮಾನ್ಯವಾಗಿ ಈ ಬ್ಯಾಂಕು ರಾಜ್ಯದ ರಾಜಧಾನಿಯಲ್ಲಿರುತ್ತದೆ. ಪ್ರಸ್ತುತ ಭಾರತದ ಎಲ್ಲಾ ರಾಜ್ಯಗಳಲ್ಲೂ ರಾಜ್ಯ ಸಹಕಾರಿ ಬ್ಯಾಂಕುಗಳು ಅಸ್ತಿತ್ವದಲ್ಲಿವೆ. ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳನ್ನು 'ಅಪೆಕ್ಸ್' ಬ್ಯಾಂಕು ನಿಯಂತ್ರಿಸುತ್ತದೆ. ಹಾಗೆಯೇ ಅವುಗಳನ್ನು ಸಂಯೋಜಿಸುವ ಮೂಲಕ ಅವುಗಳಿಗೆ ಹಣಕಾಸಿನ ಸಹಾಯವನ್ನು ಮಾಡುತ್ತದೆ.

ಬಂಡವಾಳ ಸಂಗ್ರಹಣೆ :

ರಾಜ್ಯ ಸಹಕಾರಿ ಬ್ಯಾಂಕುಗಳ ಬಂಡವಾಳ ಸಂಗ್ರಹಣಾ ವಿಧಾನ ಈ ಕೆಳಕಂಡಂತಿದೆ.

- ಷೇರು ಬಂಡವಾಳ (Share capital)
- ಮೀಸಲು ಹಣ (Reserve Money)
- ಸದಸ್ಯರಿಂದ ಪಡೆದ ಹಣ (Money from Members)
- ಸಾರ್ವಜನಿಕರು (Public)
- ರಾಜ್ಯ ಸರ್ಕಾರ (State Government)
- ಕೇಂದ್ರ ಬ್ಯಾಂಕು (ಭಾರತದ ರಿಸರ್ವ್ ಬ್ಯಾಂಕು) Central Bank (RBI)
- ವಾಣಿಜ್ಯ ಬ್ಯಾಂಕುಗಳು (Commercial Banks)

ಆಡಳಿತ ವ್ಯವಸ್ಥೆ (Administrative System):

ರಾಜ್ಯ ಸಹಕಾರ ಬ್ಯಾಂಕಿನ ಆಡಳಿತ ವ್ಯವಸ್ಥೆಯು ಈ ರೀತಿಯಾಗಿರುತ್ತದೆ.

- ಅಧ್ಯಕ್ಷರು (ಸರ್ಕಾರದಿಂದ ನೇಮಿಸಲ್ಪಡುವರು)

* ನಿರ್ದೇಶಕರುಗಳು
* ಕೇಂದ್ರ ಸಹಕಾರಿ ಬ್ಯಾಂಕಿನ ಪ್ರತಿನಿಧಿಗಳು
* ವ್ಯವಸ್ಥಾಪಕ ನಿರ್ದೇಶಕರುಗಳು (ಕೆ.ಎ.ಎಸ್. ಹಿರಿಯ ಶ್ರೇಣಿ)
* ಉಪ ನಿರ್ದೇಶಕರು
* ಸಹಾಯಕ ನಿರ್ದೇಶಕರು
* ಸಿಬ್ಬಂದಿ ವರ್ಗದವರು.

ಕಾರ್ಯಗಳು :

ರಾಜ್ಯ ಸಹಕಾರಿ ಬ್ಯಾಂಕು ಅನೇಕ ರೀತಿಯ ಕಾರ್ಯಗಳನ್ನು ನಿರ್ವಹಿಸುತ್ತದೆ. ಅವುಗಳಲ್ಲಿ ಪ್ರಮುಖವಾದವುಗಳು ಈ ಕೆಳಕಂಡಂತಿವೆ.

* ಪ್ರಾಥಮಿಕ ಸಾಲ ಸಹಕಾರ ಸಂಘಗಳಿಗೆ ಕೇಂದ್ರ ಸಹಕಾರ ಬ್ಯಾಂಕುಗಳು ಹಣಕಾಸಿನ ಸೌಲಭ್ಯವನ್ನು ಒದಗಿಸಲು ಅನುಕೂಲವಾಗುವಂತೆ ರಾಜ್ಯ ಸಹಕಾರಿ ಬ್ಯಾಂಕು ಅವುಗಳಿಗೆ ಹಣಕಾಸನ್ನು ಪೂರೈಸುತ್ತದೆ.
* ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ನಡುವೆ ಇದು ಸಂಪರ್ಕ ಸೇತುವೆಯಾಗಿ ವರ್ತಿಸುತ್ತದೆ. ಕೆಲವು ಕೇಂದ್ರ ಸಹಕಾರ ಬ್ಯಾಂಕುಗಳ ಮಿಗುತೆ ಹಣವನ್ನು ಸಂಗ್ರಹಿಸುವ ಮೂಲಕ ಇತರ ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಅದನ್ನು ಕೊಡುತ್ತದೆ.
* ಭಾರತದ ಕೇಂದ್ರ ಬ್ಯಾಂಕಾದ ರಿಸರ್ವ್ ಬ್ಯಾಂಕಿನಿಂದ ಇದು ಹಣವನ್ನು ಎರವಲು ಪಡೆಯುತ್ತದೆ. ಈ ರೀತಿ ಪಡೆದ ಹಣವನ್ನು ಕೇಂದ್ರ ಸಹಕಾರ ಬ್ಯಾಂಕುಗಳಿಗೆ ಸಾಲವಾಗಿ ನೀಡುತ್ತದೆ.
* ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಚಟುವಟಿಕೆಗಳ ಮೇಲುಸ್ತುವಾರಿಯನ್ನು ಹಾಗೂ ನಿಯಂತ್ರಣವನ್ನು ಇದು ಮಾಡುತ್ತದೆ.
* ಸಮಾಜದಲ್ಲಿನ ಸರ್ವರಹಿತ ಸಾಧ್ಯವಾಗಿಸಲು ಇವುಗಳು ಸಹಕರಿಸುತ್ತವೆ.

ರಾಜ್ಯ ಸಹಕಾರಿ ಬ್ಯಾಂಕುಗಳು ೧೯೪೧ ರಿಂದ ಕಾಲ ಕ್ರಮೇಣ ಪ್ರಗತಿಯನ್ನು ಸಾಧಿಸುತ್ತಾ ಬಂದಿವೆ. ೧೯೮೧ರ ಜೂನ್ ತಿಂಗಳ ೩೦ರ ಅವಧಿಗೆ ೨೭ ರಾಜ್ಯ

ಸಹಕಾರಿ ಬ್ಯಾಂಕುಗಳು ಕಾರ್ಯ ನಿರ್ವಹಿಸುತ್ತಿದ್ದವು. ಪ್ರಸ್ತುತ ದೇಶದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ (Union Territories) ಸಹ ರಾಜ್ಯ ಸಹಕಾರಿ ಬ್ಯಾಂಕುಗಳನ್ನು ಕಾಣಬಹುದು.

ದೀರ್ಘಾವಧಿ ಕೃಷಿ ಸಾಲ ಸಂಘಗಳು :

ಭಾರತದಲ್ಲಿ ದೀರ್ಘಾವಧಿಗೆ ಸಾಲಸೌಲಭ್ಯವನ್ನು ಒದಗಿಸುವ (ಮುಖ್ಯವಾಗಿ ಕೃಷಿ ಚಟುವಟಿಕೆಗಳಿಗೆ) ದೀರ್ಘಾವಧಿ ಕೃಷಿ ಸಾಲ ಸಂಘಗಳಲ್ಲಿ ಕೂಡಾ ಎರಡು ವಿಧಗಳಿವೆ. ಅವುಗಳೆಂದರೆ

* ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು
* ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕುಗಳು

ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು (Primary Land Development Banks) :

ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳನ್ನು ಮೊದಲು ಪ್ರಾಥಮಿಕ ಭೂ ಅಡಮಾನ ಬ್ಯಾಂಕು ಎಂದು ಕರೆಯಲಾಗುತ್ತಿತ್ತು. ಆದರೆ ಇದು ಈಗ ಒಂದು ಸಹಕಾರಿ ಸಾಲ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ರೈತರಿಗೆ ಅವರ ಭೂಮಿಯ ಭದ್ರತೆಯ ಆಧಾರದ ಮೇಲೆ, ಮಧ್ಯಮದರದ ಬಡ್ಡಿಯಲ್ಲಿ (Medium Rate of Interest) ದೀರ್ಘಾವಧಿ ಸಾಲವನ್ನು ಪೂರೈಸುವುದಕ್ಕಾಗಿ ಇದು ಅಸ್ತಿತ್ವಕ್ಕೆ ಬಂದಿದೆ. ಈ ಸಾಲವನ್ನು ಅನೇಕ ವರ್ಷಗಳ ಸುಲಭ ಕಂತುಗಳಲ್ಲಿ (Instalments) ಮರುಪಾವತಿ ಮಾಡಬಹುದು.

ನಿಧಿ ಸಂಗ್ರಹಣೆ :

ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿಗೆ ನಿಧಿ ಸಂಗ್ರಹಣೆಯು ಈ ಕೆಳಗಿನಂತಿರುತ್ತದೆ.

* ಷೇರು ಬಂಡವಾಳ
* ಮೀಸಲು ಹಣ
* ಠೇವಣಿಗಳು
* ಡಿಬೆಂಚರುಗಳು
* ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕುಗಳ ಸಾಲಗಳು.

ಈ ರೀತಿಯ ಎಲ್ಲಾ ಮೂಲಗಳಿಂದ ಸಂಗ್ರಹಿಸಿದ ನಿಧಿಯನ್ನು ಸಾಮಾನ್ಯವಾಗಿ ೧೫ ವರ್ಷಗಳಿಂದ ೨೫ ವರ್ಷಗಳವರೆಗಿನ ಅವಧಿಯಲ್ಲಿ ಸದಸ್ಯರು ಮರುಪಾವತಿ (Repayment) ಮಾಡಬಹುದಾದ ದೀರ್ಘಾವಧಿ ಸಾಲವಾಗಿ ನೀಡಲಾಗುವುದು.

ಸಾಲವನ್ನು ನೀಡುವ ಚಟುವಟಿಕೆಗಳು :

ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ಹೆಸರೇ ಸೂಚಿಸುವಂತೆ ಭೂ ಅಭಿವೃದ್ಧಿಗಾಗಿ ದೀರ್ಘಾವಧಿ ಸಾಲವನ್ನು ನೀಡುತ್ತವೆ. ಭೂ ಅಭಿವೃದ್ಧಿಯ ವಿಶೇಷ ಚಟುವಟಿಕೆಗಳು ಈ ರೀತಿಯಾಗಿವೆ.

- ಬಾವಿ ತೋಡುವುದು
- ಟ್ರಾಕ್ಟರ್ ಕೊಳ್ಳುವುದು
- ವ್ಯವಸಾಯದ ಉಪಕರಣಗಳನ್ನು ಕೊಳ್ಳುವುದು
- ಹಳೆಯ ಸಾಲಗಳನ್ನು ಮರುಪಾವತಿ ಮಾಡಲು
- ಕೊಳವೆ ಬಾವಿ ಮುಂತಾದವುಗಳಿಗೆ ಸಾಲವನ್ನು ನೀಡುತ್ತವೆ.

ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ತಾಲ್ಲೂಕು ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತವೆ. ಪ್ರಸ್ತುತ ದೇಶದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿಯೂ ಸಹ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ಅಸ್ತಿತ್ವದಲ್ಲಿವೆ.

ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕುಗಳು (Central Land Development Banks) :

ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕುಗಳನ್ನು ಮೊದಲು ಕೇಂದ್ರ ಭೂ ಅಡಮಾನ ಬ್ಯಾಂಕುಗಳೆಂದು ಕರೆಯಲಾಗುತ್ತಿತ್ತು. ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕುಗಳು ರಾಜ್ಯಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತವೆ. ಇವುಗಳು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳ ಮೇಲುಸ್ತುವಾರಿ ಹಾಗೂ ನಿಯಂತ್ರಣವನ್ನು ಮಾಡುತ್ತವೆ. ರೈತರಿಗೆ ಹಣದ ಸಹಾಯವನ್ನು ನೀಡಲು ಅನುಕೂಲವಾಗುವಂತೆ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ದೀರ್ಘಾವಧಿ ಸಾಲವನ್ನು (Long-term loans) ಪೂರೈಸುವುದು ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕುಗಳ ಪ್ರಮುಖ ಉದ್ದೇಶವಾಗಿದೆ.

ನಿಧಿ ಸಂಗ್ರಹಣೆ :

ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕಿನ ನಿಧಿ ಸಂಗ್ರಹಣೆಯು ಈ ಕೆಳಗಿನಂತಿದೆ-

* ಶೇರುಗಳು
* ಸಾಲಪತ್ರಗಳು
* ಮೀಸಲು ಹಣ
* ಠೇವಣಿಗಳು
* ಡಿಬೆಂಚರುಗಳು
* ಭಾರತದ ರಿಸರ್ವ್ ಬ್ಯಾಂಕಿನಿಂದ ಪಡೆದ ಸಾಲ

ಈ ರೀತಿ ಎಲ್ಲಾ ಮೂಲಗಳಿಂದ ಸಂಗ್ರಹಿಸಿದ ಹಣವನ್ನು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ದೀರ್ಘಾವಧಿ ಸಾಲಗಳನ್ನು ಪೂರೈಸುತ್ತವೆ. ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕುಗಳು ಉತ್ತಮವಾದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಉತ್ತಮ ಪ್ರಗತಿಯನ್ನು ಸಾಧಿಸುತ್ತಿವೆ. ಪ್ರಸ್ತುತ ದೇಶದ ಎಲ್ಲಾ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲೂ ಕೇಂದ್ರ ಭೂ ಅಭಿವೃದ್ಧಿ ಬ್ಯಾಂಕುಗಳು ಕಾರ್ಯ ನಿರ್ವಹಿಸುತ್ತಿರುವುದು ಕಂಡುಬರುತ್ತದೆ.

ಕೃಷಿಯೇತರ ಸಾಲ ಸಹಕಾರ ಸಂಘಗಳು :

ಭಾರತದಲ್ಲಿ ಸಹಕಾರ ಸಂಸ್ಥೆಗಳ ವಿಧಾನಗಳಲ್ಲಿ ಕಂಡು ಬರುವ ಮತ್ತೊಂದು ವಿಧಾನವೆಂದರೆ, ಕೃಷಿಯೇತರ ಚಟುವಟಿಕೆಗಳಿಗೆ ಸಾಲವನ್ನು ನೀಡುವ ಸಹಕಾರ ಸಂಘಗಳು. ಕೃಷಿಯೇತರ ಸಾಲ ಪೂರೈಕೆಯ ಸಹಕಾರ ಸಂಘಗಳು ಹೆಚ್ಚಾಗಿ ನಗರ ಪ್ರದೇಶಗಳಲ್ಲಿ ಕಂಡು ಬರುತ್ತವೆ. ಕೃಷಿಯೇತರ ಸಾಲ ಸಹಕಾರ ಸಂಘಗಳು ಈ ಕೆಳಕಂಡವರಿಗೆ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲವನ್ನು ಒದಗಿಸುತ್ತವೆ.

* ಸರ್ಕಾರಿ ನೌಕರರು (Govt. Employees)
* ಸಣ್ಣ ವ್ಯಾಪಾರಿಗಳು (Small Businessmen)
* ಕುಶಲ ಕರ್ಮಿಗಳು (Artisans)
* ಮಧ್ಯಮ ಆದಾಯವುಳ್ಳವರು (Middle Income Group)

* ಕಾರ್ಮಿಕರು (Labourers)

ಕೃಷಿಯೇತರ ಸಾಲ ಸಹಕಾರ ಸಂಘಗಳಲ್ಲಿ ಪ್ರಮುಖವಾಗಿ ಎರಡು ಪ್ರಕಾರಗಳಿವೆ. ಅವುಗಳೆಂದರೆ -

* ನಗರ ಪ್ರದೇಶದ ಸಹಕಾರಿ ಬ್ಯಾಂಕುಗಳು.
* ಉದ್ಯೋಗಿಗಳ ಸಾಲ ಸಹಕಾರ ಸಂಘಗಳು.

ನಗರ ಪ್ರದೇಶದ ಸಹಕಾರಿ ಬ್ಯಾಂಕುಗಳು :

ಕೃಷಿಯೇತರ ಸಾಲ ಸಹಕಾರ ಸಂಘಗಳಲ್ಲಿ ಮೊದಲನೆಯದಾಗಿ ಕಂಡುಬರುವ ಪ್ರಕಾರವೇ ನಗರ ಪ್ರದೇಶದ ಸಹಕಾರಿ ಬ್ಯಾಂಕುಗಳು. ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲವನ್ನು ನಗರ ಪ್ರದೇಶದ ಸಹಕಾರಿ ಬ್ಯಾಂಕುಗಳು ಒದಗಿಸುತ್ತವೆ. ಈ ಕೆಳಕಂಡವರಿಗೆ ನಗರ ಪ್ರದೇಶದ ಸಹಕಾರಿ ಬ್ಯಾಂಕುಗಳು ಸಾಲಸೌಲಭ್ಯವನ್ನು ಒದಗಿಸುತ್ತವೆ. ಅವುಗಳೆಂದರೆ.

* ಕುಶಲ ಕರ್ಮಿಗಳು
* ಮಧ್ಯಮವರ್ಗದವರು
* ಕಾರ್ಮಿಕರು
* ಸರ್ಕಾರಿ ನೌಕರರು
* ಕಸಬುದಾರರು
* ಸಣ್ಣ ವ್ಯಾಪಾರಿಗಳು

ಸಾಲ ಪೂರೈಕೆಗೆ ಅಗತ್ಯವಿರುವ ಹಣವನ್ನು ಶುಲ್ಕ, ಶೇರು, ಠೇವಣಿಗಳ ರೂಪದಲ್ಲಿ ಪಡೆಯುತ್ತವೆ. ನಗರ ಪ್ರದೇಶದ ಸಹಕಾರಿ ಬ್ಯಾಂಕುಗಳು ವಾಣಿಜ್ಯ ಬ್ಯಾಂಕುಗಳ ರೀತಿಯೂ ಕಾರ್ಯ ನಿರ್ವಹಿಸುತ್ತವೆ. ಸಾಮಾನ್ಯವಾಗಿ ಇವುಗಳ ಹೊಣೆಗಾರಿಕೆಯು ನಿಯಮಿತವಾಗಿರುತ್ತದೆ. ಇವುಗಳು ಠೇವಣಿ ಸ್ವೀಕರಿಸುವುದು, ಸಾಲ ನೀಡುವುದು, ಬಿಲ್ಲುಗಳನ್ನು ಪಾವತಿ ಮಾಡುವುದು ಹಾಗೂ ಚೆಕ್ಕುಗಳನ್ನು ವಟಾಯಿಸುವುದು ಮುಂತಾದ ಕಾರ್ಯಗಳನ್ನು ಮಾಡುತ್ತವೆ.

ನಿಧಿ ಸಂಗ್ರಹಣೆ :

ನಗರ ಪ್ರದೇಶದ ಸಹಕಾರ ಬ್ಯಾಂಕುಗಳು ಈ ಕೆಳಕಂಡ ಮೂಲಗಳಿಂದ

ನಿಧಿಯನ್ನು ಸಂಗ್ರಹಿಸುತ್ತವೆ. ಅವುಗಳೆಂದರೆ :

* ಸದಸ್ಯರ ಪ್ರವೇಶ ಶುಲ್ಕ
* ಶೇರು ಬಂಡವಾಳ
* ಠೇವಣಿಗಳು
* ಕೇಂದ್ರ ಸಹಕಾರ ಬ್ಯಾಂಕುಗಳಿಂದ ಸಾಲ

ಈ ರೀತಿ ಸಂಗ್ರಹಿಸಿದ ನಿಧಿಯಿಂದ ಕಡಿಮೆ ಬಡ್ಡಿ ದರದಲ್ಲಿ ಸದಸ್ಯರಿಗೆ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳಾಗಿ ಪೂರೈಸುತ್ತವೆ.

ಉದ್ಯೋಗಿಗಳ ಸಾಲ ಸಹಕಾರ ಸಂಘಗಳು :

ಉದ್ಯೋಗಿಗಳ ಸಾಲ ಸಹಕಾರ ಸಂಘಗಳು ಕೂಡಾ ನಗರ ಪ್ರದೇಶದ ಸಹಕಾರ ಬ್ಯಾಂಕುಗಳ ರೀತಿಯೇ ಕಾರ್ಯ ನಿರ್ವಹಿಸುತ್ತವೆ. ಸರ್ಕಾರದ ಕಛೇರಿಗಳಲ್ಲಿ, ಅರೆ-ಸರ್ಕಾರಿ ಕಛೇರಿಗಳಲ್ಲಿ, ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವ ನೌಕರರಿಗೆ ಅಲ್ಪಾವಧಿ ಸಾಲವನ್ನು ಪೂರೈಸುವುದಕ್ಕಾಗಿ ಪಟ್ಟಣ ಪ್ರದೇಶಗಳಲ್ಲಿ, ನಗರ ಪ್ರದೇಶಗಳಲ್ಲಿ ರಚನೆಯಾಗುವ ಸಾಲ ಸಂಘಗಳನ್ನು ಉದ್ಯೋಗಿಗಳ ಸಾಲ ಸಹಕಾರ ಸಂಘಗಳು ಎಂದು ಕರೆಯುವರು. ಇವುಗಳನ್ನು ಸಂಬಳ ಪಡೆಯುವವರ ಸಂಘಗಳೆಂದು ಕರೆಯುತ್ತಾರೆ. ಅವುಗಳ ಜವಾಬ್ದಾರಿಯು ಮಿತವಾಗಿರುತ್ತದೆ. ಇವುಗಳ ಮುಖ್ಯ ಉದ್ದೇಶವೆಂದರೆ ಸದಸ್ಯರಿಗೆ ಕಡಿಮೆ ಬಡ್ಡಿ ದರದಲ್ಲಿ ಅಲ್ಪಾವಧಿ ಸಾಲವನ್ನು ಪೂರೈಸುವುದಾಗಿದೆ.

ನಿಧಿ ಸಂಗ್ರಹಣೆ :

ನಗರ ಪ್ರದೇಶದ ಸಹಕಾರ ಬ್ಯಾಂಕುಗಳಂತೆಯೇ ಉದ್ಯೋಗಿಗಳ ಸಾಲ ಸಹಕಾರ ಸಂಘಗಳೂ ಸಹ ಈ ಕೆಳಕಂಡ ಮೂಲಗಳಿಂದ ನಿಧಿಯನ್ನು ಸಂಗ್ರಹಿಸುತ್ತವೆ. ಅವುಗಳೆಂದರೆ -

* ಸದಸ್ಯರ ಪ್ರವೇಶ ಶುಲ್ಕ
* ಷೇರು ಬಂಡವಾಳ

* ಸದಸ್ಯರ ಠೇವಣಿಗಳು
* ಸದಸ್ಯೇತರರ ಠೇವಣಿಗಳು
* ಕೇಂದ್ರ ಸಹಕಾರ ಬ್ಯಾಂಕಿನಿಂದ ಪಡೆದ ಸಾಲಗಳು

ಕೃಷಿಯೇತರ ಸಾಲ ಸಹಕಾರ ಸಂಘಗಳಿಗೆ ಉದಾಹರಣೆ :

* ಬಳಕೆದಾರರ ಸಹಕಾರ ಸಂಘ
* ಕೈಗಾರಿಕಾ ಸಹಕಾರ ಸಂಘ
* ಸಹಕಾರಿ ಗೃಹ ನಿರ್ಮಾಣ ಸಂಘ
* ಉತ್ಪಾದಕರ ಸಂಘ
* ಹಾಲು ಉತ್ಪಾದಕರ ಸಹಕಾರ ಸಂಘ
* ಸಾರಿಗೆ ಸಹಕಾರ ಸಂಘ
* ವಿದ್ಯಾರ್ಥಿಗಳ ಸಹಕಾರ ಸಂಘ
* ಟೈಲರಿಂಗ್ ಸಹಕಾರ ಸಂಘ
* ಕೋಳಿ, ಹಂದಿ, ಕುರಿ, ಸಾಕಾಣಿಕೆ ಸಹಕಾರ ಸಂಘ
* ನೇಕಾರರ ಸಹಕಾರ ಸಂಘ
* ಮಹಿಳಾ ಸಹಕಾರ ಸಂಘ
* ನೀರು ಬಳಕೆದಾರರ ಸಹಕಾರ ಸಂಘ
* ಹ್ಯಾಂಡಿ ಪೌಂಡಿಂಗ್ ಸಹಕಾರ ಸಂಘ
* ವಿದ್ಯುಚ್ಛಕ್ತಿ ಸಹಕಾರ ಸಂಘ

ಸಾಲ ನೀಡದ ಸಹಕಾರ ಸಂಘಗಳು :

ಸಾಲವನ್ನು ಪೂರೈಸುವ ಉದ್ದೇಶವಿಲ್ಲದೆ, ನ್ಯಾಯ ಬೆಲೆಯಲ್ಲಿ ಸದಸ್ಯರಿಗೆ ವಸ್ತುಗಳನ್ನು ಒದಗಿಸುವುದು, ಉತ್ತಮ ಬೆಲೆಯಲ್ಲಿ ಸದಸ್ಯರ ಉತ್ಪನ್ನಗಳನ್ನು ಮಾರಾಟ ಮಾಡುವುದು ಮುಂತಾದ ಕೆಲಸಗಳನ್ನು ಮಾಡುವ ಸಂಘಗಳಿಗೆ ಸಾಲ ನೀಡದ ಸಹಕಾರ ಸಂಘಗಳು ಎಂದು ಕರೆಯಲಾಗುತ್ತದೆ. ಇವುಗಳಲ್ಲಿ ಮುಖ್ಯವಾಗಿ ಎರಡು ವಿಧಗಳಿವೆ. ಅವುಗಳೆಂದರೆ -

* ಸಾಲ ನೀಡದ ಕೃಷಿ ಸಂಘಗಳು
* ಸಾಲ ನೀಡದ ಕೃಷಿಯೇತರ ಸಂಘಗಳು

ಸಾಲ ನೀಡದ ಕೃಷಿ ಸಂಘಗಳು :

ಸಾಲ ನೀಡದ ಕೃಷಿ ಸಂಘಗಳಲ್ಲಿಯೂ ಎರಡು ಮುಖ್ಯವಾದ ಪ್ರಕಾರಗಳಿವೆ. ಅವುಗಳೆಂದರೆ -

* ಸಹಕಾರ ಮಾರಾಟ ಸಂಘಗಳು
* ಸಹಕಾರ ವ್ಯವಸಾಯ ಸಂಘಗಳು

ಸಹಕಾರ ಮಾರಾಟ ಸಂಘಗಳು

ರೈತರು, ಕಸಬುದಾರರು ಅಥವಾ ಸಣ್ಣ ಉತ್ಪಾದಕರು ಸೇರಿಕೊಂಡು ರಚಿಸುವ ಸಂಘಗಳನ್ನು ಸಹಕಾರ ಮಾರಾಟ ಸಂಘಗಳೆಂದು ಕರೆಯುವರು. ಈ ಸಹಕಾರ ಮಾರಾಟ ಸಂಘಗಳು ರೈತರ ಹುಟ್ಟುವಳಿಯನ್ನು ಯೋಗ್ಯವಾದ ಬೆಲೆಗೆ ಮಾರಾಟ ಮಾಡಲು ಸಹಾಯ ಮಾಡುತ್ತವೆ. ರೈತರು ಮಾರುಕಟ್ಟೆಯಲ್ಲಿ ಮಧ್ಯವರ್ತಿಗಳಿಂದ ಮತ್ತು ವ್ಯಾಪಾರಿಗಳಿಂದ ಶೋಷಣೆಗೊಳಗಾಗುವುದನ್ನು ತಪ್ಪಿಸುವ ಸಲುವಾಗಿ ಈ ರೀತಿಯ ಸಹಕಾರ ಮಾರಾಟ ಸಂಘಗಳನ್ನು ರಚಿಸಲಾಗುತ್ತದೆ. ಕೃಷಿ ಉತ್ಪನ್ನಗಳ ಮಾರಾಟವೇ ಇವುಗಳ ಮುಖ್ಯ ಕಾರ್ಯವಾಗಿರುತ್ತದೆ. ಇವುಗಳು ಸದಸ್ಯರಿಂದ ಉತ್ಪನ್ನಗಳನ್ನು ನೇರವಾಗಿ ಕೊಂಡುಕೊಳ್ಳುವ ಮೂಲಕ ತಾವೇ ಮಾರಾಟ ಮಾಡಬಹುದು ಅಥವಾ ಸದಸ್ಯರಿಗಾಗಿ ಅವು ಕೇವಲ ಮಾರಾಟದ ಏಜೆಂಟರಾಗಿ ಕೆಲಸಮಾಡುವುದರ ಜೊತೆಗೆ ಆ ವಸ್ತುಗಳ ಉತ್ಪಾದನಾ ವಿಧಾನ ಮತ್ತು ವರ್ಗೀಕರಣದಲ್ಲಿಯೂ ಉತ್ಪಾದನೆಯಾದ ವಸ್ತುಗಳನ್ನು ದಾಸ್ತಾನು ಮಾಡುವ ಸೌಲಭ್ಯವನ್ನು ಕಲ್ಪಿಸುತ್ತವೆ, ಹಾಗೆಯೇ ಆ ವಸ್ತುಗಳಿಗೆ ಬದಲಾಗಿ ಸಾಲ ಪೂರೈಸುವಲ್ಲಿಯೂ ಅವು ನೆರವು ನೀಡುತ್ತವೆ.

ಭಾರತದಲ್ಲಿ ಪ್ರಾಥಮಿಕ ಮಾರಾಟ ಸಂಘಗಳು, ಕೇಂದ್ರ ಮಾರಾಟ ಸಂಘಗಳು ಹಾಗೂ ರಾಜ್ಯ ಮಾರಾಟ ಒಕ್ಕೂಟಗಳೂ ಅಸ್ತಿತ್ವದಲ್ಲಿವೆ. ಹಾಗೆಯೇ ಅಖಿಲಭಾರತ ಮಟ್ಟದಲ್ಲಿ ರಾಷ್ಟ್ರೀಯ ಕೃಷಿ ಸಹಕಾರ ಮಾರಾಟ ಒಕ್ಕೂಟವೂ ಕೂಡಾ ಕಾರ್ಯ ನಿರ್ವಹಿಸುತ್ತಿದೆ.

ಸಹಕಾರ ವ್ಯವಸಾಯ ಸಂಘಗಳು :

ಸಹಕಾರ ವ್ಯವಸಾಯ ಸಂಘಗಳು ಉತ್ಪಾದನೆಯನ್ನು ಹೆಚ್ಚಿಸುವ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತವೆ. ಈ ಸಂಘಗಳ ಸದಸ್ಯರು ತಮ್ಮ ಹಿಡುವಳಿಗಳನ್ನು ಒಂದುಗೂಡಿಸಿ, ಆಧುನಿಕವಾದ ವಿಧಾನದಲ್ಲಿ ವೈಜ್ಞಾನಿಕವಾಗಿ ವ್ಯವಸಾಯವನ್ನು ಮಾಡುತ್ತವೆ. ಸಣ್ಣ ರೈತರು, ಭೂ ರಹಿತ ಒಕ್ಕಲುತನದವರು, ದೊಡ್ಡ ಪ್ರಮಾಣದಲ್ಲಿ ವ್ಯವಸಾಯವನ್ನು ಮಾಡಿ ಅದರ ಪ್ರಯೋಜನವನ್ನು ಪಡೆಯುವುದಕ್ಕೋಸ್ಕರ ಗ್ರಾಮೀಣ ಪ್ರದೇಶಗಳಲ್ಲಿ ರಚಿಸುವ ಸಂಘಗಳೇ ಸಹಕಾರ ವ್ಯವಸಾಯ ಸಂಘಗಳು. ಉತ್ಪಾದನೆ ಅಧಿಕಗೊಳಿಸುವುದು ಇದರ ಮುಖ್ಯ ಉದ್ದೇಶ. ಅವರವರ ಆಸ್ತಿಯ ಗಾತ್ರಕ್ಕೆ ಅನುಗುಣವಾಗಿ ವರ್ಷದ ಕೊನೆಯಲ್ಲಿ ಪ್ರತಿಫಲ ವಿತರಣೆಯಾಗುತ್ತದೆ.

ಭಾರತದಲ್ಲಿ ಸಹಕಾರ ವ್ಯವಸಾಯ ಸಂಘಗಳಲ್ಲಿ ಮುಖ್ಯವಾಗಿ ನಾಲ್ಕು ಪ್ರಕಾರಗಳಿವೆ. ಅವುಗಳೆಂದರೆ -

- ಸಹಕಾರ ಉತ್ತಮ ವ್ಯವಸಾಯ ಸಂಘ
- ಸಹಕಾರ ಜಂಟಿ/ಸಂಯುಕ್ತ ವ್ಯವಸಾಯ ಸಂಘ
- ಸಹಕಾರ ಒಕ್ಕಲುತನ ವ್ಯವಸಾಯ ಸಂಘ
- ಸಹಕಾರ ಕೂಡು/ಸಾಮೂಹಿಕ ವ್ಯವಸಾಯ ಸಂಘ

ಈ ಪ್ರಕಾರಗಳ ಸಂಕ್ಷಿಪ್ತ ಪಕ್ಷಿನೋಟ ಈ ಕೆಳಕಂಡಂತಿದೆ.

ಸಹಕಾರ ಉತ್ತಮ ವ್ಯವಸಾಯ ಸಂಘ :

ಈ ಪ್ರಕಾರದಲ್ಲಿ ಮುಖ್ಯವಾಗಿ ವ್ಯವಸಾಯಕ್ಕಾಗಿ ಸಂಘಗಳು ಹಮ್ಮಿಕೊಂಡ ಯೋಜನೆಯನ್ನು ಅನುಸರಿಸುತ್ತಾ ರೈತರು ತಮ್ಮ ಅಧೀನದಲ್ಲಿರುವ ಭೂಮಿಯಲ್ಲಿ ಸ್ವತಂತ್ರವಾಗಿ ಸಾಗುವಳಿಯನ್ನು ಮಾಡುವರು. ಸಂಘವು ವ್ಯವಸಾಯದ ಅಭಿವೃದ್ಧಿಗೋಸ್ಕರ ಸದಸ್ಯರಿಗೆ ಉತ್ತಮ ಬೀಜ, ರಸಗೊಬ್ಬರ, ಸಲಕರಣೆ, ಯಂತ್ರೋಪಕರಣ ಮುಂತಾದವುಗಳನ್ನು ಪೂರೈಸುತ್ತದೆ. ಇದು ಅಲ್ಲದೇ ಸಂಘವು ಬೇಸಾಯದ ಕ್ರಮವನ್ನು ಹಂತ ಹಂತವಾಗಿ ಪರಿಶೀಲಿಸುತ್ತದೆ. ಹಾಗೆಯೇ ಸಂಘವು ಸದಸ್ಯರ ಕೃಷಿ ಉತ್ಪನ್ನಗಳ ಗುಣಮಟ್ಟದ ವರ್ಗೀಕರಣ ಹಾಗೂ ಮಾರಾಟದ ಕಾರ್ಯದಲ್ಲಿ ಸಹಾಯವನ್ನು ಮಾಡಿ ಉತ್ತಮ ಬೆಲೆ ಸಿಗುವಂತೆ ಮಾಡುತ್ತದೆ.

ಸಹಕಾರ ಜಂಟಿ/ಸಂಯುಕ್ತ ವ್ಯವಸಾಯ ಸಂಘ :

ಈ ಪ್ರಕಾರದ ಸಂಘದಲ್ಲಿ ಭೂಮಿಯ ಮೇಲೆ ವೈಯಕ್ತಿಕವಾದ ಮಾಲೀಕತ್ವವಿರುವುದು ಆದರೂ ವ್ಯವಸಾಯ ಮಾತ್ರ ಸಂಯುಕ್ತವಾಗಿ ಸಾಗುತ್ತದೆ. ಪ್ರತಿಯೊಬ್ಬ ಸದಸ್ಯನೂ ತನ್ನ ಭೂಮಿಗೆ ಮಾಲೀಕ. ಆದರೆ, ಎಲ್ಲಾ ಸದಸ್ಯರೂ ತಮ್ಮ ಜಮೀನುಗಳನ್ನು ಒಗ್ಗೂಡಿಸಿ, ಸಂಯುಕ್ತವಾಗಿ ವ್ಯವಸಾಯ ಮಾಡುತ್ತಾರೆ. ಈ ರೀತಿಯ ಸಂಯುಕ್ತ ವ್ಯವಸಾಯಕ್ಕೆ ಸದಸ್ಯರು ಹಾಕಿದ ಶ್ರಮಕ್ಕೆ ಪ್ರತಿಫಲವಾಗಿ ದಿನವೂ ಕೂಲಿ ದೊರೆಯುತ್ತದೆ. ಭೂಮಿಯಲ್ಲಿನ ಒಟ್ಟು ಉತ್ಪನ್ನವನ್ನು ಈ ಸಂಘ ಮಾರಾಟ ಮಾಡುತ್ತದೆ. ಉತ್ಪನ್ನದ ಮಾರಾಟದಿಂದ ಬಂದ ಹಣದಲ್ಲಿ ವ್ಯವಸಾಯದ ಒಟ್ಟು ಖರ್ಚನ್ನು ಕಳೆಯಲಾಗುತ್ತದೆ. ವೆಚ್ಚ ಕಳೆದು ಉಳಿದ ಹಣವನ್ನು ಸಂಘದ ಸದಸ್ಯರಿಗೆ ಹಂಚಲಾಗುತ್ತದೆ. ಇದರ ಜೊತೆಗೆ ಸದಸ್ಯರ ಭೂಮಿಯ ಬೆಲೆಗೆ ಅನುಗುಣವಾಗಿ ಸಣ್ಣ ಪ್ರಮಾಣದಲ್ಲಿ ಸದಸ್ಯರಿಗೆ ಲಾಭಾಂಶವನ್ನು ಸಹ ಕೊಡಲಾಗುತ್ತದೆ.

ಸಹಕಾರಿ ಒಕ್ಕಲು ವ್ಯವಸಾಯ ಸಂಘ :

ಈ ವಿಧವಾದ ಸಂಘದಲ್ಲಿ ಜಂಟಿ ಭೂ ಸ್ವಾಮ್ಯವಿದ್ದರೂ ಸಹಿತ ವ್ಯವಸಾಯ ವೈಯಕ್ತಿಕವಾಗಿ ನಡೆಯುತ್ತದೆ. ಈ ಸಂಘವು ಎಲ್ಲಾ ಜಮೀನನ್ನೂ ಸ್ವಾಧೀನಕ್ಕೆ ತೆಗೆದುಕೊಂಡಿರಬಹುದು ಅಥವಾ ಗುತ್ತಿಗೆ ಪಡೆದುಕೊಂಡೂ ಇರಬಹುದು. ಸಂಘವು ತನ್ನ ಒಟ್ಟು ಜಮೀನನ್ನು ಸಣ್ಣ ಸಣ್ಣ ಭಾಗಗಳಾಗಿ ವಿಂಗಡಿಸುತ್ತದೆ. ಈ ರೀತಿಯ ಜಮೀನನ್ನು ಸದಸ್ಯರಿಗೆ ವ್ಯವಸಾಯ ಮಾಡಲು ನ್ಯಾಯವಾದ ಗೇಣಿಗೆ ಗುತ್ತಿಗೆಗೆ ಕೊಡಲಾಗುತ್ತದೆ. ಬೀಜಗಳನ್ನು ಪೂರೈಸುವುದು, ರಸಗೊಬ್ಬರ, ಉಪಕರಣಗಳು ಹಾಗೂ ಸಾಲಗಳನ್ನೂ ಸಹ ಒದಗಿಸುವುದು. ಇವೆಲ್ಲವೂ ಸಂಘದ ಜವಾಬ್ದಾರಿಗಳು. ಸದಸ್ಯರು ಒಪ್ಪುವುದಾದರೆ ಸಂಘ ಸ್ವತಹ ತಾನೇ ಅಲ್ಲಿನ ಉತ್ಪನ್ನಗಳ ಮಾರಾಟದ ಜವಾಬ್ದಾರಿಯನ್ನು ಸಹ ಹೊರುತ್ತದೆ. ಸದಸ್ಯರು ಉತ್ಪಾದಿಸಿದ ಉತ್ಪನ್ನವು ಅವರ ಸುಪರ್ದಿಯಲ್ಲೇ ಇರುತ್ತದೆ. ಅವರು ತಮಗೆ ಬೇಕಾದ ರೀತಿಯಲ್ಲಿ ಅದನ್ನು ಮಾರಾಟ ಮಾಡಬಹುದು. ಸಂಘವು ಪಡೆದ ಲಾಭವನ್ನು ಸದಸ್ಯರಲ್ಲಿ ಅವರು ಕೊಡುವ ಗೇಣಿಗೆ ಅನುಸಾರವಾಗಿ ವಿಂಗಡಿಸಿ ಕೊಡಲಾಗುತ್ತದೆ. ಈ ರೀತಿಯಾಗಿ ಸಹಕಾರಿ ಒಕ್ಕಲು ವ್ಯವಸಾಯ ಸಂಘಗಳು ಕಾರ್ಯನಿರ್ವಹಿಸುತ್ತವೆ.

ಸಹಕಾರ ಕೂಡು/ಸಾಮೂಹಿಕ ವ್ಯವಸಾಯ ಸಂಘ :

ಈ ಪ್ರಕಾರದ ಸಂಘದಲ್ಲಿ, ಕೂಡು ಭೂಸ್ವಾಮ್ಯದ ಜೊತೆಗೆ, ಕೂಡು/ಸಾಮೂಹಿಕ ವ್ಯವಸಾಯವು ನಡೆಯುವುದು. ಭೂಮಿಯ ಮಾಲೀಕತ್ವವು ಸಂಘಕ್ಕೆ ಸೇರುವುದು. ದಿನನಿತ್ಯ ಕೂಲಿಯನ್ನು ಪಡೆದು ಸದಸ್ಯರು ಸಾಮೂಹಿಕ ವ್ಯವಸಾಯ ಮಾಡುವರು. ಭೂಮಿಯಿಂದ ಬಂದಂತ ಬೆಳೆಯನ್ನು ಸಂಘದ ವಶಕ್ಕೆ ಸೇರಿಸಲಾಗುವುದು. ಉತ್ಪನ್ನವು ಮಾರಾಟವಾಗಿ ದೊರೆತ ಹಣದಿಂದ ವ್ಯವಸಾಯದ ವೆಚ್ಚವನ್ನು ಕಳೆಯಲಾಗುವುದು. ಕಳೆದುಳಿದ ಹಣವನ್ನು ಸದಸ್ಯರು ಗಳಿಸಿದ ಕೂಲಿಗೆ ಅನುಗುಣವಾಗಿ ಹಂಚಲಾಗುವುದು.

ವಿವಿಧೋದ್ದೇಶ ಸಂಘಗಳು :

ಇತ್ತೀಚಿನ ದಿನಗಳಲ್ಲಿ ಭಾರತೀಯ ಸಂದರ್ಭದಲ್ಲಿ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ವಿವಿಧೋದ್ದೇಶ ಸಂಘಗಳು ಸ್ಥಾಪನೆಗೊಳ್ಳಲಾರಂಭಿಸಿವೆ. ಸದಸ್ಯರ ರೈತರ ವಿವಿಧ ರೀತಿಯ ಅಗತ್ಯಗಳನ್ನು ಈಡೇರಿಸುವುದಕ್ಕಾಗಿ ಪ್ರಾರಂಭಗೊಂಡ ಪ್ರಾಥಮಿಕ ಕೃಷಿ ಸಂಘಗಳನ್ನು ವಿವಿಧೋದ್ದೇಶ ಸಂಘಗಳೆಂದು ಕರೆಯುವರು. ಈ ಸಂಘಗಳ ಮುಖ್ಯ ಉದ್ದೇಶವೆಂದರೆ ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳನ್ನು ಪೂರೈಸುವುದರ ಜೊತೆಗೆ ಬೀಜಗಳು, ರಸಗೊಬ್ಬರಗಳು, ರೈತರಿಗೆ ಅಗತ್ಯವಾದ ಉಪಕರಣಗಳು, ಯಂತ್ರಗಳು, ದೊರೆಯುವಂತೆ ಮಾಡುತ್ತವೆ. ಹಾಗೆಯೇ ರೈತರ ಉತ್ಪನ್ನಗಳನ್ನು ಮಾರಾಟ ಮಾಡುವುದು, ನ್ಯಾಯಬೆಲೆಯಲ್ಲಿ ರೈತರಿಗೆ ಗ್ರಾಹಕ ವಸ್ತುಗಳ ಪೂರೈಕೆ ಮುಂತಾದವುಗಳ ಜವಾಬ್ದಾರಿಯನ್ನೂ ಹೊರುತ್ತವೆ. ಏಕೋದ್ದೇಶದ ಪ್ರಾಥಮಿಕ ಕೃಷಿ ಸಾಲ ಸಂಘಗಳೊಡನೆ ಹೋಲಿಕೆ ಮಾಡಿದರೆ, ವಿವಿಧೋದ್ದೇಶ ಸಹಕಾರ ಸಂಘಗಳು ಆರ್ಥಿಕವಾಗಿ ಬಲಿಷ್ಠವಾಗಿರುವುದು ಕಂಡು ಬರುತ್ತದೆ. ಆದ್ದರಿಂದ, ಅಭಿವೃದ್ಧಿ ಶೀಲ ರಾಷ್ಟ್ರಗಳ ಆರ್ಥಿಕ ಬೆಳವಣಿಗೆಗೆ ವಿವಿಧೋದ್ದೇಶ ಸಂಘಗಳ ಅಗತ್ಯ ತೀರಾ ಇದೆ.

ರೈತರ ಸೇವಾ ಸಂಘಗಳು :

ಗ್ರಾಮೀಣ ಪ್ರದೇಶಗಳಲ್ಲಿ ರಚನೆಯಾದ ಆರ್ಥಿಕವಾಗಿ ಬಲಿಷ್ಠವಾದ ಬೇಗನೇ ಬೆಳೆಯುವ ಗುಣ ಸ್ವಭಾವ ಉಳ್ಳಂತಹ ಪ್ರಾಥಮಿಕ ಕೃಷಿ ಸಂಘಗಳೇ 'ರೈತರ ಸೇವಾ

ಸಂಘಗಳು'. ರೈತರ ಸೇವಾ ಸಂಘಗಳು ಕೂಡಾ ವಿವಿಧೋದ್ದೇಶ ಸಂಘಗಳಷ್ಟೇ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತವೆ. ಈ ಸಂಘಗಳು ಇತ್ತೀಚೆಗೆ ಬೆಳಕಿಗೆ ಬಂದವುಗಳಾಗಿವೆ. ರೈತರಿಗೆ ಎಲ್ಲಾ ರೀತಿಯ ಸೇವೆಗಳನ್ನು ಒದಗಿಸುವುದಕ್ಕಾಗಿ ಈ ಸಂಘಗಳು ಸ್ಥಾಪನೆಯಾಗಿವೆ. ಅಂತಹ ಸೇವೆಗಳಲ್ಲಿ ಪ್ರಮುಖವಾದವು ಈ ರೀತಿಯಾಗಿವೆ.

* ಸಾಲ ಸೌಲಭ್ಯಗಳು
* ರಸಗೊಬ್ಬರ ಪೂರೈಕೆ
* ಕೀಟ ನಾಶಕ
* ಉತ್ತಮಬೀಜ ಒದಗಿಸುವುದು
* ಇನ್ನಿತರ ವ್ಯವಸಾಯ ಸಾಧನಗಳ ಪೂರೈಕೆ
* ಉತ್ಪನ್ನಗಳ ಮಾರಾಟ
* ಪ್ರಮುಖ ಗ್ರಾಹಕ ವಸ್ತುಗಳ ಪೂರೈಕೆ.

ಭಾರತದಲ್ಲಿ ರೈತರ ಸೇವಾ ಸಂಘಗಳು ಹಲವಾರು ಕಾರ್ಯಗಳನ್ನು ನಿರ್ವಹಿಸುತ್ತವೆ. ಅವುಗಳಲ್ಲಿ ಪ್ರಮುಖವಾದವು ಈ ಕೆಳಕಂಡಂತಿವೆ.

* ಸದಸ್ಯರಿಗೆ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲ ಒದಗಿಸುವುದು.
* ಕೃಷಿಯ ಸಾಧನಗಳಾದ ರಸಗೊಬ್ಬರ, ಕೀಟನಾಶಕ, ಬೀಜಗಳು, ದನಗಳ ಆಹಾರ ಮುಂತಾದವುಗಳನ್ನು ಒದಗಿಸುವುದು.
* ನೀರಾವರಿ, ಮಣ್ಣಿನ ರಕ್ಷಣೆ ಮುಂತಾದ ಸಾರ್ವಜನಿಕ ಸೌಲಭ್ಯಗಳನ್ನು ಒದಗಿಸುವುದು.
* ವಸ್ತುಗಳ ಮಾರಾಟದ ಸೌಲಭ್ಯಗಳನ್ನು ಒದಗಿಸುವುದು. ಅಂದರೆ ಸದಸ್ಯರು ಉತ್ಪಾದಿಸಿದ ವಸ್ತುಗಳಿಗೆ ಯೋಗ್ಯವಾದ ಬೆಲೆಯನ್ನು ದೊರಕಿಸಿಕೊಡುವುದು.
* ರೇಷ್ಮೆ ವೃತ್ತಿ, ಜೇನುಸಾಕಾಣಿಕೆ, ಹೈನುಗಾರಿಕೆ ಮುಂತಾದ ಉಪಕೈಗಾರಿಕೆಗಳ ಬೆಳವಣಿಗೆಗೆ ಪ್ರೋತ್ಸಾಹ ನೀಡುವುದು.
* ಸದಸ್ಯರ ಉಳಿತಾಯವನ್ನು ಒಟ್ಟುಗೂಡಿಸಿ ಅದನ್ನು ರಚನಾತ್ಮಕ ಹಾಗೂ ಉತ್ಪಾದಕಕಾರ್ಯಗಳಿಗಾಗಿ ವಿನಿಯೋಗಿಸುವುದು.
* ಶಿಕ್ಷಣದ ಸೌಲಭ್ಯ, ಮನರಂಜನೆಯ ಸೌಲಭ್ಯ ಮುಂತಾದ ಯೋಗಕ್ಷೇಮದ

ಚಟುವಟಿಕೆಗಳಲ್ಲಿ ನಿರತವಾಗಿ ಗ್ರಾಮೀಣ ರೈತರ ಬಾಳನ್ನು ಹಸನುಗೊಳಿಸಲು ಪ್ರಯತ್ನಿಸುವುದು.

ಸಾಲ ನೀಡದ ಕೃಷಿಯೇತರ ಸಹಕಾರ ಸಂಘಗಳು :

ಸಾಲವನ್ನು ಪೂರೈಸದ ಕೃಷಿಯೇತರ ಸಹಕಾರ ಸಂಘಗಳಲ್ಲಿಯೂ ಮುಖ್ಯವಾಗಿ ಎರಡು ಪ್ರಕಾರಗಳಿರುವುದು ಕಂಡು ಬರುತ್ತದೆ. ಅವುಗಳೆಂದರೆ -

* ಉತ್ಪಾದಕರ ಸಹಕಾರ ಸಂಘಗಳು
* ಗ್ರಾಹಕರ ಸಹಕಾರ ಸಂಘಗಳು

ಈ ಮೇಲಿನ ಎರಡೂ ಪ್ರಕಾರಗಳ ಸಂಕ್ಷಿಪ್ತ ಚಿತ್ರಣವನ್ನು ಈ ಮುಂದೆ ನೀಡಲಾಗಿದೆ.

ಉತ್ಪಾದಕರ ಸಹಕಾರ ಸಂಘಗಳು/ಕೈಗಾರಿಕಾ ಸಹಕಾರ ಸಂಘಗಳು:

ಉತ್ಪಾದಕರ ಸಹಕಾರ ಸಂಘಗಳು ಸಾಮಾನ್ಯವಾಗಿ ಕೈಗಾರಿಕಾ ಸಹಕಾರ ಸಂಘಗಳಾಗಿರುತ್ತವೆ. ಸಹಕಾರದ ಹಿನ್ನಲೆಯಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳು ಮತ್ತು ಗೃಹ ಕೈಗಾರಿಕೆಗಳನ್ನು ಸ್ಥಾಪಿಸುವುದಕ್ಕಾಗಿ ಸಣ್ಣ ಉತ್ಪಾದಕರೂ, ಕಸಬುದಾರರೂ ಹಾಗೂ ಕುಶಲಕರ್ಮಿಗಳು ರಚಿಸಿಕೊಂಡ ಸಂಘಗಳನ್ನು 'ಉತ್ಪಾದಕರ ಸಹಕಾರ ಸಂಘಗಳೆನ್ನುವರು'. ಶೋಷಣೆಯನ್ನು ತಪ್ಪಿಸುವುದು ಉತ್ಪಾದಕರ ಸಹಕಾರ ಸಂಘಗಳ ಪ್ರಮುಖ ಉದ್ದೇಶವಾಗಿರುತ್ತದೆ. ಉತ್ಪಾದಕರ ಸಹಕಾರ ಸಂಘಗಳಿಗೆ ಪ್ರಮುಖ ಉದಾಹರಣೆಯೆಂದರೆ - ನೇಕಾರರ ಸಹಕಾರ ಸಂಘಗಳು.

ಕೈಗಾರಿಕಾ ಉತ್ಪಾದನಾ ಕ್ಷೇತ್ರದಲ್ಲಿ ದೊಡ್ಡ ಬಂಡವಾಳಗಾರನು ಇಲ್ಲದೇ ಕೆಲಸವನ್ನು ನಿರ್ವಹಿಸಿಕೊಂಡು ಹೋಗುವಂತೆ ಉತ್ಪಾದಕರ ಸಹಕಾರ ಸಂಘಗಳು ಪ್ರಯತ್ನಿಸುತ್ತವೆ. ಸದಸ್ಯರ ಹಾಗೂ ಸದಸ್ಯೇತರರ ಯೋಗಕ್ಷೇಮಕ್ಕಾಗಿ ಈ ಸಂಘಗಳು ವಸ್ತುಗಳ ಉತ್ಪಾದನಾಕಾರ್ಯವನ್ನು ಕೈಗೊಳ್ಳುತ್ತವೆ. ಉತ್ಪಾದಕರ ಸಹಕಾರ ಸಂಘಗಳಲ್ಲಿಯೂ ಎರಡು ಪ್ರಕಾರಗಳು ಕಂಡು ಬರುತ್ತವೆ. ಅವುಗಳೆಂದರೆ-

* ಸದಸ್ಯರಿಗೆ ಸಂಘವೇ ಕಚ್ಚಾವಸ್ತುಗಳನ್ನು (Raw materials) ಉಪಕರಣ

ಮತ್ತು ಸಾಧನಗಳನ್ನು ಪೂರೈಸುತ್ತವೆ. ತಮ್ಮ ಮನೆಗಳಲ್ಲಿಯೇ ಸದಸ್ಯರು ಬೇರೆಯಾಗಿ ಉತ್ಪಾದನೆಯ ಕೆಲಸಮಾಡಿ, ನಂತರ ಸಿದ್ಧ ವಸ್ತುಗಳನ್ನು ಸಂಘಕ್ಕೆ, ಮಾರಾಟ ಮಾಡುತ್ತಾರೆ. ಸದಸ್ಯರು ಈ ರೀತಿ ಮಾರಾಟ ಮಾಡಿದ ವಸ್ತುಗಳನ್ನು ಸಂಘ ಪುನಃ ಅನುಕೂಲಕರ ಬೆಲೆಗೆ ಮಾರಾಟ ಮಾಡುತ್ತದೆ. ಎಲ್ಲಾ ಖರ್ಚು-ವೆಚ್ಚಗಳನ್ನು ಕಳೆದು ಸಂಘದ ಹತ್ತಿರ ಉಳಿದ ಮೊತ್ತವನ್ನು ಸದಸ್ಯರಿಗೆ ಹಂಚುವುದು (ಅವರು ಸಂಘಕ್ಕೆ ಮಾರಾಟ ಮಾಡಿದ ಮೌಲ್ಯಕ್ಕನುಗುಣವಾಗಿ).

* ಸಂಘದ ಕಾರ್ಯಾಗಾರದಲ್ಲಿ ಸದಸ್ಯರು ಕೂಲಿಯನ್ನು ಪಡೆದುಕೊಂಡು ಒಟ್ಟಾಗಿ ಉತ್ಪಾದನಾಕಾರ್ಯವನ್ನು ಮಾಡುತ್ತಾರೆ. ಸದಸ್ಯರೆಲ್ಲರೂ ಉತ್ಪಾದಿಸಿದ ವಸ್ತುಗಳನ್ನು ಸದಸ್ಯರೊಳಗೆ ಹಂಚಿಕೊಳ್ಳುವ ಪರಿಪಾಠವಿದೆ. ಅಥವಾ ಅಗತ್ಯ ಬಿದ್ದಲ್ಲಿ ಹೊರಗಿನವರಿಗೂ ಮಾರಾಟಮಾಡುವುದೂ ಇದೆ. ವೆಚ್ಚವನ್ನು ಕಳೆದು ಉಳಿದ ಮೊತ್ತವನ್ನು ಸದಸ್ಯರು ಗಳಿಸಿದ ಕೂಲಿಗೆ ಅನುಸಾರವಾಗಿ ವಿತರಣೆ ಮಾಡಲಾಗುತ್ತದೆ.

ಪ್ರಯೋಜನಗಳು :

ಉತ್ಪಾದಕರ ಸಹಕಾರಸಂಘಗಳ ಪ್ರಮುಖ ಪ್ರಯೋಜನಗಳು ಈ ಕೆಳಕಂಡಂತಿವೆ.

* ಕೈಗಾರಿಕೋದ್ಯಮಿಗಳ ಶೋಷಣೆಯಿಂದ ಕುಶಲಕರ್ಮಿಗಳನ್ನು ಕಸಬುದಾರರನ್ನು ಹಾಗೂ ಕಾರ್ಮಿಕರನ್ನು ರಕ್ಷಿಸುವ ಉದ್ದೇಶವನ್ನು ಈ ಸಂಘಗಳು ಹೊಂದಿವೆ.

* ಗೃಹ ಕೈಗಾರಿಕೆ ಮತ್ತು ಸಣ್ಣ ಪ್ರಮಾಣದ ಕೈಗಾರಿಕೆಗಳ ಬೆಳವಣಿಗೆಗೆ ಈ ಸಂಘಗಳು ಸಹಕರಿಸುತ್ತವೆ. ಇದರಿಂದಾಗಿ ಸ್ವಲ್ಪ ಪ್ರಮಾಣದಲ್ಲಿ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಬಹುದಾಗಿದೆ.

* ಕೈಗಾರಿಕಾಘಟಕಗಳ ನಿಯಂತ್ರಣವನ್ನು ಕಾರ್ಮಿಕರ ಕೈವಶಕ್ಕೆ ಕೊಡುವ ಮೂಲಕ, ಅಂತಹ ಘಟಕಗಳಲ್ಲಿ ನಡೆಯಬಹುದಾದಂತ ಮುಷ್ಕರ, ಬೀಗಮುದ್ರೆ ಮುಂತಾದವುಗಳನ್ನು ತಪ್ಪಿಸಬಹುದಾಗಿದೆ.

ಗ್ರಾಹಕರ ಸಹಕಾರ ಸಂಘಗಳು :

ಗ್ರಾಹಕರ ಅಥವಾ ಅನುಭೋಗಿಗಳ ಸಹಕಾರ ಸಂಘಗಳು ಕೆಳ ಮತ್ತು ಮಧ್ಯಮ ವರ್ಗದ ಗ್ರಾಹಕರಿಂದ ರಚಿಸಲ್ಪಟ್ಟವಾಗಿವೆ. ಸಾರ್ವಜನಿಕರು ಮತ್ತು ಉದ್ಯೋಗಿಗಳು ಇಂತಹ ಸಂಘಗಳನ್ನು ರಚಿಸುತ್ತಾರೆ. ಉದ್ಯೋಗಿಗಳೆಂದರೆ ಸಾಮಾನ್ಯವಾಗಿ ಕೈಗಾರಿಕೆ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವವರು. ಆಹಾರದಲ್ಲಿ ದುರ್ಮಿಶ್ರಣವನ್ನು ತಡೆಗಟ್ಟುವುದು, ವ್ಯಾಪಾರದಲ್ಲಿನ ಮೋಸವನ್ನು ನಿಯಂತ್ರಿಸುವುದು, ಮಧ್ಯವರ್ತಿಗಳಿಂದುಂಟಾಗುವ ಶೋಷಣೆಯನ್ನು ತಡೆಗಟ್ಟಿ ಉತ್ತಮ ರೀತಿಯ ಅನುಭೋಗಿ ಸರಕುಗಳು ಗ್ರಾಹಕರಿಗೆ ದೊರೆಯುವಂತೆ ಮಾಡುವುದು ಗ್ರಾಹಕರ ಸಹಕಾರ ಸಂಘಗಳ ಮುಖ್ಯ ಕಾರ್ಯಗಳಾಗಿವೆ. ಗ್ರಾಹಕರ ಸಹಕಾರ ಸಂಘಗಳು ರಖಂ ವ್ಯಾಪಾರಿಗಳಿಂದ ರಖಂ ಬೆಲೆಗೆ ದೊಡ್ಡ ಪ್ರಮಾಣದಲ್ಲಿ ವಸ್ತುಗಳನ್ನು ಕೊಂಡುಕೊಳ್ಳುತ್ತವೆ. ಅವುಗಳನ್ನು ತನ್ನ ಸದಸ್ಯರಿಗೆ ಹಾಗೂ ಮತ್ತಿತರರಿಗೆ ಚಿಲ್ಲರೆಯಾಗಿ ಮಾರುಕಟ್ಟೆ ಬೆಲೆಯಲ್ಲಿ ಮಾರಾಟ ಮಾಡುತ್ತವೆ. ಅವುಗಳು ಕೇವಲ ನಗದು ವ್ಯಾಪಾರ ಮಾಡುತ್ತವೆ. ಬಳಕೆದಾರರ ಹಿತಾಸಕ್ತಿಯನ್ನು ಕಾಪಾಡುವುದು ಈ ಸಂಘಗಳ ಪ್ರಮುಖ ಉದ್ದೇಶವಾಗಿದೆ.

ವೆಚ್ಚವನ್ನು ಕಳೆದು ಉಳಿದಂತ ಲಾಭದಲ್ಲಿ ಒಂದು ಸಣ್ಣ ಪ್ರಮಾಣದಲ್ಲಿ ಸದಸ್ಯರಿಗೆ ಅವರ ಷೇರು ಬಂಡವಾಳಕ್ಕಾಗಿ ಲಾಭಾಂಶವಾಗಿ (Dividend) ಹಂಚಲಾಗುತ್ತದೆ. ಲಾಭದ ಒಂದು ಸಣ್ಣ ಭಾಗವನ್ನು ಮೀಸಲು ನಿಧಿಯಾಗಿ ಸಂಘದ ಯೋಗಕ್ಷೇಮಕ್ಕಾಗಿ ವಿನಿಯೋಗಿಸಲಾಗುತ್ತದೆ. ಲಾಭದ ಉಳಿದ ಭಾಗವನ್ನು ಸದಸ್ಯರಿಗೆ ಅವರು ಮಾಡಿದ ವ್ಯಾಪಾರಕ್ಕೆ ಅನುಸಾರವಾಗಿ ಬೋನಸ್ ರೂಪದಲ್ಲಿ ಹಂಚಲಾಗುವುದು.

ಪ್ರಯೋಜನಗಳು :

ಗ್ರಾಹಕರ ಸಹಕಾರ ಸಂಘಗಳಿಂದ ಸದಸ್ಯರಿಗೆ ಅನೇಕ ರೀತಿಯ ಪ್ರಯೋಜನಗಳಿವೆ. ಅವುಗಳಲ್ಲಿ ಪ್ರಮುಖವಾದವು ಈ ಕೆಳಕಂಡಂತಿವೆ.

* ಪ್ರಮುಖ ಗ್ರಾಹಕ ವಸ್ತುಗಳ ವಿತರಣೆಯ ಕೆಲಸದಲ್ಲಿ ದಲ್ಲಾಳಿಗಳನ್ನು ಸೇರಿಸಿಕೊಳ್ಳದಂತೆ ಈ ಸಂಘಗಳು ಪ್ರಯತ್ನಿಸುತ್ತವೆ. ಇದರಿಂದ ಸದಸ್ಯರಿಗೆ ಉತ್ತಮ ಗ್ರಾಹಕರ ವಸ್ತುಗಳು ಯೋಗ್ಯವಾದ ಬೆಲೆಯಲ್ಲಿ ದೊರೆಯುತ್ತವೆ.

* ಸದಸ್ಯರಿಗೆ ಉತ್ತಮ ಗುಣಮಟ್ಟದ ವಸ್ತುಗಳು ಸಮರ್ಪಕವಾಗಿ, ನಿರಂತರವಾಗಿ ಲಭಿಸುವಂತೆ ಈ ಸಂಘಗಳು ಮಾಡುತ್ತವೆ.
* ಈ ಸಂಘಗಳು ಸರಿಯಾದ ಅಳತೆ, ತೂಕಗಳು, ನಿಶ್ಚಿತವಾದ ದರಗಳು ಚಾಲ್ತಿಗೆ ತರುವ ಮೂಲಕ ಉತ್ತಮ ವ್ಯಾಪಾರದ ನೀತಿ ನೆಲೆಗೊಳ್ಳುವಂತೆ ಪ್ರಯತ್ನಿಸುತ್ತವೆ.
* ನಗದು ಹಣ ಕೊಟ್ಟರೆ ಮಾತ್ರ ಅವುಗಳು ಮಾರಾಟ ಮಾಡುವುದರಿಂದ ಸಂಘದ ಸದಸ್ಯರು ತಮ್ಮ ವ್ಯಾಪಾರಕ್ಕಾಗಿ ಹಣವನ್ನು ಉಳಿಸಿಕೊಳ್ಳಲೇಬೇಕಾಗುತ್ತದೆ. ಆದ್ದರಿಂದ ಸದಸ್ಯರಲ್ಲಿ ಮಿತವ್ಯಯ ಹಾಗೂ ಉಳಿತಾಯದ ಮನೋಭಾವ ಬೆಳೆಯುವಂತೆ ಈ ಸಂಘಗಳು ಪ್ರೇರೇಪಿಸುತ್ತವೆ.

ಭಾರತದ ಸಹಕಾರ ಸಂಘಗಳ ಪ್ರಾಮುಖ್ಯತೆ :

ಅಭಿವೃದ್ಧಿಶೀಲ ಆರ್ಥಿಕವ್ಯವಸ್ಥೆಯಾದ ಭಾರತದಂತಹ ದೇಶದಲ್ಲಿ ಸಹಕಾರವಲಯದ ಪಾತ್ರ ತುಂಬಾ ಹಿರಿದಾದುದಾಗಿದೆ. ದೇಶದ ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ಹಾಗೂ ಗ್ರಾಮೀಣ ಪ್ರದೇಶದ ಜನರ ಸರ್ವತೋಮುಖ ಅಭಿವೃದ್ಧಿಯ ದೃಷ್ಟಿಯಿಂದ ಸಹಕಾರದ ಪಾತ್ರವು ಅತ್ಯಗತ್ಯವೆನಿಸುತ್ತದೆ. ಈ ಕೆಳಗೆ ನಮೂದಿಸಿದ ಅಂಶಗಳು ಸಹಕಾರದ ಪ್ರಾಮುಖ್ಯವನ್ನು ಸ್ಪಷ್ಟೀಕರಿಸುತ್ತವೆ.

* ರೈತರು ತಮ್ಮ ಉತ್ಪಾದನೆಗೆ ಲಾಭದಾಯಕವಾದ ಬೆಲೆಯನ್ನು ಪಡೆಯುವಂತೆ ಮಾಡುತ್ತವೆ.
* ಜನರಲ್ಲಿ ಸಂಘಟನಾಮನೋಭಾವವನ್ನು ಬೆಳೆಸುತ್ತವೆ.
* ಜನರಲ್ಲಿ ಈ ಸಹಕಾರ ಸಂಘಗಳು ದುಂದುವೆಚ್ಚಕ್ಕೆ ಕಡಿವಾಣ ಹಾಕಿಸುವುದರೊಂದಿಗೆ ಅವರಲ್ಲಿ ಮಿತವ್ಯಯ ಮತ್ತು ಉಳಿತಾಯದ ಮನೋಭಾವವನ್ನು ಬೆಳೆಸುತ್ತವೆ.
* ರೈತರಿಗೆ ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ಸಾಲಸೌಲಭ್ಯವನ್ನು ಸಹಕಾರ ಸಾಲ ಸಂಘಗಳು ಒದಗಿಸುವುವು. ಇದರಿಂದ ರೈತರು ಸಾಲಗಾರರ ಬಳಿ ಹೋಗುವುದು ಕಡಿಮೆಯಾಗುತ್ತದೆ.

* ಸಮಾಜದಲ್ಲಿ ಸಹಕಾರ ಮನೋಭಾವದಿಂದ ಸರ್ವರ ಹಿತ ಸಾಕಾರಗೊಳ್ಳುತ್ತದೆ.
* ಕೃಷಿಯೊಂದಿಗೆ ಸಣ್ಣ ಹಾಗೂ ಗೃಹ ಕೈಗಾರಿಕೆಗಳ ಅಭಿವೃದ್ಧಿ ಸಾಧ್ಯವಾಗುತ್ತದೆ.
* ಕಸಬುದಾರರಿಗೆ, ಕುಶಲಕರ್ಮಿಗಳಿಗೆ ಜೀವನೋಪಾಯವನ್ನು ಒದಗಿಸಿದ ಕೀರ್ತಿ ಸಹಕಾರ ಸಂಘಗಳದ್ದು.
* ಗ್ರಾಹಕರ ಸಹಕಾರ ಸಂಘಗಳು ಅನೇಕ ರೀತಿಯ ಅಂಗಡಿ ಮುಂಗಟ್ಟುಗಳನ್ನು ತೆರೆದು ನಗರ ಮತ್ತು ಗ್ರಾಮೀಣ ಜನರಿಗೆ ಉತ್ತಮ ಗುಣಮಟ್ಟದ ವಸ್ತುಗಳನ್ನು ನ್ಯಾಯಬೆಲೆಯಲ್ಲಿ ಒದಗಿಸುತ್ತವೆ.
* ಸ್ಥಳೀಯ ಕಚ್ಚಾ ಸರಕುಗಳು ಸಮರ್ಪಕವಾಗಿ ಸದ್ವಿನಿಯೋಗವಾಗುತ್ತವೆ.
* ಸ್ಥಳೀಯ ಮಾರುಕಟ್ಟೆಗಳು ಬಲಗೊಳ್ಳುತ್ತವೆ.
* ಕೃಷಿಗೆ ಅವಶ್ಯಕವಾದ ಸಲಕರಣೆಗಳು, ರಸಗೊಬ್ಬರಗಳನ್ನು ಪೂರೈಸಲು ನೆರವಾಗುತ್ತವೆ.
* ಸಮಾಜದ ದುರ್ಬಲ ವರ್ಗದವರ ಸಂಪತ್ತನ್ನು ಕ್ರೋಢೀಕರಿಸಿ, ಅದನ್ನು ಉತ್ಪಾದಕ ಕಾರ್ಯಗಳಿಗಾಗಿ ವಿನಿಯೋಗಿಸುವಂತೆ ಸಹಕಾರ ಸಂಘಗಳು ಪ್ರಯತ್ನಿಸುತ್ತವೆ.
* ಶೋಷಣೆಯನ್ನು ತಪ್ಪಿಸುವ ಮೂಲಕ ಸಾಮಾನ್ಯರೂ ಸಹ ಸಹಕಾರ ಸಂಘಗಳಲ್ಲಿ ಪಾಲುಗೊಳ್ಳಲು ಪ್ರೇರಣೆ.
* ಗ್ರಾಮೀಣ ಪ್ರದೇಶಗಳಲ್ಲಿನ ಸಹಕಾರಸಂಘಗಳು ಜನರ ನೈತಿಕತೆಯಲ್ಲಿ ಸುಧಾರಣೆಯನ್ನು ತಂದಿವೆ. ಕುಡಿತ, ಜೂಜು, ಜಗಳ ಮುಂತಾದ ದುಷ್ಟಗುಣಗಳಿಂದ ಪಾರಾಗುವಂತೆ ಮಾಡಿವೆ.
* ಮೀನುಗಾರಿಕಾ ಸಹಕಾರ ಸಂಘಗಳು ಬೃಹತ್ ಪ್ರಮಾಣದಲ್ಲಿ ಮೀನು ಹಿಡಿಯುವುದಕ್ಕೆ, ಅವುಗಳ ಮಾರಾಟಕ್ಕೆ ಸಹಾಯ ಮಾಡಿವೆ. 'ನೀಲಿಕ್ರಾಂತಿ'ಗೆ ಈ ಸಂಘಗಳೂ ಕಾರಣ ಎಂದು ಹೇಳಬಹುದು.
* ಸಮಯದ ಸದುಪಯೋಗದ ಬಗ್ಗೆ ಸಂಘಗಳು ಸದಸ್ಯರಿಗೆ ತಿಳಿವಳಿಕೆ ನೀಡುತ್ತವೆ.

* ಉಳಿತಾಯವನ್ನು ಉತ್ಪಾದನಾ ಕ್ರಿಯೆಗಳಲ್ಲಿ ಹೂಡುವಂತೆ ಸಂಘಗಳು ರೈತರಿಗೆ ಸಹಾಯಮಾಡುತ್ತವೆ.
* ನೌಕರ ಹಾಗೂ ಅಧಿಕಾರಿ ಎನ್ನುವ ಯಾವುದೇ ರೀತಿಯ ಭೇದಭಾವವಿಲ್ಲದೇ ಸಮಾನತೆಯನ್ನು ನೆಲೆಗೊಳಿಸುತ್ತವೆ.
* ನೂತನ ಮಾದರಿಯ ಕೃಷಿ ಪದ್ಧತಿಗಳನ್ನು ಪರಿಚಯಿಸುತ್ತವೆ.
* ಅನಕ್ಷರಸ್ಥರಿಗೆ ಅಕ್ಷರದಾನ, ಸಾರ್ವಜನಿಕ ಆರೋಗ್ಯ ಮತ್ತು ನೈರ್ಮಲ್ಯ ಮುಂತಾದ ಸಮಾಜಸೇವೆಗಳಲ್ಲೂ ಪಾಲುಗೊಂಡು, ಸಮಾಜ ಬದಲಾವಣೆಗೆ ಸಂಘಗಳು ಇಂಬು ನೀಡುತ್ತವೆ.
* ಒಟ್ಟಾರೆಯಾಗಿ ಸಹಕಾರವು ಜನರಿಗೆ ಸ್ವಶಾಸನದ ತಂತ್ರವನ್ನು ಕಲಿಸುವುದು. ಜೊತೆಗೆ ಜನರ ಜೀವನಮಟ್ಟದ ಸುಧಾರಣೆಗೆ ಪ್ರಯತ್ನಿಸುವುದು.

ಇಷ್ಟೆಲ್ಲಾ ಪ್ರಯೋಜನಗಳಿದ್ದರೂ ಭಾರತದಲ್ಲಿ ಸಹಕಾರ ಚಳುವಳಿಯು ಮಂದಗತಿಯಲ್ಲಿರುವುದು ಕಂಡುಬರುತ್ತದೆ.

ಭಾರತದ ಸಹಕಾರ ಚಳುವಳಿಯ ಮಂದಗತಿಗೆ ಕಾರಣಗಳು :

ಭಾರತದಲ್ಲಿ ಸಹಕಾರ ಚಳುವಳಿಯು ನಿರೀಕ್ಷಿತವಾದ ಮಟ್ಟದಲ್ಲಿ ಸಾಧನೆಯನ್ನು ಮಾಡಿಲ್ಲ. ಇದರ ಪ್ರಗತಿಯು ಮಂದಗತಿಯಲ್ಲಿದೆ. ಸಹಕಾರ ಚಳುವಳಿಯು ಮಂದಗತಿಯಲ್ಲಿರುವುದಕ್ಕೆ ಹಲವಾರು ಕಾರಣಗಳು ಕಂಡುಬರುತ್ತವೆ. ಅವುಗಳಲ್ಲಿ ಪ್ರಮುಖವಾದವು ಈ ಕೆಳಕಂಡಂತಿವೆ.

೧. ಭಾರತದಲ್ಲಿ ಸಹಕಾರ ಚಳುವಳಿ ೧೯೦೪ ರಲ್ಲೇ ಪ್ರಾರಂಭವಾದರೂ ಕೂಡಾ ಅದೊಂದು ಸರ್ಕಾರದ ಚಳುವಳಿಯಾಗಿ ಉಳಿದಿದೆ. ಇದಕ್ಕೆ ಮೊದಲು ಆಸಕ್ತಿ ತೋರಿಸಿದ್ದು ಸರ್ಕಾರ. ಆದರೆ ಇದು ಜನಪ್ರಿಯವಾಗಿಲ್ಲದಿದ್ದರಿಂದ ಜನರ ಚಳುವಳಿಯಾಗಲಿಲ್ಲ. ಜನರು ಸಹಕಾರ ತತ್ವವನ್ನು ಅಳವಡಿಸಿಕೊಳ್ಳದಿರುವುದು ಮತ್ತು 'ಸಹಕಾರ' ಸರ್ಕಾರದ ಕಾರ್ಯಕ್ರಮ ಎಂದು ತಿಳಿದಿರುವುದರಿಂದ ಚಳುವಳಿ ನಿಜವಾದ ಅರ್ಥದಲ್ಲಿ ಜನರ ಚಳುವಳಿಯಾಗಲಿಲ್ಲ ಎಂದು ಹೇಳಬಹುದು.

೨. ಸಹಕಾರ ಸಂಘಗಳ ಸದಸ್ಯರಾಗಲು ಜನರು ಹೆಚ್ಚು ಒಲವು ತೋರುವುದಿಲ್ಲ. ಏಕೆಂದರೆ ಭಾರತದ ಜನರು ಸಾಕಷ್ಟು ಅವಿದ್ಯಾವಂತರು, ಅವರಿಗೆ ಸಹಕಾರದ ಉದ್ದೇಶ ಅದರ ಪ್ರಯೋಜನವನ್ನು ತಿಳಿಯಲು ಸಾಮರ್ಥ್ಯವಿಲ್ಲ.

೩. ಸಹಕಾರ ಸಂಘಗಳು ಸಾಲ ಪೂರೈಸುವುದಕ್ಕಾಗಿಯೇ ಸ್ಥಾಪನೆಯಾದ ಸಂಘಗಳೆಂದು ಜನರು ಭಾವಿಸಿದ್ದಾರೆ. ಈ ಕಾರಣದಿಂದಾಗಿ ಸಹಕಾರ ಸಂಘಗಳು ಷೇರುಗಳನ್ನು, ಹಾಗೂ ಸಾರ್ವಜನಿಕರಿಂದ ಠೇವಣಿಗಳನ್ನು ಸಂಗ್ರಹಿಸುವಲ್ಲಿ ವಿಫಲವಾಗಿವೆ. ಆದ್ದರಿಂದ ಸಹಕಾರ ಸಂಘಗಳ ಆರ್ಥಿಕ ಸಂಪನ್ಮೂಲಗಳು ಅಲ್ಪವಾಗಿವೆ. ಅವುಗಳು ಜನರ ಹೆಚ್ಚುತ್ತಿರುವ ಅವಶ್ಯಕತೆಗಳನ್ನು ಪೂರೈಸುವಲ್ಲಿ ಅಸಮರ್ಥವಾಗಿರುವ ಪರಿಸ್ಥಿತಿ ತಲೆದೋರಿದೆ.

೪. ಸಂಘದ ಕೆಲವು ಸದಸ್ಯರಿಂದಲೇ ಕೆಲವು ಸಂದರ್ಭಗಳಲ್ಲಿ ಸಹಕಾರ ದುರುಪಯೋಗವಾಗುವ ಸಂಭವವಿರುವುದು.

೫. ಅದಕ್ಷ ಆಡಳಿತವು ಸಹಕಾರ ಸಂಘಗಳ ಬಹುದೊಡ್ಡ ದೋಷವಾಗಿದೆ. ಇದಕ್ಕೆ ಕಾರಣವೆಂದರೆ ಸಹಕಾರ ಸಂಘಗಳ ಆಡಳಿತವರ್ಗಕ್ಕೆ ಮತ್ತು ಸಿಬ್ಬಂದಿವರ್ಗಕ್ಕೆ ಸಾಕಷ್ಟು ತರಬೇತಿ ಇರುವುದಿಲ್ಲ.

೬. ಸಹಕಾರಸಂಸ್ಥೆಗಳಿಗೆ ಪಕ್ಷ ರಾಜಕೀಯ ಪ್ರವೇಶವಿರುವುದು ಕಂಡು ಬರುತ್ತದೆ. ಸ್ವಾರ್ಥ ರಾಜಕಾರಣಿಗಳು ಸಹಕಾರತತ್ವವನ್ನು ತಮ್ಮ ಅನುಕೂಲಕ್ಕಾಗಿ ಬಳಸಿಕೊಳ್ಳುತ್ತಾರೆ. ಇದರಿಂದಾಗಿ ಸಹಕಾರ ಸಂಘಗಳ ದುರುಪಯೋಗ ಅಧಿಕವಾಗುತ್ತದೆ. ಸಹಕಾರ ಆಂದೋಲನವು ದುರ್ಬಲಗೊಳ್ಳಬೇಕಾದರೆ ಇದು ಬಲವಾದ ಕಾರಣವಾಗಿದೆ.

೭. ಸದಸ್ಯರಿಂದ ಸಾಲ ಮರುಪಾವತಿ ಕೆಲಸವೂ ಕೂಡಾ ಸಮರ್ಪಕವಾಗಿಲ್ಲ. ಆದ್ದರಿಂದ ಸಾಲ ಮರುಪಾವತಿಯ ಬಾಕಿ ಬೃಹದಾಕಾರವಾಗಿ ಬೆಳೆದಿದೆ.

೮. ಸಾಲ ವಿತರಿಸುವ ಸಂದರ್ಭದಲ್ಲಿ ಆಡಳಿತಮಂಡಳಿಯ ಸದಸ್ಯರ ಸ್ನೇಹಿತರಿಗೆ, ಸಂಬಂಧಿಕರಿಗೆ ಸಾಲ ನೀಡುವ ಸಂದರ್ಭಗಳು

ಅಧಿಕವಾಗಿವೆ.

೯. ಕೆಲವು ಪಟ್ಟಭದ್ರಹಿತಾಸಕ್ತಿಗಳ ಕೈಯಲ್ಲಿ ಸಿಲುಕಿ ಸಹಕಾರ ಸಂಘಗಳು ನಲುಗುತ್ತಿವೆ. ಇಂದಿಗೂ ಕೂಡಾ ಸಹಕಾರ ಸಂಘಗಳು ಶ್ರೀಮಂತರ, ರಾಜಕೀಯ ಪ್ರೇರಿತರ ಕೈವಶದಲ್ಲಿರುವುದರಿಂದ ಇವುಗಳು ಸಾಮಾಜಿಕನ್ಯಾಯವನ್ನು ಒದಗಿಸುವಲ್ಲಿ ವಿಫಲವಾಗಿವೆ. ಸಾಲ ನೀಡಿಕಾ ಕಾರ್ಯದಲ್ಲೂ ಕೂಡಾ ಅನ್ಯಾಯವಾಗುತ್ತಿದೆ. ಬಹಳಷ್ಟು ಮಂದಿ ಶ್ರೀಮಂತ ಸದಸ್ಯರು ಸಹಕಾರ ಸಂಘಗಳಿಂದ ಕಡಿಮೆ ಬಡ್ಡಿದರದಲ್ಲಿ ಸಾಲವನ್ನು ಪಡೆದು, ಅಧಿಕ ಬಡ್ಡಿ ಸಾಲ ನೀಡುವ ಹಣಕಾಸು ಸಂಸ್ಥೆಗಳಲ್ಲಿ ಈ ಹಣವನ್ನು ನಿರಖು ಠೇವಣಿಯಾಗಿಡುವ ಉದಾಹರಣೆಗಳು ಸಾಕಷ್ಟಿವೆ.

೧೦. ಸಹಕಾರ ಸಂಘಗಳ ಕಾರ್ಯ ನಿರ್ವಹಣೆಯಲ್ಲಿ ಸರ್ಕಾರದ ಹಸ್ತಕ್ಷೇಪ ಕಂಡುಬರುತ್ತದೆ. ಕೆಲವು ಅನಗತ್ಯ ನಿಯಂತ್ರಣಗಳಿಂದಾಗಿ ಸಹಕಾರಚಳುವಳಿಯ ಬೆಳವಣಿಗೆ ಕುಂಠಿತವಾಗಿದೆ. ಅನೇಕ ರಾಜ್ಯಗಳಲ್ಲಿ ಈ ಸಂಘಗಳಿಗೆ ಸರಿಯಾದ ನಿಟ್ಟಿನಲ್ಲಿ ಚುನಾವಣೆಗಳು ನಡೆಯದೆ ಗೊಂದಲಗಳ ಗೂಡಾಗಿದೆ.

೧೧. ಸಹಕಾರ ಸಾಲ ಸಂಘಗಳಿಗೆ ಅನಾವಶ್ಯಕವಾಗಿ ಅತ್ಯಧಿಕ ಮಹತ್ವವನ್ನು ಕೊಡುವುದರಿಂದ ಇತರ ಸಹಕಾರ ಸಂಘಗಳ ಮಹತ್ವಕ್ಕೆ ಕುಂದುಂಟಾಗುತ್ತದೆ.

೧೨. ಜನರು ನಂಬಿಕೆಯಿಂದ ಸಹಕಾರಸಂಘಗಳಲ್ಲಿ ಪಾಲ್ಗೊಳ್ಳುತ್ತಿಲ್ಲ. ನಂಬಿಕೆ ಇಲ್ಲದಿದ್ದಾಗ ಯಾವುದೇ ಸಂಘ ಅಭಿವೃದ್ಧಿ ಹೊಂದುವುದಿಲ್ಲ.

ಸಹಕಾರ ಚಳುವಳಿಯನ್ನು ಸದೃಢಗೊಳಿಸಲು ಕೆಲವು ಸೂಕ್ತ ಸಲಹೆಗಳು :

ಭಾರತದಲ್ಲಿ ಸಹಕಾರ ಚಳುವಳಿಯು ಹಲವಾರು ದೋಷಗಳಿಂದ ಕೂಡಿರುವುದನ್ನು ಈ ಮೇಲಿನ ಅಂಶಗಳು ದೃಢಪಡಿಸುತ್ತವೆ. ಆದ್ದರಿಂದ ಯಶಸ್ಸು ಸಾಧ್ಯವಾಗಿಲ್ಲ. ಸಹಕಾರಚಳುವಳಿಯ ಹಾದಿಯಲ್ಲಿ ನಿಂತಿರುವ ಪ್ರಾಯೋಗಿಕ ಮತ್ತು ಸೈದ್ಧಾಂತಿಕ ದೋಷಪೂರಿತವಾದ ಅಂಶಗಳನ್ನು ಮನಗಂಡು ಅವುಗಳನ್ನು ಸರಿಪಡಿಸಿ ಸಂಘಗಳನ್ನು ಬಲಪಡಿಸುವ ಅಗತ್ಯ ತೀರಾಯಿದೆ. ಸಹಕಾರಸಂಘಗಳನ್ನು ಬಲಪಡಿಸಬೇಕಾದರೆ

ಹಲವಾರು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಅಂತಹ ಸೂಕ್ತ ಕ್ರಮಗಳಲ್ಲಿ ಕೆಲವು ಪ್ರಮುಖವಾದವುಗಳನ್ನು ಈ ಕೆಳಗೆ ನಮೂದಿಸಲಾಗಿದೆ.

❋ ಸಾಲ ನೀಡಿಕೆಯನ್ನು ಮಾರಾಟದೊಂದಿಗೆ ಹೊಂದಿಸುವಂತೆ ಕ್ರಮ ಕೈಗೊಳ್ಳುವುದು. ಇದರಿಂದ ಪೋಲಾಗುವುದನ್ನು ತಪ್ಪಿಸಬಹುದಾಗಿದೆ.

❋ ಸಹಕಾರ ಸಾಲ ಸಂಘಗಳು ಸ್ಥಳೀಯ ಉಳಿತಾಯವನ್ನು ಸಂಗ್ರಹಿಸಲು ಸಮರ್ಥನೀಯವಾದ ಕ್ರಮಗಳನ್ನು ಕೈಗೊಳ್ಳಬೇಕು.

❋ ಸದಸ್ಯರಿಗೆ ಸರಿಯಾದ ಸಮಯಕ್ಕೆ ಅಗತ್ಯವಿರುವಷ್ಟು ಮಾತ್ರ ಸಾಲವನ್ನು ನೀಡುವುದು.

❋ ಸಂಘದ ಆಡಳಿತವನ್ನು ದಕ್ಷತೆಯಿಂದ ನಡೆಸಿಕೊಂಡು ಹೋಗಲು ಸಹಕಾರ ಸಂಘಗಳ ಸಿಬ್ಬಂದಿ ವರ್ಗದವರಿಗೆ ಸೂಕ್ತ ತರಬೇತಿಯನ್ನು ನೀಡಬೇಕು.

❋ ಸದಸ್ಯರಲ್ಲಿ ಯಾರಿಗೆ ಸಾಲವು ಅಗತ್ಯವಿದೆಯೋ ಅಂಥವರಿಗೆ ಮಾತ್ರ ಸಾಲವನ್ನು ಒದಗಿಸುವುದು.

❋ ಸದಸ್ಯರಿಗೆ ಸಾಲವನ್ನು ನೀಡುವಾಗ ಆಗಬಹುದಾದಂತಹ ಕಾರ್ಯ ನಿರ್ವಹಣಾ ವಿಳಂಬವನ್ನು ಕಡಿಮೆ ಮಾಡುವಲ್ಲಿ ಸಹಕಾರ ಕಾನೂನುಗಳಲ್ಲಿ ಸೂಕ್ತ ತಿದ್ದುಪಡಿಗಳನ್ನು ಮಾಡಬೇಕು.

❋ ಸಾಲವನ್ನು ಮಂಜೂರು ಮಾಡುವ ನೀತಿ ಮತ್ತು ನಿರ್ವಹಣೆಯು ರೈತರಿಗೆ (ವಿಶೇಷವಾಗಿ ಅತಿ ಸಣ್ಣ ರೈತರು) ಅನುಕೂಲವಾಗುವಂತೆ ಇರಬೇಕು.

❋ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಆರ್ಥಿಕವಾಗಿ ಲಾಭದಾಯಕವಲ್ಲದ ಸಂಘಗಳನ್ನು ಪುನರ್ರಚಿಸಿ ಬಲಪಡಿಸಬೇಕು.

❋ ರಾಜಕೀಯಪಕ್ಷಗಳಿಗೆ ಸಹಕಾರವ್ಯವಸ್ಥೆಯಲ್ಲಿ ಅವಕಾಶ, ಮಧ್ಯಪ್ರವೇಶ ದೊರೆಯದಂತೆ ನೋಡಿಕೊಳ್ಳಬೇಕು.

* ಸಹಕಾರ ಸಂಘಗಳು ಠೇವಣಿಸಂಗ್ರಹಕ್ಕೆ ಹೆಚ್ಚು ಆದ್ಯತೆ ನೀಡಿ ಸದೃಢವಾಗುವಂತೆ ಪ್ರಯತ್ನಿಸಬೇಕು.

* ಸದಸ್ಯರಿಂದ ಬಾಕಿ ವಸೂಲಾತಿಯ ಕ್ರಮವನ್ನು ಸುಧಾರಿಸಬೇಕು.

* ಕೇಂದ್ರ ಸಹಕಾರ ಬ್ಯಾಂಕುಗಳ ಹಾಗೂ ರಾಜ್ಯ ಸಹಕಾರ ಬ್ಯಾಂಕುಗಳ ಕಾರ್ಯನಿರ್ವಹಣೆಯಲ್ಲಿ ಸುಧಾರಣೆಯನ್ನು ತರಬೇಕು.

* ಸರ್ಕಾರ ಸಹಕಾರವ್ಯವಸ್ಥೆಯಲ್ಲಿ ಅನಗತ್ಯವಾಗಿ ಹಸ್ತಕ್ಷೇಪ ಮಾಡಕೂಡದು. ಒಂದು ವೇಳೆ ಹಸ್ತಕ್ಷೇಪ ಮಾಡಿದರೆ ಅದು ಸಂಘದ ಅಭಿವೃದ್ಧಿಯ ಕಡೆ ಇರಬೇಕು.

* ಸಾರ್ವಜನಿಕರಿಗೆ ಸಹಕಾರತತ್ವದ ಬಗ್ಗೆ ಸೂಕ್ತವಾದ ತಿಳುವಳಿಕೆಯನ್ನು ನೀಡುವ ಮೂಲಕ ಚಳುವಳಿಯು ಯಶಸ್ವಿಯಾಗುವಂತೆ ನೋಡಿಕೊಳ್ಳಬೇಕು.

* ವಿವಿಧೋದ್ದೇಶ ಸಹಕಾರಸಂಘಗಳನ್ನು ಅತ್ಯಧಿಕವಾಗಿ ಸ್ಥಾಪಿಸಬೇಕು. ಏಕೆಂದರೆ ಸಾಲ, ಮಾರಾಟ, ಸಾಧನಗಳ ಪೂರೈಕೆ, ಕಾರ್ಯನಿರ್ವಹಣೆ ಮುಂತಾದವುಗಳನ್ನು ಸಂಯೋಜಿಸುವುದಕ್ಕೆ ಇವುಗಳು ಅಗತ್ಯ.

* ಸದಸ್ಯರಿಗೆ ಸಾಲ ಮಂಜೂರು ಮಾಡಿದ ನಂತರ ಅದು ಸದುಪಯೋಗವಾಗುತ್ತಿದೆಯೇ ಇಲ್ಲವೇ ಎಂಬುದರ ಬಗ್ಗೆ ಆಗಾಗ್ಗೆ ತಪಾಸಣೆ ನಡೆಸಬೇಕು.

* ಸಹಕಾರಸಂಘಗಳಿಗೆ ಸರ್ಕಾರ ಹೆಚ್ಚಿನ ಪ್ರಮಾಣದಲ್ಲಿ ಬಂಡವಾಳವನ್ನು ಒದಗಿಸಿಕೊಡಬೇಕು. ಇದರಿಂದ ಸಂಘಗಳು ಬಂಡವಾಳದ ಕೊರತೆಯಿಂದ ನರಳುತ್ತಿರುವುದನ್ನು ತಪ್ಪಿಸಬಹುದಾಗಿದೆ.

ಭಾರತದ ಗ್ರಾಮೀಣ ಪ್ರದೇಶದ ಜನತೆಯ ಅಭಿವೃದ್ಧಿ ಸಹಕಾರ ಸಂಘಗಳನ್ನು ಅವಲಂಬಿಸಿರುವ ಕಾರಣದಿಂದ ಸಹಕಾರಿ ಸಂಘಗಳು ಈ ಮೇಲೆ ತಿಳಿಸಿರುವ ಸೂಚನಾಕ್ರಮಗಳ ಮೂಲಕ ಪುನಶ್ಚೇತನ ಮಾಡಿಕೊಂಡರೆ ಸಹಕಾರಿ ಆಂದೋಲನವು ಹೆಚ್ಚಳವಾಗುತ್ತದೆ.

ಭಾರತದ ಸಹಕಾರ ಚಳುವಳಿಯ ಇತ್ತೀಚಿನ ಪ್ರವೃತ್ತಿಗಳು:

ಭಾರತದ ಸಹಕಾರ ಚಳುವಳಿಯ ಇತ್ತೀಚಿನ ಪ್ರವೃತ್ತಿಗಳು ಈ ಕೆಳಕಂಡಂತಿವೆ.

* ಪ್ರಸ್ತುತ ಸರ್ಕಾರ ದುರ್ಬಲ ಹಾಗೂ ಸದೃಢವಲ್ಲದ, ಬೆಳವಣಿಗೆ ಗತಿಯನ್ನು ಕಾಣದ ಸಂಘಗಳಿಗೆ ಅಧಿಕ ಪ್ರೋತ್ಸಾಹವನ್ನು ಕೊಡುತ್ತಿಲ್ಲದಿರುವ ಚಿತ್ರಣ ನಿರ್ಮಾಣವಾಗಿದೆ.
* ಯೋಚನಾಬದ್ಧವಾಗಿಲ್ಲದ ಸಹಕಾರ ಸಂಘಗಳ ಪ್ರಾರಂಭವನ್ನು ಸರ್ಕಾರ ಒಪ್ಪುವುದಿಲ್ಲ.
* ಸಣ್ಣ ಸಹಕಾರ ಸಂಘಗಳನ್ನು ಒಗ್ಗೂಡಿಸುವ ಮೂಲಕ ಆರ್ಥಿಕವಾಗಿ ಬೆಳವಣಿಗೆ ಸಾಧಿಸುವಂತ ದೊಡ್ಡ ಘಟಕವನ್ನಾಗಿ ಮಾಡಲು ಪ್ರಸ್ತುತ ಹೆಚ್ಚು ಗಮನಕೊಡಲಾಗುತ್ತಿದೆ.
* ಸಹಕಾರ ಸಂಘಗಳ ವ್ಯವಸ್ಥಾಪನಾ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ.
* ಸಮಗ್ರ ಗ್ರಾಮೀಣ ಸಾಲಕ್ಕೆ ಹೆಚ್ಚು ಆದ್ಯತೆ ನೀಡಲಾಗಿದೆ.
* ಸಹಕಾರ ಚಳುವಳಿಯಲ್ಲಿ ಪಟ್ಟಭದ್ರ ಹಿತಾಸಕ್ತಿಗಳ ವ್ಯಕ್ತಿಗಳು ಪ್ರವೇಶಿಸದಂತೆ ಕ್ರಮಗಳನ್ನು ಕೈಗೊಳ್ಳಲಾಗಿದೆ.
* ಒಂದು ಸಹಕಾರ ಸಂಘಕ್ಕಿಂತ ಹೆಚ್ಚಿನ ಸಂಘಗಳಲ್ಲಿ ಅಧಿಕಾರ ಸ್ಥಾನವನ್ನು ಪಡೆಯುವುದನ್ನು ತಡೆಗಟ್ಟಲಾಗಿದೆ.
* ಸಣ್ಣ ಭೂ ಹಿಡುವಳಿದಾರರಿಗೆ ನಿರ್ದೇಶಕ ಮಂಡಳಿಯಲ್ಲಿ ಕೆಲವು ಸ್ಥಾನಗಳನ್ನು ಮೀಸಲಿರಿಸಲಾಗಿದೆ.
* ಸಾಲಗಳನ್ನು ಮರುಪಾವತಿ ಮಾಡುವ ಅಥವಾ ಮರು ವಸೂಲಿ ಮಾಡುವ ಕಾರ್ಯವನ್ನು ಹೆಚ್ಚು ಪರಿಣಾಮಕಾರಿಯಾಗುವಂತೆ ಆ ಮೂಲಕ ಸಂಘಗಳ ಬಂಡವಾಳ ರಚನಾಕ್ರಮವುವನ್ನು ಸುಭದ್ರಗೊಳಿಸುವಂತೆಯೂ ಸಹ ಕ್ರಮಗಳನ್ನು ಕೈಗೊಳ್ಳಲಾಗಿದೆ.
* ಸಾಲದ ಬಗ್ಗೆ ನೀತಿ ಮತ್ತು ನಿರ್ವಹಣೆಯನ್ನು ಪುನರ್ರಚಿಸಲಾಗಿದ್ದು ಅದನ್ನು ಸರಳಗೊಳಿಸಲಾಗಿದೆ.

* ಸಹಕಾರ ಸಂಘಗಳ ಮೂಲಕ ಗ್ರಾಮೀಣ ಜನರ ಉಳಿತಾಯವನ್ನು ಹೆಚ್ಚಾಗಿ ಸಂಗ್ರಹಿಸಿ ಅದನ್ನು ಕ್ರೋಢೀಕರಿಸುವ ಕಾರ್ಯಕ್ಕೆ ಹೆಚ್ಚು ಗಮನ ಕೊಡಲಾಗಿದೆ.
* ಗ್ರಾಹಕರ ಸಹಕಾರ ಸಂಘಗಳನ್ನು ಮಾರಾಟ ಸಹಕಾರ ಸಂಘಗಳೊಂದಿಗೆ ಒಗ್ಗೂಡಿಸುವ ಪ್ರಯತ್ನಗಳು ಮಾಡಲಾಗುತ್ತಿದೆ. ಇದು ಒಳ್ಳೆಯ ಕ್ರಮವೇ ಸರಿ. ಏಕೆಂದರೆ ನೇರವಾಗಿ ವಸ್ತುಗಳನ್ನು ಪಡೆಯಬಹುದು.
* ಅಧಿಕ ಸಂಖ್ಯೆಯಲ್ಲಿ ಕೈಗಾರಿಕಾ ಸಹಕಾರ ಸಂಘಗಳನ್ನು ಸ್ಥಾಪಿಸುವತ್ತ ಹೆಚ್ಚು ಗಮನ ಕೊಡಲಾಗುತ್ತಿದೆ.
* ಕ್ರಮೇಣವಾಗಿ ಏಕೋದ್ದೇಶ ಪ್ರಾಥಮಿಕ ಸಹಕಾರ ಸಾಲ ಸಂಘಗಳನ್ನು ವಿವಿಧೋದ್ದೇಶ ಸಹಕಾರ ಸಂಘಗಳಾಗಿ ಪರಿವರ್ತಿಸಲಾಗುತ್ತಿದೆ.
* ಗ್ರಾಹಕರ ಸಹಕಾರ ಸಂಘಗಳನ್ನು ನಗರಗಳಲ್ಲಿ, ಪಟ್ಟಣಗಳಲ್ಲಿ ಅಲ್ಲದೇ ಗ್ರಾಮೀಣ ಪ್ರದೇಶಗಳಲ್ಲೂ ಸ್ಥಾಪನೆಮಾಡುವಲ್ಲಿ ಅತ್ಯಧಿಕ ಗಮನ ಕೊಡಲಾಗುತ್ತಿದೆ.
* ಒಕ್ಕೂಟಗಳನ್ನು (ಸಹಕಾರ ಸಂಘಗಳ ಒಂದು ಉತ್ತುಂಗ ಸಂಸ್ಥೆ) ರಚಿಸುವ ಸಲುವಾಗಿ ಪ್ರಯತ್ನಗಳು ನಡೆದಿವೆ. ಒಕ್ಕೂಟ ಸಹಕಾರಗಳು ಜಿಲ್ಲಾಮಟ್ಟದಲ್ಲೂ, ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲೂ ಇವೆ.
* ಹಿಡುವಳಿಗಳನ್ನು ಒಂದುಗೂಡಿಸುವ ಮೂಲಕ ಬೃಹತ್ ಪ್ರಮಾಣದಲ್ಲಿ ಸಾಗುವಳಿ ಮಾಡಲು ಅನುಕೂಲವಾಗುವಂತೆ ಅಧಿಕವಾಗಿ ಸಹಕಾರ ವ್ಯವಸಾಯ ಸಂಘಗಳನ್ನು ರಚಿಸುವ ಸಲುವಾಗಿ ಪ್ರಯತ್ನ ನಡೆಸಲಾಗಿದೆ.
* ಪ್ರಸ್ತುತದ ವಿದ್ಯಮಾನವೆಂದರೆ, ಖಾಸಗಿ ವಲಯ ಮತ್ತು ಸಾರ್ವಜನಿಕ ವಲಯಗಳ ನಡುವೆ ಒಂದು ಸಮತೋಲನವನ್ನು ಕಾಪಾಡುವಂಥ ಮೂರನೇ ರಂಗವಾಗಿ ಸಹಕಾರ ಚಳುವಳಿ ಕಾರ್ಯ ನಿರ್ವಹಿಸುತ್ತಿದೆ.
* ಪ್ರಸ್ತುತ, ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಅಭಿವೃದ್ಧಿಗೆ ಕಾರಣವಾಗಿ ಸಹಕಾರ ಒಂದು ಸಾಧನವಾಗಿ ನಿರ್ಧರಿತವಾಗಿದೆ.

ಈ ಮೇಲಿನ ಎಲ್ಲಾ ಅಂಶಗಳು ಸಹಕಾರ ಚಳುವಳಿಯಲ್ಲಿ ಕಂಡುಬರುವ ಇತ್ತೀಚಿನ ಪ್ರವೃತ್ತಿಗಳಾಗಿದ್ದು ಆಂದೋಲನಕ್ಕೆ ಉತ್ತಮ ಅಂಶಗಳಾಗಿವೆ ಎಂದು ಹೇಳಬಹುದು.

ಕರ್ನಾಟಕ ರಾಜ್ಯದ ಕೆಲವು ಸಹಕಾರ ಸಂಘಗಳ ಪಕ್ಷಿನೋಟ :

I. ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟಗಳು :

೧೯೭೫ ರಲ್ಲಿ ಕರ್ನಾಟಕ ರಾಜ್ಯದಲ್ಲಿ ಹೈನುಗಾರರನ್ನು ಮಧ್ಯವರ್ತಿಗಳ ಶೋಷಣೆಯಿಂದ ಪಾರು ಮಾಡುವ ಸಲುವಾಗಿ ವಿಶ್ವ ಬ್ಯಾಂಕ್ ನೆರವಿನ ಅಭಿವೃದ್ಧಿಯಡಿಯಲ್ಲಿ 'ಹೈನು ಅಭಿವೃದ್ಧಿಯೋಜನೆ' ಆಶಾದೀಪವಾಗಿ ಪರಿಣಮಿಸಿತು. ಅಮುಲ್ ಮಾದರಿ ಸಹಕಾರಸಂಘಗಳನ್ನು ಗ್ರಾಮಾಂತರಪ್ರದೇಶಗಳಲ್ಲಿ ಪ್ರಾರಂಭಿಸಲು ಯೋಜನೆಯನ್ನು ಅಳವಡಿಸಲಾಯಿತು. ಎಲ್ಲಾ ಗ್ರಾಮಗಳ ಮತ್ತು ತಾಲ್ಲೂಕುಗಳ ಹಾಲು ಉತ್ಪಾದಕರ ಸಂಘಗಳನ್ನು ನಿಯಂತ್ರಿಸುವ ಸಲುವಾಗಿ ಆಯಾ ಜಿಲ್ಲಾ ಕೇಂದ್ರಗಳಲ್ಲಿ ಒಕ್ಕೂಟಗಳನ್ನು ಆರಂಭಿಸಲಾಯಿತು.

ಒಕ್ಕೂಟಗಳ ಪ್ರಮುಖ ಉದ್ದೇಶಗಳು :

- ಗ್ರಾಮಾಂತರ ಪ್ರದೇಶಗಳಲ್ಲಿ ಹೈನುಗಾರಿಕೆ ಚಟುವಟಿಕೆಗಳನ್ನು ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ ಸಹಕಾರತತ್ವಗಳ ಆಧಾರದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ರಚಿಸುವುದು.
- ಹಾಲು ಉತ್ಪಾದಕರು ಉತ್ಪಾದಿಸಿದ ಹಾಲಿಗೆ ನ್ಯಾಯಬೆಲೆ ಹಾಗೂ ಉತ್ಪಾದಿಸುವ ಹೆಚ್ಚುವರಿ ಹಾಲಿಗೆ ವರ್ಷವಿಡೀ ನಿರಂತರ ಮಾರುಕಟ್ಟೆ ಸೌಲಭ್ಯವನ್ನು ಒದಗಿಸುವುದು.
- ಪೌಷ್ಟಿಕ ಹಾಲು ಹಾಗೂ ಹಾಲಿನ ಉತ್ಪನ್ನಗಳನ್ನು ನಗರ ಮತ್ತು ಗ್ರಾಮೀಣ ಪ್ರದೇಶಗಳ ನಿವಾಸಿಗಳಿಗೆ ಒದಗಿಸುವುದು.
- ಅಧಿಕ ಹಾಗೂ ಉತ್ತಮ ಗುಣಮಟ್ಟದ ಹಾಲು ಉತ್ಪಾದನೆಗೆ ಅವಶ್ಯಕವಾದ ತಾಂತ್ರಿಕ ಸೌಲಭ್ಯಗಳನ್ನು ಮತ್ತು ಆಧುನಿಕ ತಂತ್ರಜ್ಞಾನದ ಮಾಹಿತಿಗಳನ್ನು ವಿಸ್ತರಿಸುವುದು.
- ಗ್ರಾಮೀಣ ಪ್ರದೇಶದ ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗವನ್ನು ಒದಗಿಸುವುದು ಪ್ರಮುಖವಾದ ಉದ್ದೇಶವಾಗಿದೆ. ಏಕೆಂದರೆ ಇದರಿಂದ ಹಳ್ಳಿಗಳಿಂದ ನಗರಕ್ಕೆ ವಲಸೆ ಹೋಗುವ ವಿದ್ಯಾವಂತ ನಿರುದ್ಯೋಗಿಗಳನ್ನು ತಡೆಯುವುದಲ್ಲದೇ, ಹಳ್ಳಿಗಳ ಆರ್ಥಿಕ

ಅಭಿವೃದ್ಧಿಯನ್ನು ಉತ್ತಮಗೊಳಿಸಬಹುದಾಗಿದೆ.

* ಗ್ರಾಮೀಣಪ್ರದೇಶದ ಉತ್ಪಾದಕರು ಹಾಗೂ ನಗರಪ್ರದೇಶದ ಬಳಕೆದಾರರ ನಡುವೆ ಒಂದು ಸಂಪರ್ಕ ಸೇತುವೆಯಾಗಿ ಕಾರ್ಯ ನಿರ್ವಹಿಸುವುದರ ಜೊತೆಗೆ ಸಮುದಾಯದ ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಯಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸುವುದು.

ಗ್ರಾಮೀಣ ಪ್ರದೇಶಗಳಲ್ಲಿ ಹಾಲು ಉತ್ಪಾದಕರಿಗಾಗಿಯೇ ಸ್ಥಾಪನೆಯಾಗಿರುವ ಹಾಲು ಉತ್ಪಾದಕರ ಸಂಘಗಳು ಸಹಕಾರಿ ಸಂಘವಾಗಿದ್ದು, ಸಂಪೂರ್ಣವಾಗಿ ಪ್ರಜಾಪ್ರಭುತ್ವದ ತಳಹದಿಯ ಮೇಲೆ ಕೇಂದ್ರಬಿಂದುವಾಗಿ ಕರ್ತವ್ಯ ನಿರ್ವಹಿಸುತ್ತಿವೆ. ಸ್ಥಳೀಯ ಸದಸ್ಯ ಹಾಲು ಉತ್ಪಾದಕರಿಗೆ ಸೂಕ್ತ ತರಬೇತಿ ಹಾಗೂ ಮಾರ್ಗದರ್ಶನ ನೀಡುವುದರ ಮೂಲಕ ಹೈನುಗಾರಿಕೆ ಚಟುವಟಿಕೆಗಳನ್ನು ಮತ್ತು ಸಹಕಾರ ಸಂಘಗಳನ್ನು ನಿರ್ವಹಿಸುವ ಜವಾಬ್ದಾರಿಯನ್ನು ಸಂಪೂರ್ಣವಾಗಿ ಅವರಿಗೆ ನೀಡಲಾಗುತ್ತದೆ.

ಹಾಲು ಉತ್ಪಾದಕರ ಸಹಕಾರ ಸಂಘಗಳು ವರ್ಷದ ಎಲ್ಲಾ ಸಮಯದಲ್ಲೂ ದಿನದ ಎರಡು ಸರದಿಗಳಲ್ಲಿಯೂ ಕಾರ್ಯ ನಿರ್ವಹಿಸುವ ಸಂಘಗಳಾಗಿದ್ದು, ಗ್ರಾಮೀಣ ಪ್ರದೇಶದಲ್ಲಿ ಹೆಚ್ಚುವರಿ ಉತ್ಪಾದನೆಯಾಗುವ ಹಾಲಿಗೆ ನಿರಂತರ ಮಾರುಕಟ್ಟೆಯನ್ನು ಕಲ್ಪಿಸಿಕೊಡುವ ಜವಾಬ್ದಾರಿಯನ್ನು ನಿರ್ವಹಿಸುವುದು. ನಿರ್ದಿಷ್ಟ ಹಾಗೂ ನಿಗದಿತ ದಿನದಂದು ಉತ್ಪಾದಕರು ಪೂರೈಸಿದ ಹಾಲಿಗೆ ಬಟವಾಡೆ ಮಾಡುವ ಹೊಣೆಗಾರಿಕೆಯನ್ನು ಸಹಾ ನಿರ್ವಹಿಸುತ್ತದೆ. ಹಾಲಿನ ಉತ್ಪಾದನೆ ಹೆಚ್ಚಿಸಲು ಪಶು ವೈದ್ಯಕೀಯ ಸೇವೆ, ಕೃತಕ ಗರ್ಭಧಾರಣೆ ಸೌಲಭ್ಯಗಳ ಜೊತೆಗೆ ಪಶು ಆಹಾರ, ಹಸಿರು ಮೇವಿನ ಬೀಜಗಳ ಪೂರೈಕೆ ಮುಂತಾದ ತಾಂತ್ರಿಕ ಸವಲತ್ತುಗಳನ್ನು ಉತ್ಪಾದಕರಿಗೆ ನೀಡಲಾಗುವುದು.

ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳ ವಿಶೇಷಯೋಜನೆಗಳು:

(೧) ಪರಿಶಿಷ್ಟ ಜಾತಿ/ಪಂಗಡಗಳ ಅಭಿವೃದ್ಧಿ ಯೋಜನೆ : ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿ ನಿಗಮದಿಂದ ಪ್ರಾಯೋಜಿತವಾಗಿರುವ ಈ ಯೋಜನೆಯು ೧೯೭೬ರಿಂದ ಅನುಷ್ಠಾನದಲ್ಲಿದೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅರ್ಹ ಫಲಾನುಭವಿಗಳಿಗೆ ತಲಾ

ಎರಡು ಮಿಶ್ರ ತಳಿ ರಾಸುಗಳನ್ನು ಖರೀದಿಸಿಕೊಡಲು ಈ ಯೋಜನೆಯಲ್ಲಿ ಶೇ. ೬೦ ರಷ್ಟು ಸಹಾಯಧನವಾಗಿರುತ್ತದೆ. ಇನ್ನು ಉಳಿದ ಮೊತ್ತವನ್ನು ಫಲಾನುಭವಿಯು ಶೇ.೬ ರಷ್ಟು ಸುಲಭ ಬಡ್ಡಿ ದರದ ೩೬ಕಂತುಗಳಲ್ಲಿ ಸಾಲ ಮರುಪಾವತಿ ಮಾಡಬೇಕಾಗಿರುತ್ತದೆ. ಈ ಯೋಜನೆಯ ಫಲಾನುಭವಿಯ ಆಯ್ಕೆಯನ್ನು ಕರ್ನಾಟಕ ಹಾಲು ಮಹಾಮಂಡಳಿಯಾಗಲಿ ಇಲ್ಲವೇ ಜಿಲ್ಲಾ ಹಾಲು ಒಕ್ಕೂಟವಾಗಲೀ ಆಯ್ಕೆ ಮಾಡದೇ ನೇರವಾಗಿ ಗ್ರಾಮೀಣ ಮಟ್ಟದ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಬಿಟ್ಟುಕೊಟ್ಟಿರುವುದು ಒಂದು ಪಾರದರ್ಶಕತೆಯ ದ್ಯೋತಕವಾಗಿದೆ ಎಂದು ಹೇಳಬಹುದು.

(೨) ಹಿಂದುಳಿದ ವರ್ಗಗಳ ನೇರ ಅವಧಿ ಸಾಲ ಯೋಜನೆ : ಹಿಂದುಳಿದ ವರ್ಗಗಳ ಅರ್ಹ ಫಲಾನುಭವಿಗಳಿಗೆ ತಲಾ ಎರಡು ರಾಸುಗಳನ್ನು ನೀಡುವ ಸಾಲದ ಯೋಜನೆಯನ್ನು ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದವರ ಆರ್ಥಿಕ ಸಹಯೋಗದೊಂದಿಗೆ ಒಕ್ಕೂಟದ ವ್ಯಾಪ್ತಿಯಲ್ಲಿ ೧೯೯೫ ರಿಂದ ಅನುಷ್ಠಾನಗೊಂಡಿದೆ. ಈ ಯೋಜನೆಯಲ್ಲಿ ಯಾವುದೇ ವಿಧವಾದ ಸಹಾಯಧನವಿರುವುದಿಲ್ಲ. ಫಲಾನುಭವಿಯು ಶೇ. ೦೭ ರ ಸುಲಭ ಬಡ್ಡಿ ದರದಲ್ಲಿ ೩೬ ಕಂತುಗಳಲ್ಲಿ ಸಾಲ ಮರುಪಾವತಿ ಮಾಡಬೇಕಾಗಿರುತ್ತದೆ. ಈ ಯೋಜನೆಯ ಫಲಾನುಭವಿಯ ಆಯ್ಕೆಯನ್ನು ಕರ್ನಾಟಕ ಹಾಲು ಮಹಾಮಂಡಳಿಯಾಗಲಿ ಇಲ್ಲವೇ ಜಿಲ್ಲಾ ಹಾಲು ಒಕ್ಕೂಟವಾಗಲೀ ಆಯ್ಕೆ ಮಾಡದೇ ನೇರವಾಗಿ ಗ್ರಾಮೀಣಮಟ್ಟದ ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಬಿಟ್ಟುಕೊಟ್ಟಿರುವುದು ಗಮನಾರ್ಹ ಸಂಗತಿಯಾಗಿದೆ.

(೩) ಸಹಕಾರ ಅಭಿವೃದ್ಧಿ ಯೋಜನೆ : ಒಕ್ಕೂಟದ ವ್ಯಾಪ್ತಿಯ ಹಾಲು ಉತ್ಪಾದಕರ ಸಂಘಗಳನ್ನು ಅಭಿವೃದ್ಧಿ ಪಡಿಸುವ ಸಲುವಾಗಿ ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯ ಹಣಕಾಸು ಸಹಯೋಗದೊಂದಿಗೆ ಸಹಕಾರಿ ಅಭಿವೃದ್ಧಿ ಯೋಜನೆಯನ್ನು ೧೯೯೬ ನೇ ಸಾಲಿನವರೆಗೆ ನಡೆಸಲಾಗಿದೆ. ಈ ಯೋಜನೆಯಡಿಯಲ್ಲಿ ಎಲ್ಲಾ ಸದಸ್ಯರಿಗೂ ಅಮುಲ್ ಮಾದರಿಯ ಸಹಕಾರ ತತ್ವವನ್ನು ಅರಿವು ಮಾಡಿಕೊಡುವುದಲ್ಲದೇ ಉತ್ಪಾದಕರ ಪಾತ್ರ, ಹಕ್ಕು ಮತ್ತು ಜವಾಬ್ದಾರಿಯ ಬಗ್ಗೆ ತಿಳಿವಳಿಕೆಯನ್ನು ನೀಡಲಾಗುವುದು.

II. ಕೋಳಿ ಉದ್ಯಮ ಸಹಕಾರ ಸಂಘಗಳು.

ಭಾರತದ ಸಹಕಾರ ಸಂಘಗಳ ಪ್ರಕಾರಗಳಲ್ಲಿ ಕೋಳಿ ಉದ್ಯಮ ಸಹಕಾರ ಸಂಘಗಳೂ ಸಹ ಬರುತ್ತವೆ. ಕೋಳಿ ಸಾಕಾಣಿಕೆ ಕುರಿತು ಆರ್ಥಿಕ ಯೋಜನೆಗಳ ಅನುಗುಣವಾಗಿ ದೇಶದಲ್ಲಿ ಕೈಗೊಳ್ಳಲಾದ ಕ್ರಮಗಳ ಫಲವಾಗಿ ಕೋಳಿ ಮೊಟ್ಟೆಗಳ ಉತ್ಪಾದನೆ ಗಮನಾರ್ಹವಾಗಿ ಹೆಚ್ಚಿದೆ. ಪ್ರಮುಖವಾಗಿ ಮೊಟ್ಟೆಗಳ ಮಾರಾಟಕ್ಕಾಗಿ ಅನೇಕ ಉದ್ಯಮಿಗಳು ಸಹಕಾರ ಸಂಘಗಳನ್ನು ಏರ್ಪಡಿಸಿಕೊಳ್ಳುತ್ತಾರೆ. ೧೯೭೨ರ ಜೂನ್ ತಿಂಗಳ ಅಂತ್ಯದ ವೇಳೆಗೆ ದೇಶದಲ್ಲಿ ಪ್ರಾಥಮಿಕ ಕೋಳಿ ಉದ್ಯಮಗಳ ಸಹಕಾರ ಸಂಘಗಳು ಸಾಕಷ್ಟು ಬೆಳಕಿಗೆ ಬಂದವು.

ಕೇಂದ್ರೀಯ ಕೋಳಿ ಸಾಕಾಣಿಕೆ ಅಭಿವೃದ್ಧಿ ಸಲಹಾ ಸಮಿತಿಯ ಶಿಫಾರಸ್ಸುಗಳ ಪ್ರಕಾರ ರಾಷ್ಟ್ರೀಯ ಸಹಕಾರ ಅಭಿವೃದ್ಧಿ ನಿಗಮ ಕೋಳಿ ಉದ್ಯಮದ ಉತ್ಪನ್ನಗಳ ಮಾರಾಟಕ್ಕೆ ಉತ್ತಮ ವ್ಯವಸ್ಥೆ ಏರ್ಪಡಿಸುವುದಕ್ಕಾಗಿ ಕೋಳಿ ಉದ್ಯಮ ಉತ್ಪನ್ನಗಳ ರಾಷ್ಟ್ರೀಯ ಸಹಕಾರಿ ಮಾರಾಟ ಒಕ್ಕೂಟವನ್ನು ಸ್ಥಾಪಿಸುವ ಯೋಜನೆಯನ್ನು ಸಿದ್ಧಪಡಿಸಿತು. ೧೯೭೩-೭೪ರ ವರದಿಯ ಪ್ರಕಾರ ಭಾರತ ಸರ್ಕಾರ ನಿಪುಣರ ತಂಡವೊಂದರಿಂದ ಈ ಯೋಜನೆಯ ಪರಿಶೀಲನೆ ನಡೆಸಿ ಕೆಲವು ಮಾರ್ಪಾಡುಗಳೊಂದಿಗೆ ಇದನ್ನು ಜಾರಿಗೆ ತರಲು ಒಪ್ಪಿತು.

ಕೋಳಿ ಉದ್ಯಮ ಅಭಿವೃದ್ಧಿಗೆ ಕೃಷಿ ಮರುಹಣಕಾಸು ನಿಗಮವು ಧನಸಹಾಯವನ್ನು ನೀಡುತ್ತಿದೆ. ಆದರೆ ಕೇರಳ ಮತ್ತು ದೆಹಲಿ ಪ್ರದೇಶಗಳ ಕೋಳಿ ಉದ್ಯಮ ಸಹಕಾರ ಸಂಘಗಳು ಮಾತ್ರ ಈ ಸಹಾಯವನ್ನು ಉಪಯೋಗಿಸಿಕೊಂಡಿವೆ.

III. ಬೆಸ್ತರ ಸಹಕಾರ ಸಂಘಗಳು.

ಹಲವಾರು ಮಂದಿ ಬೆಸ್ತರು ತಾವು ಹಿಡಿದ ಮೀನುಗಳನ್ನು ಮಾರಾಟ ಮಾಡುವುದಕ್ಕಾಗಿ ಮಧ್ಯವರ್ತಿಗಳನ್ನು, ವ್ಯಾಪಾರಸ್ಥರನ್ನು ಬಹಳಕಾಲದಿಂದ ಅವಲಂಬಿಸಿರುತ್ತಾರೆ. ಈ ರೀತಿಯ ಅವಲಂಬನೆಯನ್ನು ತಪ್ಪಿಸುವುದಕ್ಕಾಗಿ, ಮೀನುಗಾರಿಕೆಗೆ ಆಧುನಿಕ ತಂತ್ರಗಳ ಪ್ರಯೋಜನಗಳನ್ನು ದೊರಕಿಸುವುದಕ್ಕೂ ಸಹಕಾರ ಅತ್ಯುತ್ತಮ ಮಾರ್ಗವಾದ್ದರಿಂದ ಬೆಸ್ತರ ಸಹಕಾರ ಸಂಘಗಳ ಸ್ಥಾಪನೆಗಾಗಿ ಸರ್ಕಾರ ಪ್ರೋತ್ಸಾಹ ನೀಡುತ್ತಿದೆ.

ಸಹಕಾರ ಮೀನುಗಾರಿಕೆ ಅಭಿವೃದ್ಧಿಗೆ ವಿಶೇಷ ಯೋಜನೆಗಳನ್ನು ಸಿದ್ಧಗೊಳಿಸಿ ಕೃಷಿ ಮರು ಹಣಕಾಸು ನಿಗಮದ ಧನಸಹಾಯದಿಂದ ಇವುಗಳನ್ನು ಕಾರ್ಯಗತ ಮಾಡಲಾಗುತ್ತಿದೆ. ಯಾಂತ್ರಿಕ ದೋಣಿಗಳು ಮತ್ತು ಇವುಗಳಿಗೆ ಅವಶ್ಯಕವಾದ ವಿವಿಧ ಸಲಕರಣೆಗಳನ್ನು ಸಂಗ್ರಹಿಸಿದ ಮೀನುಗಳನ್ನು ರಕ್ಷಿಸಿಡಲು ಶೈತ್ಯಾಗಾರಗಳನ್ನೂ ಸಹಕಾರ ಸಂಘಗಳ ಬೆಸ್ತರಿಗೆ ಒದಗಿಸುವುದು ಮತ್ತು ಮೀನು ಮಾರಾಟ ಏರ್ಪಾಡು ಮಾಡುವುದು ಮುಂತಾದವು ಈ ಯೋಜನೆಗಳು ಒಳಗೊಂಡಿರುವ ಮುಖ್ಯಾಂಶಗಳಾಗಿವೆ. ಮೀನು ವ್ಯವಸಾಯಗಾರರ ಅಭಿವೃದ್ಧಿ ಏಜೆನ್ಸಿಯು ೧೯೭೩-೭೪ರಲ್ಲಿ ಪ್ರಾರಂಭಿಸಿದ ಮೀನುಗಾರಿಕೆ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಸಹಕಾರಕ್ಕೆ ಮುಖ್ಯವಾದ ಸ್ಥಾನವನ್ನು ಕೊಡಲಾಗಿದೆ.

IV. ಗೃಹ ನಿರ್ಮಾಣ ಸಹಕಾರ ಸಂಘಗಳು :

ಸ್ವಂತಮನೆಯನ್ನು ಹೊಂದಬೇಕೆಂಬ ಬಯಕೆ ಸಾಮಾನ್ಯವಾಗಿ ಎಲ್ಲಾ ಕುಟುಂಬಗಳದ್ದಾಗಿರುವುದು. 'ಮದುವೆ ಮಾಡಿ ನೋಡು, ಮನೆ ಕಟ್ಟಿ ನೋಡು' ಎಂಬ ಗಾದೆ ರೂಢಿಯಲ್ಲಿದೆ. ಅಂದರೆ ಮನೆಕಟ್ಟುವುದು ಸುಲಭದ ಕಾರ್ಯವಲ್ಲ. ಇದಕ್ಕೆ ಸಾಕಷ್ಟು ಹಣ ಬೇಕಾಗುತ್ತದೆ. ಹಾಗಾಗಿ ಹಣದ ಕೊರತೆಯನ್ನು ನೀಗಿಸಬಲ್ಲದು ಸಹಕಾರ ಸಂಘ. ಗ್ರಾಮೀಣ ಮತ್ತು ನಗರ ಪ್ರದೇಶಗಳ ಜನರಿಗೆ ವಸತಿನಿರ್ಮಾಣಕ್ಕಾಗಿಯೇ ಸಹಾಯ ನೀಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆರ್ಥಿಕ ಯೋಜನೆಗಳ ಅಂಗವಾಗಿ ಅನೇಕ ಯೋಜನೆಗಳನ್ನು ಜಾರಿಗೆ ತಂದಿವೆ ಹಾಗೂ ಅನೇಕ ಗೃಹ ನಿರ್ಮಾಣ ಸಹಕಾರ ಸಂಘಗಳೂ ಅಸ್ತಿತ್ವಕ್ಕೆ ಬಂದಿವೆ.

ಭಾರತದಲ್ಲಿ ಪ್ರಪ್ರಥಮ ಗೃಹ ನಿರ್ಮಾಣ ಸಹಕಾರ ಸಂಘ ಮುಂಬೈ ಪ್ರಾಂತ್ಯದ 'ಗಾಮದೇವಿ' ಎಂಬಲ್ಲಿ ೧೯೦೫ ರಲ್ಲಿ ಸ್ಥಾಪಿಸಲ್ಪಟ್ಟಿತೆಂದು ತಿಳಿದುಬರುತ್ತದೆ. ವಸತಿ ನಿರ್ಮಾಣ ಕಾರ್ಯದಲ್ಲಿ ವ್ಯಕ್ತಿ ಪ್ರಯತ್ನಕ್ಕಿಂತ ಸಹಕಾರಿ ಪ್ರಯತ್ನ ಹೆಚ್ಚು ಪ್ರಯೋಜನಕರ. ಏಕೆಂದರೆ, ಸಹಕಾರ ಸಂಘವು ಸದಸ್ಯರ ಯೋಗಕ್ಷೇಮ ಪಾಲನೆಗಾಗಿ ಸ್ಥಾಪಿತವಾದ ಸಂಸ್ಥೆ. ಸದಸ್ಯರ ಇಷ್ಟಕ್ಕನುಸಾರವಾಗಿ ಅವರ ಆರ್ಥಿಕ ಶಕ್ತಿಗನುಗುಣವಾಗಿ ಸಂಘವು ವಸತಿ ಸೌಕರ್ಯವನ್ನು ಕಲ್ಪಿಸುತ್ತದೆ. ಸದಸ್ಯರು ಮನೆಯ ಸ್ವಂತ ಮಾಲೀಕರಾಗಬಹುದು.

ವಸತಿ ಸೌಕರ್ಯ ಕಲ್ಪಿಸುವುದೇ ಗೃಹ ನಿರ್ಮಾಣ ಸಹಕಾರ ಸಂಘದ ಮುಖ್ಯಧ್ಯೇಯವಾಗಿ ಇರುವಾಗ, ಆರ್ಥಿಕವಾಗಿ ಹಿಂದುಳಿದ ಮನೆಕಟ್ಟಲು ಶಕ್ತಿಯಿಲ್ಲದ

ಹತ್ತಾರು ಜನರನ್ನು ಸದಸ್ಯರನ್ನಾಗಿ ಸೇರಿಸಿಕೊಂಡು, ಅಂತಹವರಿಗೆ ವಸತಿ ಸೌಕರ್ಯ ಕಲ್ಪಿಸುವ ಕಾರ್ಯವನ್ನು ಸಂಘವು ಮಾಡುತ್ತದೆ. ಸದಸ್ಯರಾಗಲು ಸಂಘ ಯಾರನ್ನೂ ಒತ್ತಾಯ ಮಾಡುವುದಿಲ್ಲ. ಸದಸ್ಯರಲ್ಲಿ ಒಬ್ಬರು ದೊಡ್ಡವರು, ಒಬ್ಬರು ಚಿಕ್ಕವರು ಎಂಬ ವ್ಯತ್ಯಾಸವಿರುವುದಿಲ್ಲ. ಎಲ್ಲರೂ ಸಮಾನರು ಎಂಬ ಭಾವನೆ ಇರುತ್ತದೆ. ಪರಸ್ಪರ ಸಹಾಯದಿಂದ ಸದಸ್ಯರು ನೆರವನ್ನು ಪಡೆಯುವರು. ಇತರ ಸಹಕಾರ ಸಂಘಗಳ ನಿಯಮದಂತೆಯೇ ಗೃಹನಿರ್ಮಾಣ ಸಹಕಾರ ಸಂಘಗಳ ನಿಯಮಗಳೂ ಇರುತ್ತವೆ. ಆದರೆ ಗೃಹನಿರ್ಮಾಣ ಸಂಘದ ಆಡಳಿತಕಾರ್ಯ ಇತರ ಸಂಘಗಳ ಆಡಳಿತದಷ್ಟು ಸುಲಭವಲ್ಲ.

ವಿಧಗಳು : ವಸತಿ ಸೌಕರ್ಯ ಕಲ್ಪಿಸುವ ಕಾರ್ಯ ಯೋಜನೆಯು ನಾಲ್ಕು ವಿಧಗಳದ್ದಾಗಿದೆ. ಅವುಗಳೆಂದರೆ -

* ಅಲ್ಪಾದಾಯ ವರ್ಗದವರ ಗೃಹ ನಿರ್ಮಾಣ
* ಮಧ್ಯಮ ಆದಾಯ ವರ್ಗದವರ ಗೃಹ ನಿರ್ಮಾಣ
* ಕೈಗಾರಿಕಾ ಕಾರ್ಮಿಕರ ಗೃಹ ನಿರ್ಮಾಣ
* ಗ್ರಾಮೀಣ ಪ್ರದೇಶದ ಗೃಹ ನಿರ್ಮಾಣ

ಗೃಹ ನಿರ್ಮಾಣದ ಸಾಲದ ಪ್ರಮಾಣ, ಬಡ್ಡಿದರ, ಸಾಲ ತೀರುವೆ ಅವಧಿ ಮತ್ತು ವಿಧಾನ - ಎಲ್ಲವೂ ಒಂದೊಂದು ದೇಶದಲ್ಲಿ ಒಂದೊಂದು ರೀತಿಯಾಗಿರುವುದು ಕಂಡುಬರುತ್ತದೆ. ಉದಾ : ನೆದರ್‌ಲೆಂಡಿನಲ್ಲಿ ಮನೆಕಟ್ಟುವವರು ಪೂರ್ತಿಹಣವನ್ನು ಸಾಲರೂಪದಲ್ಲಿಯೇ ಪಡೆಯಬಹುದು. ಭಾರತದಲ್ಲಿ ಅಲ್ಪಾದಾಯವರ್ಗ ಮತ್ತು ಮಧ್ಯಮಾದಾಯ ವರ್ಗದವರು ಶೇಕಡಾ ೨೦ರಷ್ಟು, ಕಾರ್ಮಿಕರು ಶೇಕಡಾ ೧೦ರಷ್ಟು, ಗ್ರಾಮೀಣ ಜನರು ಶೇ. ೩೦ರಷ್ಟು ಹಣವನ್ನು ಮೊದಲು ಕೂಡಿಸಬೇಕು. ನಂತರ ಉಳಿದ ಹಣವನ್ನು ಸಾಲವಾಗಿ ಪಡೆಯಬಹುದು.

V. ನೇಯ್ಗೆಯವರ ಸಹಕಾರ ಸಂಘಗಳು.

ಕೈಮಗ್ಗದ ಉದ್ಯಮವು ಭಾರತದ ಆರ್ಥಿಕತೆಯಲ್ಲಿ ಪ್ರಮುಖವಾದ ಸ್ಥಾನವನ್ನು ಪಡೆದುಕೊಂಡಿದೆ. ಕೈಮಗ್ಗ ಉದ್ಯಮಿಗಳ ಯೋಗಕ್ಷೇಮವನ್ನು ಕಾಪಾಡುವುದು ಈ ಸಂಘಗಳ ಮುಖ್ಯ ಉದ್ದೇಶವಾಗಿರುತ್ತದೆ. ಈ ಸಹಕಾರ ಸಂಘಗಳಲ್ಲಿ ಮುಖ್ಯವಾಗಿ

ಮೂರು ವಿಧಗಳಿವೆ. ಅವುಗಳೆಂದರೆ -

* ಸದಸ್ಯರು ವೈಯಕ್ತಿಕವಾಗಿ ತಮ್ಮ ತಮ್ಮ ನೇಯ್ಗೆ ಕಾರ್ಯವನ್ನು ನಡೆಸಲು ಅನುಕೂಲವನ್ನು ಒದಗಿಸುವ ಸಂಘಗಳು.
* ಸದಸ್ಯರು ಒಟ್ಟಾಗಿ ಸೇರಿ ಸಂಘದ ಮೂಲಕ ನೇಯ್ಗೆ ಕಾರ್ಯವನ್ನು ನಡೆಸುವ ಸಂಘಗಳು.
* ಸಗಟು ಲೆಕ್ಕದಲ್ಲಿ ಮಾಲನ್ನು ಗಿರಣಿಗಳಿಂದ ಕೊಂಡು ಸದಸ್ಯರಿಗೆ ಹಂಚುವುದು, ಉದ್ಯಮದ ಅವಶ್ಯಕತೆಗಳಿಗಾಗಿ ಅಲ್ಪಾವಧಿ ಮುಂಗಡಗಳನ್ನು ಕೊಡುವುದು, ತಾಂತ್ರಿಕ ಸೇವೆಗಳನ್ನು ಒದಗಿಸುವುದು ಮತ್ತು ನೇಯ್ದ ಬಟ್ಟೆಗಳನ್ನು ಮಾರುವುದು.

ಕೇಂದ್ರ ಬ್ಯಾಂಕು, ಸಹಕಾರ ಮತ್ತು ಅಖಿಲಭಾರತ ಕೈಮಗ್ಗ ಮಂಡಳಿ ನೇಯ್ಗೆಯವರ ಸಂಘಗಳಿಗೆ ಅನೇಕ ವಿಧದಲ್ಲಿ ಸಹಾಯ ಮಾಡುತ್ತಿವೆ. ರಿಸರ್ವ್ ಬ್ಯಾಂಕು, ಸಹಕಾರಿ ಬ್ಯಾಂಕುಗಳು ಮತ್ತು ಕೈಗಾರಿಕಾ ಬ್ಯಾಂಕುಗಳ ಮೂಲಕ ಸಾಲ ಹಣವನ್ನು ನಿಯಮಿತ ಮಿತಿಗಳಿಗೆ ಒಳಪಟ್ಟು ಒದಗಿಸುತ್ತವೆ. ಸರ್ಕಾರದ ಸಹಾಯ ಅಖಿಲ ಭಾರತ ಕೈಮಗ್ಗ ಮಂಡಳಿಯ ಮೂಲಕ ನೇಯ್ಗೆಯವರ ಸಂಘಗಳಿಗೆ ದೊರೆಯುತ್ತಿದೆ. ಷೇರು ಧನ, ಸಾಲ ಹಣ, ತಾಂತ್ರಿಕ ಸಹಾಯ, ಮಾರುಕಟ್ಟೆ ಬೆಂಬಲಕ್ಕೆ ಸರ್ಕಾರ ಈ ಸಂಘಗಳಿಗೆ ಸಹಾಯ ಮಾಡುತ್ತದೆ. ಆದರೆ ವಾಸ್ತವವಾಗಿ ಹೆಚ್ಚು ಶಕ್ತಿ ಮಗ್ಗಗಳು ಸಹಕಾರಿ ವಲಯದಲ್ಲಿ ಸ್ಥಾಪನೆಯಾಗಿಲ್ಲ.

VI. ಕಂಟ್ರಾಕ್ಟು ಸಹಕಾರ ಸಂಘಗಳು.

ನಿರ್ಮಾಣಕಾರ್ಯಕ್ಕಾಗಿ ಕಾರ್ಮಿಕ ಕಂಟ್ರಾಕ್ಟು ಸಹಕಾರ ಸಂಘಗಳು ಅಸ್ತಿತ್ವದಲ್ಲಿವೆ. ರಸ್ತೆ, ನಾಲೆ, ನೀರಾವರಿ, ಕಟ್ಟಡಗಳು ಮುಂತಾದ ವಿವಿಧ ನಿರ್ಮಾಣ ಕಾರ್ಯಗಳ ನಿರ್ವಹಣೆಯಲ್ಲಿ ಸಾಮಾನ್ಯವಾಗಿ ಕಂಟ್ರಾಕ್ಟುದಾರರ ಪಾತ್ರ ಮುಖ್ಯವಾದುದಾಗಿದೆ. ವಾಸ್ತವವಾಗಿ ಈ ಕಾರ್ಯಗಳನ್ನು ಮಾಡುವ ಕಾರ್ಮಿಕರು ಸಹಕಾರ ಸಂಘಗಳನ್ನು ಸ್ಥಾಪಿಸಿಕೊಂಡು ಕಂಟ್ರಾಕ್ಟರುಗಳ ಕೆಲಸವನ್ನು ಈ ಸಂಘಗಳು ಮಾಡುವಂತಾದರೆ ಅನೇಕ ಪ್ರಯೋಜನಗಳು ಲಭಿಸುತ್ತವೆ. ಕಂಟ್ರಾಕ್ಟರುಗಳು ಕಾರ್ಮಿಕರನ್ನು ಶೋಷಣೆ ಮಾಡುವ ಸಂಭವವಿರುವುದಿಲ್ಲ. ಕಾರ್ಮಿಕರು ತಮಗೆ ಸಲ್ಲಬೇಕಾದ ಕೂಲಿಯನ್ನು

ಪಡೆಯಬಹುದು. ಕಾರ್ಯಾಡಳಿತದಲ್ಲಿ ಭಾಗವಹಿಸುವವರೂ ತಾವೇ ಎಂಬ ಭಾವನೆಯು ಕಾರ್ಮಿಕರಲ್ಲಿ ಇರುವದರಿಂದ ಅವರು ಹೆಚ್ಚು ಶ್ರದ್ಧೆಯಿಂದ ಕೆಲಸ ಮಾಡುವ ಪ್ರವೃತ್ತಿ ಇರುತ್ತದೆ. ಕಂಟ್ರಾಕ್ಟರುಗಳ ಮೂಲಕ ಯಾವುದೇ ನಿರ್ಮಾಣ ಕಾರ್ಯ ಮಾಡಿಸುವುದರಿಂದ ತಗಲುವ ವೆಚ್ಚಕ್ಕಿಂತ ಕಾರ್ಮಿಕ ಸಹಕಾರ ಸಂಘಗಳ ಮೂಲಕ ಅದನ್ನು ಮಾಡುವುದರಿಂದ ವೆಚ್ಚ ಕಡಿಮೆಯಾಗುತ್ತದೆ. ಸಹಕಾರ ಸಂಘಗಳ ಮೂಲಕ ಕೈಗೊಳ್ಳುವ ಕಾರ್ಯಾಚರಣೆಯಿಂದ ಬರುವ ಲಾಭದ ಪ್ರಯೋಜನ ಕಾರ್ಮಿಕರಿಗೆ ದೊರೆಯುವುದು. ಹೀಗೆ ನಿರ್ಮಾಣಕಾರ್ಯಕ್ಕಾಗಿ ಕಾರ್ಮಿಕರ ಸಹಕಾರ ಸಂಘಗಳನ್ನು ಬೆಳೆಸುವುದು ಅನೇಕ ರೀತಿಯಲ್ಲಿ ಪ್ರಯೋಜನಕರವಾಗಿದೆ.

ಕಾರ್ಮಿಕ ಕಂಟ್ರಾಕ್ಟು ಸಹಕಾರ ಸಂಘಗಳನ್ನು ಆಯಾ ಪ್ರದೇಶಗಳಲ್ಲಿರುವ ಶಿಕ್ಷಿತ ಹಾಗೂ ಅಶಿಕ್ಷಿತ ಕಾರ್ಮಿಕರು ಸೇರಿಕೊಂಡು ಸ್ಥಾಪಿಸುತ್ತಾರೆ. ೧೯೬೨ರಲ್ಲಿ ನಾಗಪುರದಲ್ಲಿ ನಡೆದ ಕಾರ್ಮಿಕ ಕಂಟ್ರಾಕ್ಟು ಸಹಕಾರ ಸಂಘಗಳನ್ನು ಕುರಿತ ಅಧ್ಯಯನಗೋಷ್ಠಿಯು ಈ ಬಗ್ಗೆ ಕೆಲವು ಉಪಯುಕ್ತ ಸಲಹೆಗಳನ್ನು ನೀಡಿತು. ಪ್ರಾಥಮಿಕಸಂಘವು ಕೆಲವು ಹಳ್ಳಿಗಳನ್ನು ಒಳಗೊಂಡ ಸುಮಾರು ೫೦ ರಿಂದ ೨೦೦ರಷ್ಟು ಕಾರ್ಮಿಕ ಸದಸ್ಯರನ್ನು ಹೊಂದಿರಬೇಕು ಮತ್ತು ಲೋಕೋಪಯೋಗಿ ಶಾಖೆಯ ಪರವಾಗಿ ಕಳೆದ ಮೂರು ವರ್ಷಗಳಲ್ಲಿ ಕಾರ್ಯಗಳನ್ನು ಕೈಗೊಂಡಿದ್ದ ಕಂಟ್ರಾಕ್ಟರುಗಳನ್ನು ಸಂಘಕ್ಕೆ ಸೇರಿಸಕೂಡದು ಎಂಬುದು ಈ ಗೋಷ್ಠಿಯ ಮುಖ್ಯ ಸಲಹೆಗಳಾಗಿದ್ದವು.

VII. ಬುಡಕಟ್ಟು ಜನಾಂಗದ ಸಹಕಾರ ಸಂಘಗಳು.

ಬುಡಕಟ್ಟು ಜನಾಂಗಗಳ ಆರ್ಥಿಕ ಅಭಿವೃದ್ಧಿಗಾಗಿ ಭಾರತ ಸರ್ಕಾರ ವಿಶೇಷ ಕ್ರಮಗಳನ್ನು ಕೈಗೊಳ್ಳುತ್ತಿದೆ. ಈ ಸಂಬಂಧದಲ್ಲಿ ೧೯೭೦-೭೧ರಿಂದೀಚೆಗೆ ಕೆಲವು ಆಯ್ದ ಜಿಲ್ಲೆಗಳಲ್ಲಿ ಸಾಂದ್ರಕಾರ್ಯಕ್ರಮಗಳನ್ನು ಒಳಗೊಂಡ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಬುಡಕಟ್ಟು ಜನಾಂಗಗಳಲ್ಲಿ ಸಹಕಾರವನ್ನು ಬೆಳೆಸುವುದು ಈ ಯೋಜನೆಗಳ ಒಂದು ಮುಖ್ಯ ಅಂಶವಾಗಿದೆ. ಆಂಧ್ರ ಪ್ರದೇಶ, ಒರಿಸ್ಸ, ಬಿಹಾರ ಮತ್ತು ಮಧ್ಯಪ್ರದೇಶ ರಾಜ್ಯಗಳ ಎಂಟು ಜಿಲ್ಲೆಗಳಿಗೆ ಈ ಯೋಜನೆಗಳು ಅನ್ವಯವಾಗುವುವು. ೧೯೭೨-೭೩ ರಲ್ಲಿ ಬುಡಕಟ್ಟು ಪ್ರದೇಶಗಳ ಸಹಕಾರ ಸಂಘಗಳ ಕಾರ್ಯಾಚರಣೆಗಳನ್ನು ಪರಿಶೀಲಿಸುವ ಸಲುವಾಗಿ ಭಾರತ ಸರ್ಕಾರದ ಕೃಷಿ ಸಚಿವಾಲಯವು ಅಧ್ಯಯನ

ತಂಡವೊಂದನ್ನು ನೇಮಿಸಿತು. ಸಾಲಹಣ ಹಾಗೂ ಇತರ ಅವಶ್ಯಕ ಸರಕುಸೇವೆಗಳನ್ನು ಬುಡಕಟ್ಟು ಜನಾಂಗದವರಿಗೆ ನೀಡಲು ಸಂಘಟಿತ ಸಹಕಾರ ಸಂಘಗಳು ಏರ್ಪಾಡಾಗಬೇಕೆಂಬ ಸಲಹೆಯನ್ನು ಸರ್ಕಾರವು ಒಪ್ಪಿ ಈ ಬಗ್ಗೆ ಸೂಕ್ತವ್ಯವಸ್ಥೆಯನ್ನು ಮಾಡಲಾಗಿದೆ.

ಬುಡಕಟ್ಟು ಜನಾಂಗದ ಅಭಿವೃದ್ಧಿ ಸಹಕಾರ ನಿಗಮಗಳು ಮಧ್ಯಪ್ರದೇಶ, ಬಿಹಾರ, ಒರಿಸ್ಸಾ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳಲ್ಲಿ ಸ್ಥಾಪಿಸಲ್ಪಟ್ಟವು, ನಂತರ ಇತರ ಆಯ್ದ ರಾಜ್ಯಗಳಲ್ಲು ಸಹಾ ನಿಗಮಗಳು ಸ್ಥಾಪಿಸಲ್ಪಟ್ಟಿವೆ. ಇವುಗಳು ಆಯಾ ರಾಜ್ಯಗಳ ಪ್ರಾಥಮಿಕ ಬುಡಕಟ್ಟು ಸಹಕಾರ ಸಂಘಗಳ ಅಪೆಕ್ಸ್ ಸಂಸ್ಥೆಗಳಾಗಿರುತ್ತವೆ. ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮವು ಗಿರಿಜನರ ಹಾಗೂ ಬುಡಕಟ್ಟು ಜನಾಂಗಗಳ ಸಹಕಾರ ಸಂಘಗಳನ್ನು ಬಲಗೊಳಿಸಲು ಮತ್ತು ಇವುಗಳಿಗೆ ತಾಂತ್ರಿಕ ಸಿಬ್ಬಂದಿ ಒದಗಿಸಲು ಧನಸಹಾಯ ಮಾಡುತ್ತಿದೆ. ಒಟ್ಟಿನಲ್ಲಿ ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದಿರುವ ಬುಡಕಟ್ಟು ಜನಾಂಗಗಳೊಳಗೆ ಸಹಕಾರ ಮಾರ್ಗವನ್ನು ಹರಡಲು ಸರ್ಕಾರದ ಆಶ್ರಯದಲ್ಲಿ ವಿಶೇಷ ಪ್ರಯತ್ನಗಳು ನಡೆಯುತ್ತಿವೆ. ಕರ್ನಾಟಕದ ರಾಜ್ಯದಲ್ಲೂ ಸಹ ಬುಡಕಟ್ಟು ಜನರ ಸಹಕಾರ ಸಂಘಗಳು ಕಂಡುಬರುತ್ತವೆ.

VIII. ಗ್ರಾಮೀಣ ವಿದ್ಯುತ್ ಸಹಕಾರ ಸಂಘಗಳು :-

ಕೃಷಿ ಉದ್ಯಮದ ಅಭಿವೃದ್ಧಿಗೆ ಅಗತ್ಯವಾದ ವಿದ್ಯುಚ್ಛಕ್ತಿ ಮತ್ತು ನೀರಾವರಿ ಸೌಕರ್ಯ ಕಲ್ಪಿಸಲು ವಿಶಿಷ್ಟ ರೀತಿಯ ಸಹಕಾರ ಸಂಘಗಳು ಏರ್ಪಟ್ಟಿರುವುದು ಕಂಡುಬರುತ್ತದೆ. ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರ ಸಂಘಗಳ ಸ್ಥಾಪನೆ ಇತ್ತೀಚಿನ ಮುಖ್ಯವಾದ ಬೆಳವಣಿಗೆಯಾಗಿದೆ. ಒಂದು ಸಮೀಕ್ಷಾ ಸಮಿತಿಯ ಸಲಹೆಯಂತೆ ರಚಿಸಲಾದ ಗ್ರಾಮೀಣ ವಿದ್ಯುತ್ ಪ್ರಸರಣ ನಿಗಮವು ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರ ಸಂಘಗಳಿಗೆ ಧನ ಸಹಾಯ ನೀಡುವ ಹಾಗೂ ಅವುಗಳನ್ನು ವಿಸ್ತರಿಸುವ ಹೊಣೆ ಹೊತ್ತಿರುತ್ತದೆ. ಪ್ರಾಯೋಗಿಕವಾಗಿ ಪ್ರಪ್ರಥಮಬಾರಿಗೆ ಐದು ಗ್ರಾಮೀಣ ವಿದ್ಯುಚ್ಛಕ್ತಿ ಸಹಕಾರ ಸಂಘಗಳು ಅಸ್ತಿತ್ವಕ್ಕೆ ಬಂದವು. ಕರ್ನಾಟಕ, ಆಂಧ್ರಪ್ರದೇಶ, ಗುಜರಾತ್, ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ ಒಂದೊಂದರಂತೆ ಸ್ಥಾಪಿಸಲ್ಪಟ್ಟವು. ಈ ಸಂಘಗಳು ೧೯೭೦ ಮತ್ತು ೧೯೭೧ರ ಅವಧಿಯಲ್ಲಿ ಕಾರ್ಯಾಚರಣೆಯನ್ನು ಆರಂಭಿಸಿದವು. ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ವಿತರಣೆ ನೋಡಿಕೊಳ್ಳುವುದು

ಮತ್ತು ಮುಖ್ಯವಾಗಿ ಪಂಪುಸೆಟ್‌ಗಳಿಗೆ ಅವಶ್ಯಕವಾದ ವಿದ್ಯುತ್ ಒದಗಿಸುವುದು ಈ ಸಂಘಗಳ ಕಾರ್ಯವಾಗಿದೆ.

ಪ್ರಾಯೋಗಿಕವಾಗಿ ಪ್ರಾರಂಭಿಸಿದ ಈ ಐದು ಸಂಘಗಳ ಪ್ರಗತಿಯನ್ನು, ಅನುಭವಗಳನ್ನು ಗಮನಿಸಿ ಹೊಸ ಗ್ರಾಮೀಣ ವಿದ್ಯುತ್ ಸಂಘಗಳ ಸ್ಥಾಪನೆ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡುವ ಸಲುವಾಗಿ ನಂತರ ಗ್ರಾಮೀಣ ವಿದ್ಯುತ್ ಪ್ರಸರಣ ನಿಗಮವನ್ನು ಯೋಜನಾ ಸಮಿತಿಯ ಶ್ರೀಯುತ ಎಸ್.ಎಸ್. ಪೂರಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಸ್ಥಾಪಿಸಲಾಯಿತು. ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಕೃಷಿ ಉತ್ಪಾದನೆಗೆ ವ್ಯಾಪಕವಾಗಿ ಸಹಾಯವಾಗುವಂತೆ ಹೆಚ್ಚು ವಿದ್ಯುತ್ ಸಹಕಾರ ಸಂಘಗಳನ್ನು ಸ್ಥಾಪಿಸಬೇಕೆಂದು ಸಲಹೆ ಮಾಡಿದ್ದಲ್ಲದೇ ಅವುಗಳನ್ನು ಶಕ್ತಿಯುತ ಘಟಕಗಳನ್ನಾಗಿ ಮಾಡಲು ಸೂಕ್ತ ಮಾರ್ಗೋಪಾಯಗಳನ್ನೂ ಸೂಚಿಸಿದೆ. ಕೃಷಿ ವಿಧಾನಗಳನ್ನು ಆಧುನೀಕರಣಗೊಳಿಸುವಲ್ಲಿ ವಿದ್ಯುಚ್ಛಕ್ತಿಯ ಪಾತ್ರ ಪ್ರಮುಖವಾಗಿರುವುದರಿಂದ ಗ್ರಾಮೀಣ ವಿದ್ಯುತ್ ಸಂಘಗಳು ಹೆಚ್ಚು ವ್ಯಾಪಕವಾದ ಪಾತ್ರವನ್ನೂ ವಹಿಸುತ್ತವೆ.

IX. ಸಹಕಾರ ಸಾರಿಗೆ ಸಂಘ :-

ಸಾರಿಗೆ ಸಹಕಾರ ಸಂಘಗಳಲ್ಲಿ ಮುಖ್ಯವಾಗಿ ಎರಡು ವಿಧಗಳಿವೆ. ಅವುಗಳೆಂದರೆ -

* ಸಾರಿಗೆ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳದ್ದು.
* ನಿವೃತ್ತಿ ಸೈನ್ಯದವರಿಗಾಗಿ ಸ್ಥಾಪಿತವಾದದ್ದು.

ಆಂಧ್ರಪ್ರದೇಶದಲ್ಲಿ ಈ ಎರಡೂ ಬಗೆಯ ಸಂಘಗಳೂ ಅಸ್ತಿತ್ವದಲ್ಲಿವೆ. ಇವುಗಳಿಗೆ ಯಾವ ರೀತಿಯ ಮಾನ್ಯತೆ, ರಿಯಾಯಿತಿಯೂ ದೊರೆತಿಲ್ಲ. ರಿಕ್ಷಾ ಎಳೆಯುವವರಿಗೆ ಸಹಾಯ ನೀಡುವ ಉದ್ದೇಶದಿಂದ ೧೯೬೨-೬೩ರಲ್ಲಿ ಕೆಲವು ಸಹಕಾರ ಸಂಘಗಳು ಸ್ಥಾಪಿತವಾದವು. ಸಹಕಾರ ಇದಕ್ಕೆ ಹಣಕಾಸಿನ ಸಹಾಯವನ್ನು ಒದಗಿಸಿತು. ಇವುಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದರಿಂದ ಇವುಗಳನ್ನು ಮುಂದುವರಿಸಲಾಯಿತು. ಸಹಕಾರ ಇಲಾಖೆಯು ಈ ರೀತಿಯ ಸಹಕಾರ ಸಂಘಗಳ ಲೆಕ್ಕಪತ್ರಗಳನ್ನು ಸರಿಯಾಗಿಡಲು ಸಹಾಯ ಮಾಡುವ ಸಲುವಾಗಿ ಒಬ್ಬ ಜೂನಿಯರ್

ಇನ್‌ಸ್ಪೆಕ್ಟರ್‌ರವರ ಸೇವೆಯನ್ನು ಎರವಲು ಕೊಟ್ಟಿದೆ. ಗುಜರಾತ್ ರಾಜ್ಯದಲ್ಲಿ ಈ ರೀತಿಯ ಸಹಕಾರ ಸಂಘಗಳು ಕಂಡಬರುತ್ತವೆ. ಸಾರಿಗ ರಾಷ್ಟ್ರೀಕರಣದಿಂದ ಅಸ್ಸಾಂ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಈ ರೀತಿಯ ಸಹಕಾರ ಸಂಘಗಳಿಗೆ ಹೆಚ್ಚು ದ್ರವ್ಯ ಸಹಾಯ ದೊರೆಯಲು ಸಾಧ್ಯವಾಗಲಿಲ್ಲ.

X. ಮಹಿಳಾ ಸಹಕಾರ ಸಂಘ :-

ನಮ್ಮ ದೇಶದ ಅನೇಕ ರಾಜ್ಯಗಳಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ವಿವಿಧ ಸಹಕಾರ ಸಂಘಗಳು ಸ್ಥಾಪಿತವಾಗಿವೆ. ಅಸ್ಸಾಂ ರಾಜ್ಯದಲ್ಲಿ ಮಹಿಳಾ ಸದಸ್ಯರ ನೇಯ್ಗೆ ಸಹಕಾರ ಸಂಘಗಳು ಮೊದಲು ಪ್ರಾರಂಭವಾದವು ಎಂದು ಹೇಳಲಾಗುತ್ತಿದೆ. ಜೊತೆಗೆ ಮಹಿಳಾ ಕೈಗಾರಿಕಾ ಸಹಕಾರ ಸಂಘಗಳು ಮತ್ತು ಸಾಲ ಕೊಡುವ ಮಹಿಳಾ ಸಹಕಾರ ಸಂಘಗಳೂ ಅಸ್ತಿತ್ವದಲ್ಲಿದೆ. ಬಿಹಾರಿನಲ್ಲಿ ಮಹಿಳಾ ಕೈಗಾರಿಕಾ ಸಂಘಗಳು ಹೊಲಿಗೆ, ಕಸೂತಿ, ನೂಲುವುದು, ಜರತಾರಿ ಕೆಲಸಗಳನ್ನು ಮಾಡುತ್ತಿವೆ. ಗುಜರಾತ್ ರಾಜ್ಯದಲ್ಲಿ ಮಹಿಳಾ ಸಹಕಾರ ಸಂಘಗಳನ್ನು ಕೈಗಾರಿಕಾ ಸಂಘಗಳಂತೆ ಭಾವಿಸಲಾಗಿದೆ. ಇವುಗಳಿಗೆ ಯಂತ್ರೋಪಕರಣಗಳನ್ನು ಕೊಳ್ಳಲು ಸಾಲವನ್ನು ರಿಯಾಯಿತಿ ಬಡ್ಡಿದರದಲ್ಲಿ ಕೊಡಲಾಗುತ್ತಿದೆ. ಮಹಿಳಾ ಸಹಕಾರ ಸಂಘಗಳ ಮೇಲ್ವಿಚಾರಣೆ ನಡೆಸಿ, ಅಭಿವೃದ್ಧಿ ಪಡಿಸುವುದಕ್ಕಾಗಿ ಸಲಹೆ ನೀಡಲು ಮೂರು ಮಂದಿ ಮಹಿಳಾ ಅಧಿಕಾರಿಗಳನ್ನು ನೇಮಿಸಲಾಗಿದೆ. ಈಗ ಪ್ರತಿಯೊಂದು ರಾಜ್ಯದಲ್ಲೂ ಮಹಿಳಾ ಸಹಕಾರ ಸಂಘಗಳ ಚಳುವಳಿ ತೀವ್ರಗತಿಯಲ್ಲಿರುವುದು ಕಂಡುಬರುತ್ತದೆ.

ಕರ್ನಾಟಕದಲ್ಲಿ ಸಹಕಾರ ವಲಯದ ಸಾಲಗಳು :-

ರಾಜ್ಯದಲ್ಲಿ ಸಹಕಾರ ಕೃಷಿ ಪತ್ತಿನ ಮೂರು ಹಂತಗಳ ವ್ಯವಸ್ಥೆಯು ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ಒದಗಿಸುತ್ತದೆ. ಗ್ರಾಮಾಂತರ ಮಟ್ಟದಲ್ಲಿ ೪೫೮೯ ಪ್ರಾಥಮಿಕ ಪತ್ತಿನ ಕೃಷಿ ಸಹಕಾರ ಸಂಘಗಳು, ಜಿಲ್ಲಾ ಮಟ್ಟದಲ್ಲಿ ೨೧ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಪ್ರಾಥಮಿಕ ಪತ್ತಿನ ಕೃಷಿ ಸಹಕಾರ ಸಂಘಗಳಿವೆ. ಈ ಪೈಕಿ ೩೫೧ ಪ್ರಾಥಮಿಕ ಸಹಕಾರ ಸಂಘಗಳು ಅವಸಾನದ ಅಂಚಿನಲ್ಲಿವೆ ಎಂದು ತಿಳಿದುಬಂದಿದೆ. ಮತ್ತು ರಾಜ್ಯ ಮಟ್ಟದಲ್ಲಿ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕುಗಳು ಅಸ್ತಿತ್ವದಲ್ಲಿವೆ. ದೀರ್ಘಾವಧಿ ಸಾಲವನ್ನು ಎರಡು

ಹಂತದ ವ್ಯವಸ್ಥೆಯ ಅಂದರೆ ರಾಜ್ಯ ಮಟ್ಟದಲ್ಲಿ ಕರ್ನಾಟಕ ರಾಜ್ಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು ಮತ್ತು ತಾಲ್ಲೂಕು ಮಟ್ಟದ ೧೭೭ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳು ವಿತರಿಸುತ್ತಿವೆ. ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕು ಮತ್ತು ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಿಗೆ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕು (ನಬಾರ್ಡ್) ಸಾಲದ ಪುನರ್ಧನದ ಸೌಲಭ್ಯವನ್ನು ಒದಗಿಸುತ್ತದೆ.

ಕರ್ನಾಟಕ ರಾಜ್ಯದಲ್ಲಿ ೨೦೦೩-೨೦೦೪ರ ಅವಧಿಯವರೆಗೆ ವಿತರಿಸಲಾದ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲಗಳ ವಿವರಗಳನ್ನು ಈ ಮುಂದಿನ ಪಟ್ಟಿಯಲ್ಲಿ ನಮೂದಿಸಲಾಗಿದೆ.

ಪಟ್ಟಿ - ೧

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಂದ ವಿತರಣೆಯಾದ ಸಾಲಗಳು ೨೦೦೩-೨೦೦೪ ರವರೆಗೆ

(ರೂ. ಕೋಟಿಗಳಲ್ಲಿ)

ಸಾಲದ ವಿಧ	ಗುರಿ	ಸಾಧನೆ
ಅಲ್ಪಾವಧಿ	೧೬೦೫.೫೫	೬೯೩.೮೬
ಮಧ್ಯಮಾವಧಿ	೪೨.೧೦	೧೪.೪೦
ದೀರ್ಘಾವಧಿ	೧೫೦.೦೦	೩.೫.೦೦

ಈ ಮೇಲ್ಕಂಡ ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲ ನೀಡಿಕೆಯ ಪ್ರಗತಿಯು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ ನೀಡಲಾದ ಸಾಲದ ಪ್ರಮಾಣವನ್ನು ಸೂಚಿಸುತ್ತವೆ. ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು ಒಟ್ಟು ೯,೯೩,೬೩೦ ಕಿಸಾನ್ ಕ್ರೆಡಿಟ್ ಕಾರ್ಡುಗಳನ್ನು ೨೧೨೫.೦೪ ಕೋಟಿ ರೂಪಾಯಿಗಳ ಸಾಲಮಿತಿಯನ್ನೊಳಗೊಂಡು ನೀಡಿವೆ.

ಆರ್ಥಿಕ ಮತ್ತು ಸಂಘಟನಾತ್ಮಕ ವ್ಯವಸ್ಥೆಯನ್ನು ಮತ್ತು ಸಹಕಾರ ಸಂಸ್ಥೆಗಳ ಮೂಲನಿಧಿಯನ್ನು ಬಲಪಡಿಸುವ ಪ್ರಕ್ರಿಯೆಯಲ್ಲಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು (ಡಿ.ಸಿ.ಸಿ. ಬ್ಯಾಂಕು) ಮತ್ತು ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕು ಒಂದುಗೂಡಿ ನಬಾರ್ಡ್ ಮಾರ್ಗದರ್ಶನದಂತೆ ಅಭಿವೃದ್ಧಿ ಕ್ರಿಯಾಯೋಜನೆಯನ್ನು (ಡಿ.ಇ.ಪಿ) ಸಿದ್ಧಪಡಿಸಿವೆ. ರಾಜ್ಯದ ಪ್ರಾಥಮಿಕ ಸಹಕಾರಿ ಕೃಷಿ ಪತ್ತಿನ ಸಂಘಗಳು ೧೯೯೫-೯೬ ರಿಂದ ವ್ಯಾಪಾರ ಅಭಿವೃದ್ಧಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವುದು ಒಂದು ಆಶಾದಾಯಕವಾದ ಬೆಳವಣಿಗೆಯಾಗಿದೆ. ಈ ಯೋಜನೆಯಲ್ಲಿ ೨೦೦೩ ರವರೆಗೆ ೪೧೧೦ ಸಹಕಾರ ಸಂಘಗಳು ತೊಡಗಿಸಿಕೊಂಡಿವೆ. ೨೦೦೨-೨೦೦೩ನೇ ಸಾಲಿನಲ್ಲಿ ೪೧೫೨ ಸಹಕಾರ ಸಂಘಗಳು ಒಟ್ಟು ರೂ. ೮೩೯೦.೫೦ ಕೋಟಿ ರೂಪಾಯಿಗಳ ವ್ಯಾಪಾರ ಗುರಿಗೆ ವಿರುದ್ಧವಾಗಿ ರೂ. ೨೩೬೮.೦೦ ಕೋಟಿಗಳ ವ್ಯಾಪಾರಮೊತ್ತವನ್ನು ಸಾಧಿಸಿದ್ದವು. ರಾಜ್ಯ ಸರ್ಕಾರ ೬೪೩ ಸಹಕಾರಿ ಸಂಘಗಳಿಗೆ ಈವರೆಗೆ ಒಟ್ಟು ೩೧೯.೫೦ ಲಕ್ಷ ರೂ.ಗಳನ್ನು ಅನುದಾನ ಬ್ಯಾಂಕಿಂಗ್ ಕೌಂಟರುಗಳು, ತಿಜೋರಿಗಳು ಮುಂತಾದ ಮೂಲಭೂತ ಸೌಕರ್ಯವನ್ನು ಒದಗಿಸುವ ಸಲುವಾಗಿ ಮಂಜೂರು ಮಾಡಲಾಗಿದೆ. ರಾಜ್ಯ ಅಪೆಕ್ಸ್ ಬ್ಯಾಂಕು ಒಟ್ಟು ೬೭೬ ಸಹಕಾರ ಸಂಘಗಳಿಗೆ ೩೩೮.೫೦ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದೆ. ಇದೇ ರೀತಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು ೮೨೩ ಸಹಕಾರ ಸಂಘಗಳಿಗೆ ೩೭೯.೯೧ ಲಕ್ಷ ರೂಪಾಯಿಗಳನ್ನು ಈ ಮೇಲೆ ನಮೂದಿಸಿದ ಉದ್ದೇಶಗಳಿಗಾಗಿ ಮಂಜೂರು ಮಾಡಿದೆ. ೨೦೦೩ ರ ಅವಧಿಯ ಅಂತ್ಯಕ್ಕೆ ೯೫೬.೫೦ ಕೋಟಿ ರೂಪಾಯಿಗಳ ಠೇವಣಿಯನ್ನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳು ಸಂಗ್ರಹಿಸಿವೆ.

ವ್ಯಾಪಾರ ಅಭಿವೃದ್ಧಿಯ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ೪೧೫೨ ಸಹಕಾರ ಸಂಘಗಳು ಸಂಚಿತವಾಗಿ ೨೦೦೩ ಅವಧಿಯಲ್ಲಿ ಒಟ್ಟು ೨೫೪೬ ಕೋಟಿ ರೂಪಾಯಿಗಳ ದುಡಿಯುವ ಬಂಡವಾಳವನ್ನು ಹೊಂದಿದ್ದವು. ಈ ಗುರಿಯನ್ನು ೨೦೦೩-೨೦೦೪ ನೇ ಸಾಲಿನಲ್ಲಿ ೨೯೯೩.೮೦ ಕೋಟಿ ರೂಪಾಯಿಗಳಿಗೆ ಹೆಚ್ಚಿಸುವ ಗುರಿಯನ್ನೂ ಸಹ ಹೊಂದಲಾಗಿತ್ತು. ಈ ಸಹಕಾರಿ ಸಂಘಗಳ ವ್ಯಾಪಾರಿ ಮುಂಗಡಗಳು ಮತ್ತು ಮುಂಗಡೇತರಗಳು ೨೦೦೨-೨೦೦೩ ರಲ್ಲಿ ಕ್ರಮವಾಗಿ ೧೮೨೦.೯೯ ಕೋಟಿ ರೂಪಾಯಿಗಳು ಮತ್ತು ೬೫೩.೦೨ ಕೋಟಿ ರೂಪಾಯಿಗಳಾಗಿವೆ.

ಪಟ್ಟಿ-೨

ವ್ಯಾಪಾರ ಅಭಿವೃದ್ಧಿ ಯೋಜನೆಯಡಿ ೩೦-೦೯-೨೦೦೩ ರಲ್ಲಿದ್ದಂತೆ ಪ್ರಗತಿ

	೨೦೦೨-೨೦೦೩		೨೦೦೩-೨೦೦೪		
	ಗುರಿ	ವ್ಯಾಪಾರ ವಹಿವಾಟು	ಗುರಿ	ಸಾಧನೆ	ಶೇಕಡಾವಾರು ಸಾಧನೆ
ಪತ್ತು	೨೫೧೨.೩೩	೧೭೩೬.೦೯	೨೪೧೭.೮೭	೧೨೫೩.೮೫	೫೨
ಪತ್ತೇತರ	೮೭೭.೮೨	೬೩೨.೧೫	೮೨೫.೧೫	೩೮೦.೮೯	೪೬
ಒಟ್ಟು	೩೩೯೦.೧೫	೨೩೬೮.೨೪	೩೨೪೩೦೦೨	೧೬೩೪.೭೪	೫೦

ರಾಜ್ಯದಲ್ಲಿರುವ ೧೭೭ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮಿಣಾಭಿವೃದ್ಧಿ ಬ್ಯಾಂಕುಗಳು ೨೦೦೨-೨೦೦೩ ನೇ ಸಾಲಿನ ಅಂತ್ಯಕ್ಕೆ ರೂ. ೮೩.೮೭ ಕೋಟಿಗಳ ಷೇರು ಬಂಡವಾಳವನ್ನು ಹೊಂದಿದ್ದವು. ಸರ್ಕಾರ ರೈತರು ಪಡೆಯುವ ಕೃಷಿ ಮತ್ತು ಕೃಷಿ ಸಂಬಂಧಿತ ಸಾಲಗಳಿಗೆ ಸಂಪೂರ್ಣ ಸ್ಟಾಂಪ್ ವಿನಾಯಿತಿಯನ್ನು ೨೦೦೭ರವರೆಗೆ ನೀಡಿದೆ.

ಕರ್ನಾಟಕ ರಾಜ್ಯದಲ್ಲಿ ಮಾರ್ಚ್ ೨೦೦೩ ರಲ್ಲಿದ್ದಂತೆ ೩೦೧ ನಗರ ಪ್ರದೇಶ ಸಹಕಾರಿ ಬ್ಯಾಂಕುಗಳು ೬೩೭ ಶಾಖೆಗಳ ಮೂಲಕ ಕಾರ್ಯ ನಿರ್ವಹಣೆ ಮಾಡುತ್ತಿವೆ. ೨೦೦೩-೨೦೦೪ನೇ ಅವಧಿಯಲ್ಲಿ ಸಾಲ ಮತ್ತು ಸಾಲೇತರ ಕ್ಷೇತ್ರದಲ್ಲಿ ಒಟ್ಟು ರೂ.೧೫೦ ಕೋಟಿಗಳ ಸಾಲವನ್ನು ವಿತರಿಸುವ ಗುರಿಯನ್ನು ಈ ಬ್ಯಾಂಕುಗಳು ಹೊಂದಿವೆ. ಇದಕ್ಕೆ ಎದುರಾಗಿ ಈ ಬ್ಯಾಂಕುಗಳು ೨೦೦೩ ರ ನವೆಂಬರ್ ಅಂತ್ಯದವರೆಗೆ ರೂ.೩೦.೦೭ ಕೋಟಿ ಸಾಲವನ್ನು ವಿತರಿಸಿವೆ.

ಉಪಸಂಹಾರ :

ಭಾರತದಲ್ಲಿ ಸಹಕಾರ ಚಳುವಳಿಯು, ಸಂಖ್ಯೆ, ಸದಸ್ಯತ್ವ, ಷೇರು ಬಂಡವಾಳ ಮತ್ತು ಕಾರ್ಯಗತ ಬಂಡವಾಳದಲ್ಲಿ ಒಂದು ಗಣನೀಯವಾದ ಪ್ರಗತಿಯನ್ನು ಪಂಚವಾರ್ಷಿಕ ಯೋಜನಾವಧಿಯಲ್ಲಿ ಮಾಡಿದೆ ಎಂದು ಹೇಳಬಹುದು. ಸಹಕಾರ

ಚಳುವಳಿಯ ಪ್ರಗತಿಯು ಮುಖ್ಯವಾಗಿ ಕೃಷಿ ಸಾಲ, ಮಾರುಕಟ್ಟೆ ಮತ್ತು ಯಂತ್ರೋಪಕರಣಗಳ ಪೂರೈಕೆಯಲ್ಲಿ ಗಮನಾರ್ಹವಾದ ಸಾಧನೆಗೈದಿರುವುದು ಕಂಡುಬರುತ್ತದೆ. ಭಾರತದಲ್ಲಿ ಪ್ರಾಥಮಿಕ ಕೃಷಿ ಸಹಕಾರ ಸಂಘಗಳು ಶೇ. ೯೮% ರಷ್ಟು ಗ್ರಾಮಗಳನ್ನು ತಲುಪಿದೆ ಮತ್ತು ಶೇ. ೫೮ ರಷ್ಟು ಕೃಷಿ ರೈತರಿಗೆ ಅಲ್ಪಾವಧಿ ಸಾಲ ಮತ್ತು ಮಧ್ಯಮಾವಧಿ ಸಾಲವನ್ನು ಒದಗಿಸಿವೆ. ಹಾಗೆಯೇ ಕೃಷಿಯುತ್ಪನ್ನಗಳಿಗೆ ಮೌಲ್ಯವೂ ಕೂಡಾ ಸಹಕಾರ ಸಂಘಗಳಿಂದ ಅತ್ಯಧಿಕವಾಗಿದೆ. ಸಹಕಾರ ಸಂಘಗಳಿಂದ ವಿತರಿಸಲ್ಪಡುವ ರಾಸಾಯನಿಕ ಗೊಬ್ಬರಗಳು ಹಾಗೂ ಬೀಜಗಳು ಕೂಡಾ ಗಮನಾರ್ಹವಾದ ರೀತಿಯಲ್ಲಿ ಏರಿಕೆಯಾಗಿರುವ ನಿದರ್ಶನಗಳೂ ಇವೆ. ಭಾರತದಲ್ಲಿ ಸಹಕಾರವು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಅಭಿವೃದ್ಧಿಯ ಸೂಚಕವಾಗಿ, ಏಜೆಂಟಾಗಿ ಕಂಡುಬರುತ್ತಿದೆ. ಸಹಕಾರವು ನಮ್ಮ ದೇಶದ ರಾಷ್ಟ್ರೀಯ ಆರ್ಥಿಕತೆಯಲ್ಲಿಯೂ ಸಹ ಒಂದು ಪ್ರಮುಖವಾದ ವಲಯವಾಗಿ ಪರಿಣಮಿಸಿದೆ ಎಂದು ಹೇಳಿದರೆ ಬಹುಶಃ ತಪ್ಪಾಗಲಾರದು. ಭಾರತದ ಸಹಕಾರ ಚಳುವಳಿಯು ಒಂದು ಸ್ವಯಂ ಪ್ರಜಾ ಚಳುವಳಿಯಾಗುವಲ್ಲಿ ಪ್ರಯತ್ನಗಳೂ ಅವಶ್ಯಕವಾಗಿವೆ. ಇದಕ್ಕಾಗಿ ಸರ್ಕಾರದ ನೀತಿ ಮತ್ತು ವ್ಯವಸ್ಥಾಪನಾ ಬೆಂಬಲ ಅಗತ್ಯವಾಗಿ ಬೇಕಾಗಿದೆ. ಹೀಗಾದಲ್ಲಿ ಭಾರತದ ಸಹಕಾರ ಚಳುವಳಿ ಜನಾಂದೋಲನವಾಗಿ ಬೆಳವಣಿಗೆಯಾಗುವುದರಲ್ಲಿ ಯಾವುದೇ ಸಂದೇಹವಿಲ್ಲ.

ಗ್ರಂಥ ಋಣ

1. **Mathur B.S - Co-operation in India**

2. **Kamat G.S - Managing Co-operative Marketing**

3. **Indian Co-operation Journals, Various Issues.**

* * * * *

ಶುಭವಾಗಲಿ

ಸಹಕಾರ ತತ್ತ್ವದ ಭದ್ರ ಬುನಾದಿಯ ಮೇಲೆಮಾತ್ರ ಸಮಾಜದ ಸರ್ವತೋಮುಖ ಬೆಳವಣಿಗೆ ಸಾಧ್ಯ ಎನ್ನುವ ಹಂತಕ್ಕೆ ಆಧುನಿಕ ಭಾರತ ಬಂದು ನಿಂತಿದ್ದು, ಅದು ಪ್ರಗತಿಯತ್ತ ದಾಪುಗಾಲು ಹಾಕಬೇಕಾದರೆ ಸಹಕಾರ ವಲಯವನ್ನೇ ಆಶ್ರಯಿಸಬೇಕಾಗಿದೆ ; ಅವಲಂಬಿಸಬೇಕಿದೆ ಎನ್ನುವ ಅನಿವಾರ್ಯ ಸಂದರ್ಭದ ಚಿತ್ರಣನೀಡಲು ಈ ಕೃತಿಯಲ್ಲಿ ಹತ್ತು ಲೇಖನಗಳು ಶ್ರಮಿಸುತ್ತಿವೆ. ಸಹಕಾರ ಮನೋಭಾವ ಎಲ್ಲ ರಂಗದಲ್ಲೂ ಅತ್ಯಗತ್ಯವಾಗಿದೆ ಎಂಬುದು ಕೃತಿಯ ಆಶಯವಾಗಿದೆ.

ಸಹಕಾರ ಇಂದಿನ ಮೂಲಮಂತ್ರ.

ಧರ್ಮದರ್ಶಿ ಹರಿಕೃಷ್ಣ ಪುನರೂರು
ಅಧ್ಯಕ್ಷರು